# ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ

21ನೇ

# ವಾರ್ಷಿಕ ಆಡಳಿತ ವರದಿ

## 2020-21









**ಗೌರವಾನ್ವಿತ ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಗಳು ಕರ್ನಾಟಕ ಸರ್ಕಾರ ರವರು ಪಾರ್ಸಲ್ ಕೊರಿಯರ್ ಸರ್ವೀಸ್ "ನಮ್ಮ ಕಾರ್ಗೋ" ಉದ್ಘಾಟಿಸಿದ ಕ್ಷಣ**




**ಸಂಸ್ಥೆಯ ಸಿಬ್ಬಂದಿಗಳ ಮಕ್ಕಳಿಗೆ ಶೈಕ್ಷಣಿಕ ಕ್ಷೇತ್ರದ ಆಯ್ಕೆ ಸ್ಫೂರ್ತಿ ಪ್ರೇರಣೆ ಮತ್ತು ಉಜ್ವಲ ಭವಿಷ್ಯಕ್ಕಾಗಿ ಏರ್ಪಡಿಸಿದ ಕಾರ್ಯಾಗಾರ**




ಗೌರವಾನ್ವಿತ ಮಾನ್ಯ ಶ್ರೀ ರಾಜಕುಮಾರ ಪಾಟೀಲ ತೇಲ್ಕೂರು ಶಾಸಕರು ಸೇಡಂ ಹಾಗೂ ಅಧ್ಯಕ್ಷರು ಈಕರಸಾಸಂ ರವರು ಸಂಚಾರಿ ಗ್ರಂಥಾಲಯವನ್ನು ಸಮರ್ಪಣೆ ಮಾಡಿದ ಕ್ಷಣ






ವಿದ್ಯಾರ್ಥಿಗಳು ಸಂಚಾರಿ ಗ್ರಂಥಾಲಯ ವಾಹನವನ್ನು ಸದುಪಯೋಗ ಪಡೆಸಿಕೊಳ್ಳುತ್ತಿರುವುದು




ಗೌರವಾನ್ವಿತ ಮಾನ್ಯ ಶ್ರೀ ಲಕ್ಷ್ಮಣ್ ಸವದಿ ಉಪ ಮುಖ್ಯ ಮಂತ್ರಿಗಳು ಹಾಗೂ ಸಾರಿಗೆ ಸಚಿವರು ಕರ್ನಾಟಕ ಸರ್ಕಾರ ರವರು ಕೊಪ್ಪಳ ವಿಭಾಗದಲ್ಲಿ ಆಮ್ಲಜನಕಯುಕ್ತ ವಾಹನವನ್ನು ಉದ್ಘಾಟನೆ ಮಾಡಿದ ಕ್ಷಣ





ಆಮ್ಲಜನಕಯುಕ್ತ ವಾಹನದ ಒಳನೋಟ

# ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ

ಸಾರಿಗೆ ಸದನ, ಕೇಂದ್ರ ಕಛೇರಿ, ಮುಖ್ಯ ರಸ್ತೆ, ಕಲಬುರಗಿ–585 102

# 21ನೇ

# ವಾರ್ಷಿಕ ಆಡಳಿತ ವರದಿ

# 2020-21

| | | |
|---|---|---|
| **ಪ್ರಕಾಶಕರು** | : | ವ್ಯವಸ್ಥಾಪಕ ನಿರ್ದೇಶಕರು,<br>ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ,<br>ಕೇಂದ್ರ ಕಛೇರಿ, ಸಾರಿಗೆ ಸದನ,<br>ಕಲಬುರಗಿ –585 102 |
| **ಸಂಕಲನಕಾರರು** | : | ಮುಖ್ಯ ಯೋಜನಾ ಮತ್ತು ಸಂಖ್ಯಾಧಿಕಾರಿ,<br>ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ,<br>ಕೇಂದ್ರ ಕಛೇರಿ, ಸಾರಿಗೆ ಸದನ,<br>ಕಲಬುರಗಿ –585 102 |
| **ಮುದ್ರಕರು** | : | ಮುದ್ರಣ ಮತ್ತು ಲೇಖನ ಸಾಮಗ್ರಿ ನಿಯಂತ್ರಕರು,<br>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಮುದ್ರಣಾಲಯ,<br>ಕೆ. ಹೆಚ್. ರಸ್ತೆ, ಶಾಂತಿನಗರ,<br>ಬೆಂಗಳೂರು – 560 027. |

# ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ

**ಸಾರಿಗೆ ಸದನ : ಕೇಂದ್ರ ಕಛೇರಿ : ಮುಖ್ಯರಸ್ತೆ : ಕಲಬುರಗಿ – 585 102.**

ಸಂಖ್ಯೆ: ಕಕರಸಾ/ಕೇಕ/ಯೋ&ಅಂಸಂ/ /2021–22 ದಿನಾಂಕ:

ಇವರಿಗೆ,
**ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,**
ಸಾರಿಗೆ ಇಲಾಖೆ, ಕರ್ನಾಟಕ ಸರ್ಕಾರ,
ಬಹುಮಹಡಿ ಕಟ್ಟಡ,
ಬೆಂಗಳೂರು–560 001.

ಮಾನ್ಯರೆ,

**ವಿಷಯ:** ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ 21ನೇ ವಾರ್ಷಿಕ ಆಡಳಿತ ವರದಿ ಕುರಿತು.

******

1950ರ ರಸ್ತೆ ಸಾರಿಗೆ ಸಂಸ್ಥೆ ಅಧಿನಿಯಮ 35(2)ನೇ ಕಲಂನಲ್ಲಿ ಗೊತ್ತುಪಡಿಸಿರುವಂತೆ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ 2020–21ನೇ ಸಾಲಿನ ಇಪ್ಪತ್ತೊಂದನೆಯ ವಾರ್ಷಿಕ ವರದಿಯನ್ನು ಸಂಬಂಧಪಟ್ಟ ಅಂಕಿಅಂಶ ಕೋಷ್ಟಕಗಳು ಮತ್ತು ಹಣಕಾಸು ತಖ್ತೆಗಳೊಂದಿಗೆ ಮುಂದಿನ ಕ್ರಮಕ್ಕಾಗಿ ಈ ಮೂಲಕ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ,

ಸಹಿ/–

**(ಪಾಟೀಲ್ ಭುವನೇಶ ದೇವಿದಾಸ್,** ಭಾ.ಆ.ಸೇ.,**)**
ವ್ಯವಸ್ಥಾಪಕ ನಿರ್ದೇಶಕರು.

# ಪ್ರಗತಿ ಪಕ್ಷಿನೋಟ
# ಮುಖ್ಯಾಂಶಗಳು

| ಕ್ರ. ಸಂ. | ವಿವರಗಳು | 2000-01 | 2005-06 | 2010-11 | 2015-16 | 2016-17 | 2017-18 | 2018-19 | 2019-20 | 2020-21 |
|---|---|---|---|---|---|---|---|---|---|---|
| **I** | **ಸಂಸ್ಥೆ (ಮಾರ್ಚ್ 31ರಂದು ಇದ್ದಂತೆ)** | | | | | | | | | |
| | 1 ಕೇಂದ್ರ ಕಛೇರಿ | 1 | 1 | 1 | 1 | 1 | 1 | 1 | 1 | 1 |
| | 2 ವಿಭಾಗಗಳು | 6 | 6 | 8 | 9 | 9 | 9 | 9 | 9 | 9 |
| | 3 ಘಟಕಗಳು | 26 | 29 | 43 | 48 | 50 | 50 | 52 | 52 | 52 |
| | 4 ಉದ್ಯೋಗಿಗಳು | 10005 | 10880 | 17586 | 20341 | 20577 | 20218 | 20574 | 20376 | 19629 |
| | 5 ಅನುಸೂಚಿವೊಂದಕ್ಕೆ ಸಿಬ್ಬಂದಿ ಪ್ರಮಾಣ | 5.46 | 4.86 | 4.85 | 4.95 | 4.94 | 4.74 | 4.80 | 4.79 | 4.86 |
| **II** | **ಕಾರ್ಯಾಚರಣೆ (ಮಾರ್ಚ್ 31ರಂದು ಇದ್ದಂತೆ)** | | | | | | | | | |
| | 1 ವಾಹನಗಳು | 2027 | 2586 | 3971 | 4495 | 4549 | 4759 | 4878 | 4729 | 4616 |
| | 2 ಅನುಸೂಚಿಗಳು | 1831 | 2424 | 3629 | 4106 | 4167 | 4267 | 4285 | 4252 | 4037 |
| | 3 ಸೇರ್ಪಡೆಯಾದ ಹೊಸ ವಾಹನಗಳು | 265 | 481 | 451 | 367 | 384 | 996 | 544 | 49 | 1 |
| | 4 ನಿಷ್ಕ್ರಿಯಗೊಳಿಸಿದ ಹಳೆ ವಾಹನಗಳು | 26 | 243 | 344 | 239 | 330 | 779 | 424 | 248 | 133 |
| | 5 ದೈನಂದಿನ ಅನುಸೂಚಿ ಕಿ.ಮೀ.ಗಳು(ಲಕ್ಷ) | 6.41 | 8.34 | 13.21 | 14.29 | 14.67 | 15.30 | 15.33 | 15.25 | 14.50 |
| | 6 ಮಾರ್ಗಗಳು | 2729 | 3033 | 3529 | 3820 | 3948 | 4159 | 3990 | 3790 | 3641 |
| | 7 ಮಾರ್ಗ ಕಿ.ಮೀ.ಗಳು (ಲಕ್ಷ) | 3.08 | 2.45 | 3.44 | 3.69 | 3.93 | 3.98 | 4.17 | 3.66 | 3.55 |
| | 8 ಅಂತರರಾಜ್ಯ ಮಾರ್ಗಗಳು | 174 | 235 | 442 | 430 | 457 | 454 | 469 | 457 | 435 |
| | 9 ವೇಗದೂತ ಸಾರಿಗೆ ಸೇವೆಗಳು | 803 | 1134 | 1839 | 1768 | 1867 | 1849 | 1959 | 1918 | 2043 |
| | 10 ನಗರ ಸಾರಿಗೆ ಸೇವೆಗಳು | - | - | - | 479 | 421 | 393 | 343 | 266 | 192 |
| | 11 ಅರೆಸುಖಾಸೀನ ಸೇವೆಗಳು | 14 | - | - | - | - | - | - | - | - |
| | 12 ಸುಖಾಸೀನ ಸೇವೆಗಳು | 42 | 59 | 78 | 64 | 61 | 62 | 56 | 58 | 52 |
| | 13 ಹವಾನಿಯಂತ್ರಿತ/ಹವಾನಿಯಂತ್ರಿತರಹಿತ ಸ್ಲೀಪರ್ ಸೇವೆಗಳ | 0 | 0 | 40 | 80 | 84 | 118 | 114 | 122 | 106 |
| **III** | **ಪ್ರಯಾಣಿಕ ಸೌಲಭ್ಯಗಳು (ಮಾರ್ಚ್ 31ರಂದು ಇದ್ದಂತೆ)** | | | | | | | | | |
| | 1 ವಾಹನ ನಿಲ್ದಾಣಗಳು | | | | | | | | | |
| | ಅ.ಖಾಯಂ | 74 | 84 | 113 | 136 | 146 | 151 | 152 | 154 | 154 |
| | ಆ.ತಾತ್ಕಾಲಿಕ | 6 | 11 | 7 | 10 | 11 | 10 | 10 | - | - |
| | 2 ಗ್ರಾಮಾಂತರ ರಸ್ತೆಯಂಚಿನ ಆಶ್ರಯದಾಣಗಳು | 82 | 772 | 993 | 1161 | 1161 | 913 | 917 | 943 | 922 |
| | 3 ನಗರಸಾರಿಗೆ ಆಶ್ರಯದಾಣಗಳು | 26 | 26 | 96 | 178 | 204 | 136 | 160 | 130 | 155 |
| **IV** | **ಸಂಚಾರ ಕಾರ್ಯಚಟುವಟಿಕೆಗಳು** | | | | | | | | | |
| | 1 ಒಟ್ಟು ಅನುಸೂಚಿ ಕಿ.ಮೀ.ಗಳು (ಲಕ್ಷ) | 1123.46 | 2849.29 | 4439.94 | 4988.04 | 5051.35 | 5208.82 | 5365.90 | 5263.06 | 3179.98 |
| | 2 ಒಟ್ಟು ಪರಿಣಾಮಕಾರಿ ಕಿ.ಮೀ.ಗಳು (ಲಕ್ಷ) | 1054.67 | 2695.31 | 4294.94 | 4809.32 | 4853.05 | 5046.31 | 5160.90 | 5064.17 | 3057.44 |
| | 3 ದೈನಂದಿನ ಪರಿಣಾಮಕಾರಿ ಕಿ.ಮೀ.ಗಳು (ಲಕ್ಷ) | 5.79 | 7.38 | 11.77 | 13.14 | 13.30 | 13.83 | 14.14 | 13.84 | 8.38 |
| | 4 ದೈನಂದಿನ ಪ್ರಯಾಣಿಕರ ಸಂಖ್ಯೆ (ಲಕ್ಷ) | 7.88 | 9.32 | 12.78 | 13.45 | 13.50 | 13.52 | 13.55 | 13.58 | 5.24 |
| | 5 ದೈನಂದಿನ ಸಾರಿಗೆ ಆದಾಯ (ಲಕ್ಷ ರೂ.ಗಳು) | 60.88 | 100.64 | 210.40 | 361.78 | 362.93 | 387.81 | 417.83 | 420.63 | 243.29 |
| | 6 ಪ್ರತಿ ಕಿ.ಮೀ. ಆದಾಯ (ಪೈಸೆ) | 1050.6 | 1362.9 | 1788.1 | 2753.2 | 2729.6 | 2805.0 | 2955.0 | 3040.0 | 2904.4 |
| | 7 ಲೋಡ್ ಫ್ಯಾಕ್ಟರ್ (ಶೇ.) | 65.0 | 60.8 | 60.4 | 62.2 | 64.1 | 65.8 | 68.9 | 70.6 | 60.8 |
| **V** | **ನಿರ್ವಹಣೆ** | | | | | | | | | |
| | 1 ವಾಹನ ಸಮೂಹ ಬಳಕೆ (ಶೇ.) | 92.6 | 95.5 | 91.2 | 89.6 | 90.5 | 90.5 | 86.3 | 85.4 | 57.2 |
| | 2 ಸರಾಸರಿ ವಾಹನ ಬಳಕೆ (ಕಿ.ಮೀ.ಗಳು) | | | | | | | | | |
| | ಅ) ಪರಿಣಾಮಕಾರಿ ಕಿ.ಮೀ.ಗಳ ಮೇಲೆ | 320 | 317 | 342 | 330 | 335 | 340 | 342 | 343 | 314 |
| | ಆ) ಒಟ್ಟು ಕಿ.ಮೀ.ಗಳ ಮೇಲೆ | 327 | 323 | 352 | 342 | 346 | 350 | 352 | 350 | 320 |
| | 3 ಕೆ.ಎಂ.ಪಿ.ಎಲ್ (ಇಂಧನ) | 4.87 | 5.44 | 5.25 | 5.15 | 5.17 | 5.20 | 5.25 | 5.24 | 5.47 |
| | 4 ಟಯರ್ ಜೀವಮಾನ (ಸರಾಸರಿ ಕಿ.ಮೀ.ಗಳು) | | | | | | | | | |
| | ಅ) ಹೊಸ ಟಯರ್ | 34067 | 37340 | 47041 | 67798 | 72270 | 78121 | 88489 | 91291 | 94415 |
| | ಆ) ಮರುಒಪ್ಪಗೊಳಿಸಿದ ಟಯರ್ | 26241 | 22253 | 19740 | 27164 | 30308 | 32581 | 37254 | 43314 | 48936 |
| | ಇ) ಒಟ್ಟು ಜೀವಮಾನ | 103989 | 118983 | 107088 | 127278 | 139449 | 143637 | 154998 | 161305 | 179560 |

| ಕ್ರ. ಸಂ. | ವಿವರಗಳು | 2000-01 | 2005-06 | 2010-11 | 2015-16 | 2016-17 | 2017-18 | 2018-19 | 2019-20 | 2020-21 |
|---|---|---|---|---|---|---|---|---|---|---|
| **VI** | **ಸಾರಿಗೆ ಸೇವೆಗಳ ಗುಣಮಟ್ಟ** | | | | | | | | | |
| | ೧ ಅವಘಡ ಪ್ರಮಾಣ (ಪ್ರತಿ ೧೦೦೦೦ ಕಿ.ಮೀ.ಗಳಿಗೆ) | 0.23 | 0.22 | 0.11 | 0.09 | 0.09 | 0.08 | 0.04 | 0.06 | 0.03 |
| | ೨ ಅಪಘಾತ ಪ್ರಮಾಣ (ಪ್ರತಿ ಒಂದು ಲಕ್ಷ ಕಿ.ಮೀ.ಗಳಿಗೆ) | 0.12 | 0.15 | 0.12 | 0.08 | 0.08 | 0.07 | 0.06 | 0.06 | 0.06 |
| | ೩ ಸಮಯ ಪಾಲನೆ (ಶೇ.) | | | | | | | | | |
| | ಅ) ನಿರ್ಗಮನ | 86.8 | 90.3 | 89.1 | 92.8 | 92.4 | 92.7 | 92.7 | 91.0 | 93.6 |
| | ಆ) ಆಗಮನ | 89.5 | 92.3 | 91.7 | 93.5 | 92.9 | 94.1 | 94.2 | 94.0 | 95.1 |
| | 4 ಸಾರ್ವಜನಿಕ ದೂರುಗಳು (ಒಂದು ಲಕ್ಷ ಪ್ರಯಾಣಿಕರಿಗೆ) | 0.02 | 0.10 | 0.07 | 0.06 | 0.06 | 0.07 | 0.09 | 0.07 | 0.15 |
| **VII** | **ಬಂಡವಾಳ (ಲಕ್ಷ ರೂ.ಗಳಲ್ಲಿ) (ಮಾರ್ಚ್ ೩೧ರಂದು ಇದ್ದಂತೆ)** | | | | | | | | | |
| | ೧ ಹೂಡಿಕೆ | | | | | | | | | |
| | ಅ) ರಾಜ್ಯ ಸರ್ಕಾರ | | | | | | | | | |
| | 1) ಬಂಡವಾಳ ವಂತಿಗೆ | 29.86 | 2029.86 | 13033.48 | 3197.48 | 3197.48 | 3197.48 | 3197.48 | 3197.48 | 3197.48 |
| | 2) ಇಕ್ವಿಟಿ ಬಂಡವಾಳ | 8320.19 | 8320.19 | 9914.91 | 9914.91 | 9914.91 | 9914.91 | 9914.91 | 9914.91 | 9914.91 |
| | ಆ) ಕೇಂದ್ರ ಸರ್ಕಾರ | | | | | | | | | |
| | 1) ಬಂಡವಾಳ ವಂತಿಗೆ | 0.00 | 0.00 | 0.00 | 0.00 | 0.00 | 0.00 | 0.00 | 0.00 | 0.00 |
| | 2) ಇಕ್ವಿಟಿ ಬಂಡವಾಳ | 0.00 | 0.00 | 0.00 | 0.00 | 0.00 | 0.00 | 0.00 | 0.00 | 0.00 |
| | ೨ ಆಂತರಿಕ ಸಂಪನ್ಮೂಲಗಳು | 2784.13 | 6706.91 | 28742.63 | 60670.41 | 64283.19 | 64303.19 | 72303.19 | 72303.19 | 72303.19 |
| | ೩ ಡಿಬೆಂಚರ್ ಸಾಲಗಳು | 0.00 | 0.00 | 0.00 | 0.00 | 0.00 | 0.00 | 0.00 | 0.00 | 0.00 |
| | 4 ಇತರ (ಬ್ಯಾಂಕ್ ಸಾಲ ಮತ್ತು ಅನುದಾನಗಳು) | 6624.68 | 6685.43 | 17983.73 | 6608.94 | 4467.25 | 7101.85 | 13559.80 | 13546.88 | 7686.79 |
| | **ಒಟ್ಟು** | **17758.86** | **23742.39** | **69674.75** | **80391.74** | **81862.83** | **84517.43** | **98975.38** | **98962.46** | **93102.37** |
| **VIII** | **ಸ್ಥಿರ ಸ್ವತ್ತುಗಳು (ಲಕ್ಷ ರೂ.ಗಳಲ್ಲಿ)(ಮಾರ್ಚ್ ೩೧ರಂದು ಇದ್ದಂತೆ)** | | | | | | | | | |
| | ೧ ಭೂಮಿ ಮತ್ತು ಕಟ್ಟಡಗಳು | 2521.03 | 4875.07 | 17869.18 | 34979.71 | 38147.57 | 43181.77 | 49412.26 | 55776.16 | 61298.92 |
| | ೨ ಪ್ರಯಾಣಿಕ ವಾಹನಗಳು | 14845.89 | 17499.67 | 48649.26 | 69969.98 | 73323.41 | 88756.10 | 94227.22 | 92988.54 | 91490.74 |
| | ೩ ಇಲಾಖಾ ವಾಹನಗಳು | 166.94 | 426.91 | 760.22 | 1010.99 | 994.01 | 1151.61 | 1116.68 | 1160.33 | 1160.33 |
| | 4 ಸ್ಥಾವರ, ಯಂತ್ರೋಪಕರಣ ಮತ್ತು ಇತರ ಉಪಕರಣಗಳು | 562.57 | 1027.69 | 2383.16 | 3887.78 | 4041.44 | 4083.81 | 4886.29 | 5176.02 | 5222.47 |
| | **ಒಟ್ಟು** | **18096.43** | **23829.34** | **69661.82** | **109848.46** | **116506.43** | **137173.29** | **149642.45** | **155101.05** | **159172.46** |
| **IX** | **ಕಾರ್ಯಾಚರಣೆ ಫಲಿತಾಂಶಗಳು (ಲಕ್ಷ ರೂ.ಗಳು)** | | | | | | | | | |
| | ೧ ಸಾರಿಗೆ ಆದಾಯ | 11237.76 | 36735.18 | 76795.82 | 132410.82 | 132470.59 | 141549.60 | 152506.57 | 153950.86 | 88799.86 |
| | ೨ ಇತರ ಆದಾಯ | 425.00 | 2735.41 | 9642.33 | 17714.28 | 19471.68 | 21994.76 | 26563.06 | 29768.25 | 39341.73 |
| | ೩ ಒಟ್ಟು ಆದಾಯ | 11662.76 | 39470.59 | 86438.15 | 150125.10 | 151942.27 | 163544.36 | 179069.63 | 183719.11 | 128141.59 |
| | 4 ಒಟ್ಟು ಕಾರ್ಯಾಚರಣೆ ವೆಚ್ಚ (ಸವಕಳಿ, ಬಡ್ಡಿ ಮತ್ತು ಬೋನಸ್ ಸೇರಿ) | 13781.18 | 42249.47 | 87643.34 | 152316.61 | 157388.25 | 166874.96 | 185892.99 | 192646.49 | 146786.60 |
| | 5 ನಿವ್ವಳ ನಷ್ಟ (ಸವಕಳಿ, ಬಡ್ಡಿ ಮತ್ತು ಬೋನಸ್ ಸೇರಿ) | -2118.42 | -2778.88 | -1205.19 | -2191.51 | -5445.98 | -3330.60 | -6823.36 | -8927.38 | -18645.01 |
| | ೬ ಬಂಡವಾಳ ಮೇಲಿನ ಪ್ರತಿಫಲ(ನಿವ್ವಳ ಲಾಭ+ಬಡ್ಡಿ) | -1610.22 | -2494.68 | 114.80 | -1172.91 | -691.20 | -485.24 | -5940.46 | -7956.50 | -17908.45 |
| | 7 ಮಧ್ಯಸ್ಥ ಬಂಡವಾಳ ಮೇಲಿನ ಪ್ರತಿಫಲ(ಶೇ.) | -29.84 | -73.64 | 2.87 | -8.61 | -39.30 | -15.06 | -12.24 | -4.82 | -15.46 |
| | ೮ ಸಂಚಿತ ನಷ್ಟ (ಕೋಟಿ ರೂ.ಗಳು) | -105.01 | -218.86 | -405.11 | -520.87 | -575.33 | -608.64 | -676.87 | -766.14 | -952.59 |
| | ೯ ನಿವ್ವಳ ಮೌಲ್ಯ (ವರ್ತ್)(ಕೋಟಿ ರೂ.ಗಳು) | -13.15 | -91.63 | -130.61 | 79.33 | 105.65 | 166.24 | 83.39 | -8.20 | -789.18 |

# ವಿಷಯ ಸೂಚಿ


| ಕ್ರ.ಸಂ. | ವಿಷಯ | ಪುಟ ಸಂಖ್ಯೆ |
|---|---|---|
| 1 | ಪೀಠಿಕೆ | 1-3 |
| 2 | ಆಡಳಿತ ಮಂಡಳಿ | 4-6 |
| 3 | ಆಡಳಿತ | 7-11 |
| 4 | ಕಾರ್ಯಾಚರಣೆ | 12-22 |
| 5 | ಆಟೋ ಇಂಜಿನಿಯರಿಂಗ್ | 23-28 |
| 6 | ಉಗ್ರಾಣ | 29-30 |
| 7 | ಆರ್ಥಿಕ ವ್ಯವಹಾರ | 31-37 |
| 8 | ಕಾಮಗಾರಿ | 38 |
| 9 | ಕಾರ್ಮಿಕ ಕಲ್ಯಾಣ | 39-42 |
| 10 | ಭದ್ರತಾ ಮತ್ತು ಜಾಗೃತಾ ವ್ಯವಸ್ಥೆ | 43-45 |
| 11 | ಮಾಹಿತಿ ತಂತ್ರಜ್ಞಾನ | 46-47 |
| 11 | ಇತರ ವಿಷಯಗಳು | 48-52 |
| | **ಅನುಸೂಚಿಗಳು** | |
| ಅ | ನಿರ್ದೇಶಕರು ಭಾಗವಹಿಸಿದ ಮಂಡಳಿ ಸಭೆಗಳ ಸಂಖ್ಯೆ | 54-55 |
| ಆ | ವರ್ಗವಾರು ವೇತನ ಶ್ರೇಣಿಗಳು | 56-58 |
| ಇ | ಪ್ರಯಾಣ ದರ ರಚನೆ | 59-60 |
| ಈ | ಸಾಂದರ್ಭಿಕ ಕರಾರಿನ ಮೇಲೆ ಬಸ್ ಬಾಡಿಗೆ ದರಗಳು | 61 |
| ಉ | ಸವಕಳಿ | 62 |
| | **ಅನುಬಂಧಗಳು** | |
| 1 | ಸಿಬ್ಬಂದಿ ಮತ್ತು ಅನುಸೂಚಿಗಳು | 65 |
| 2 | ಘಟಕಗಳು, ಮಾರ್ಗಗಳು ಮತ್ತು ಮಾರ್ಗ ದೂರ | 66 |
| 3 | ಕಾರ್ಯಾಚರಣೆ ಕಿ.ಮೀ.ಗಳು | 67 |
| 4 | ಸರಾಸರಿ ವಾಹನ ಬಳಕೆ | 68 |
| 5 | ಸಾರಿಗೆ ಸೇವೆಯ ಗುಣಮಟ್ಟ | 69 |
| 6 | ವಾಹನ ಸಮೂಹ ರಚನೆ ಮತ್ತು ಅದರ ಬಳಕೆ | 70 |
| 7 | ನಿರ್ವಹಣೆ - ಇಂಧನ ಮತ್ತು ಟಯರ್ | 71 |
| 8 | ಲೆಕ್ಕಪತ್ರ ಕಾರ್ಯನೀತಿ ಮತ್ತು ಅಢಾವೆ ಪತ್ರಕ್ಕೆ ಟಿಪ್ಪಣಿ | 72-78 |
| 9 | ಲಾಭ ಮತ್ತು ನಷ್ಟದ ಪಟ್ಟಿ | 79-82 |
| 10 | ಆಸ್ತಿ ಮತ್ತು ಜವಾಬ್ದಾರಿ ಪಟ್ಟಿ | 83-85 |
| 11 | ಸವಕಳಿ ಲೆಕ್ಕಾಚಾರ | 86 |
| 12 | ಬಂಡವಾಳ ವಿವರಗಳು | 87-88 |
| | **ರೇಖಾ ಚಿತ್ರಗಳು** | |

ಪರಿಚ್ಛೇದ 1

# ಪೀಠಿಕೆ

## 1.1 ವರದಿಯ ಅವಧಿ:

ಇದು ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ 21ನೇ ವಾರ್ಷಿಕ ಆಡಳಿತ ವರದಿಯಾಗಿದ್ದು, 2020–21ನೇ ಆರ್ಥಿಕ ವರ್ಷಕ್ಕೆ (ಏಪ್ರಿಲ್ 2020ರಿಂದ ಮಾರ್ಚ್ 2021ರವರೆಗೆ) ಸಂಬಂಧಿಸಿದಂತೆ ಸಂಸ್ಥೆಯ ಕಾರ್ಯಚಟುವಟಿಕೆಗಳ ವಿವರಗಳನ್ನೊಳಗೊಂಡಿರುತ್ತದೆ.

## 1.2 ಆಡಳಿತ ವರ್ಗ:

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಆಡಳಿತವನ್ನು ನಿರ್ದೇಶಕರ ಮಂಡಳಿಯ ಮೂಲಕ ನಡೆಸಲು ತಿದ್ದುಪಡಿಗೊಂಡ ರಸ್ತೆ ಸಾರಿಗೆ ಸಂಸ್ಥೆ ಅಧಿನಿಯಮ 1982ರಲ್ಲಿ ಅವಕಾಶವಿದೆ. ಸಂಸ್ಥೆಯ ನಿರ್ದೇಶಕರ ಮಂಡಳಿಯಲ್ಲಿ ಅಧಿಕಾರಿ ನಿರ್ದೇಶಕರು ಮತ್ತು ಅಧಿಕಾರೇತರ ನಿರ್ದೇಶಕರು ಇರುತ್ತಾರೆ. ಎಲ್ಲಾ ನಿರ್ದೇಶಕರನ್ನು ರಾಜ್ಯ ಸರ್ಕಾರ ನೇಮಿಸುತ್ತದೆ.

## 1.3 ಆಡಳಿತ ವ್ಯವಸ್ಥೆ:

ಈ.ಕ.ರ.ಸಾ.ಸಂಸ್ಥೆಯ ಕೇಂದ್ರ ಕಛೇರಿ ಕಲಬುರಗಿಯಲ್ಲಿದ್ದು, ಇದರ ವ್ಯಾಪ್ತಿಯಲ್ಲಿ 9 ವಿಭಾಗೀಯ ಕಛೇರಿಗಳು [ಕಲಬುರಗಿ–1, ಕಲಬುರಗಿ–2, ಯಾದಗಿರಿ, ಬೀದರ್, ರಾಯಚೂರು, ಕೊಪ್ಪಳ, ಬಳ್ಳಾರಿ, ವಿಜಯಪುರ (ದಿನಾಂಕ 29.11.2009ರಿಂದ) ಮತ್ತು ಹೊಸಪೇಟೆ], ಒಟ್ಟು 52 ಘಟಕಗಳು ಕಾರ್ಯಾಚರಣೆಯಲ್ಲಿದ್ದವು. ಯಾದಗಿರಿಯಲ್ಲಿ ಒಂದು ಪ್ರಾದೇಶಿಕ ಕಾರ್ಯಾಗಾರ, ಕಲಬುರಗಿಯಲ್ಲಿ ಹಾಗೂ ಬಳ್ಳಾರಿಯಲ್ಲಿ ತಲಾ ಒಂದು ಕಾಮಗಾರಿ ವಿಭಾಗ ಮತ್ತು ಹುಮ್ನಾಬಾದ್‌ನಲ್ಲಿ ಪ್ರಾದೇಶಿಕ ತರಬೇತಿ ಕೇಂದ್ರ ಹಾಗೂ ಹಗರಿಬೊಮ್ಮನಹಳ್ಳಿಯಲ್ಲಿ ಚಾಲಕರ ತರಬೇತಿ ಕೇಂದ್ರಗಳಿದ್ದು, ಇವುಗಳು ಕಾರ್ಯ ನಿರ್ವಹಿಸುತ್ತಿದ್ದವು.

## 1.4 ಪ್ರಯಾಣಿಕರಿಗೆ ಸೌಕರ್ಯಗಳು ಮತ್ತು ಅನುಕೂಲತೆಗಳು:

ಸಂಸ್ಥೆಯು ಪ್ರಯಾಣಿಕರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಆದ್ಯತೆ ನೀಡಿದೆ. ದಿನಾಂಕ 31–03–2021ರಂದು ಸಂಸ್ಥೆಯಲ್ಲಿ ಒಟ್ಟು 154 ಖಾಯಂ ಬಸ್ ನಿಲ್ದಾಣಗಳು, 943 ಗ್ರಾಮೀಣ ರಸ್ತೆಯಂಚಿನ ಆಶ್ರಯದಾಣಗಳು ಮತ್ತು 130 ನಗರಸಾರಿಗೆ ಆಶ್ರಯದಾಣಗಳು ಇದ್ದವು. ಎಲ್ಲಾ ಬಸ್ ನಿಲ್ದಾಣಗಳಲ್ಲಿ ಪ್ರಯಾಣಿಕರಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ.

ವರದಿ ವರ್ಷದಲ್ಲಿ ಕೊರೋನಾ ಸೋಂಕು ಹರಡಿರುವದರಿಂದ ಸಾರ್ವಜನಿಕ ಪ್ರಯಾಣಿಕರ ಸಂಚಾರ ವಿರಳಗೊಂಡಿರುವುದರಿಂದ ಒಂದು ಹೊಸ ವಾಹನವನ್ನು ಸೇರ್ಪಡೆ ಮಾಡಲಾಗಿದೆ. 113 ಹಳೆಯ ವಾಹನಗಳನ್ನು ನಿಷ್ಕ್ರಿಯಗೊಳಿಸಲಾಗಿದೆ.

ದಿನಾಂಕ 31–03–2021ಕ್ಕೆ ಸಂಸ್ಥೆಯು 4037 ಅನುಸೂಚಿಗಳನ್ನು 3641 ಮಾರ್ಗಗಳಲ್ಲಿ ಕಾರ್ಯಾಚರಣೆ ಮಾಡಿದೆ. ಸಂಸ್ಥೆಯ ವಾಹನ ಬಲ 4616 ಆಗಿದ್ದು, ಸರಾಸರಿ 8.38ಲಕ್ಷ ದೈನಂದಿನ ಕಿ.ಮೀ.ಗಳನ್ನು ಕಾರ್ಯಾಚರಣೆಗೊಳಿಸಿದೆ. ವರದಿ ವರ್ಷದಲ್ಲಿ ಕೊರೋನಾ ಸೋಂಕು ಹರಡಿರುವದರಿಂದ ಸಾರ್ವಜನಿಕ ಪ್ರಯಾಣಿಕರ ಸಂಚಾರ ವಿರಳಗೊಂಡಿರುವುದರಿಂದ ದೈನಂದಿನ ಸರಾಸರಿ ಕಿ.ಮೀ. ಕಡಿಮೆಯಾಗಲು ಕಾರಣವಾಗಿರುತ್ತದೆ.

ಸಂಸ್ಥೆಯಲ್ಲಿ 192 ನಗರ ಹಾಗೂ ಉಪನಗರ, 1644 ಸಾಮಾನ್ಯ, 2043 ವೇಗದೂತ, 44 ಹೈ–ಟೆಕ್/ ರಾಜಹಂಸ/ಸುಹಾಸ, 08 ಹವಾನಿಯಂತ್ರಿತ ಸ್ಲೀಪರ್, 106 ಹವಾನಿಯಂತ್ರಿತರಹಿತ ಸ್ಲೀಪರ್ ಸಾರಿಗೆ ಸೇವೆಗಳು ವರ್ಷಾಂತ್ಯಕ್ಕೆ ಕಾರ್ಯಾಚರಣೆಯಲ್ಲಿದ್ದವು.

**1.5 ಕಾರ್ಯಾಚರಣಾ ದಕ್ಷತೆ:**

ಕಾರ್ಯಾಚರಣೆಯ ಕಾರ್ಯಕ್ಷಮತೆಯನ್ನು ಉತ್ತಮಪಡಿಸಲು ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿದೆ. ಮಾರ್ಗತನಿಖಾ ವ್ಯವಸ್ಥೆಯನ್ನು ಬಲಪಡಿಸುವುದರೊಂದಿಗೆ, ಆದಾಯವನ್ನು ಗರಿಷ್ಠ ಪ್ರಮಾಣದಲ್ಲಿ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ.

2020–21ನೇ ಸಾಲಿನ ಕಾರ್ಯನಿರ್ವಹಣಾ ಫಲಿತಾಂಶಗಳನ್ನು ಹಿಂದಿನ ಸಾಲಿನದೊಂದಿಗೆ ಹೋಲಿಸಿದಾಗ, ಈ ಕೆಳಕಂಡ ಅಂಶಗಳು ಕಂಡು ಬಂದಿವೆ.

1. ಪರಿಣಾಮಕಾರಿ ಕಿ.ಮೀ.ಗಳು 5064.17ಲಕ್ಷದಿಂದ 3057.44 ಲಕ್ಷಕ್ಕೆ ಇಳಿಕೆಯಾಗಿದ್ದು, ಶೇ. 39.6ರಷ್ಟು ಋಣಾತ್ಮಕವಾಗಿದೆ.
2. ಅವಘಡ ಪ್ರಮಾಣ (ಪ್ರತಿ 10000 ಕಿ. ಮೀ.ಗಳಿಗೆ) ಕಳೆದ ವರ್ಷದ 0.06ರಿಂದ 0.03ಕ್ಕೆ ಇಳಿಕೆಯಾಗಿದೆ.
3. ಅಪಘಾತ ಪ್ರಮಾಣ (ಪ್ರತಿ ಲಕ್ಷ ಕಿ. ಮೀ.ಗಳಿಗೆ) ಕಳೆದ ವರ್ಷಕ್ಕೆ ಹೋಲಿಸಿದಲ್ಲಿ 0.06ಕ್ಕೆ ಸ್ಥಿರವಾಗಿದೆ.
4. ಒಟ್ಟು ಆದಾಯ ರೂ. 183719.11ಲಕ್ಷದಿಂದ ರೂ. 128141.58ಲಕ್ಷಕ್ಕೆ ಕಡಿಮೆಗೊಂಡಿದ್ದು, ಶೇ.30.6ರಷ್ಟು ಋಣಾತ್ಮಕವಾಗಿದೆ.
5. ಸಂಸ್ಥೆಯ ಒಟ್ಟು ಆದಾಯದ ಮೇಲಿನ ನಷ್ಟವನ್ನು ಕಳೆದ ವರ್ಷಕ್ಕೆ ಹೋಲಿಸಿದಲ್ಲಿ, ಕಳೆದ ವರ್ಷದ ರೂ. 89.27 ಕೋಟಿಯಿಂದ ರೂ. 186.45 ಕೋಟಿಗೆ ಏರಿಕೆಯಾಗಿದೆ.

**1.6 ಸಂಸ್ಥೆಯ ಕಾರ್ಯಾಚರಣೆಯ ಮೇಲೆ ಕೋವಿಡ್–19ರ ಪರಿಣಾಮ :–**

ಮಹಾಮಾರಿ ಕೋವಿಡ್–19ರ ಸಾಂಕ್ರಾಮಿಕ ರೋಗವು ರಾಷ್ಟ್ರಾದ್ಯಂತ ಹರಡಿದ್ದು, ಕಲ್ಯಾಣ ಕರ್ನಾಟಕದ ಈ ಭಾಗದಲ್ಲಿ ಕೋವಿಡ್–19ರ ರೋಗ ಹರಡುವಿಕೆಯು ಮಾರ್ಚ್–20ರ ಮಾಹೆಯಿಂದಲೇ ಪ್ರಾರಂಭವಾಗಿದ್ದು, ಸರಕಾರವು ಈ ನಿಟ್ಟಿನಲ್ಲಿ ಕೋವಿಡ್–19ರ ಸಾಂಕ್ರಾಮಿಕ ರೋಗದ ಹರಡುವಿಕೆಯನ್ನು ತಡೆಗಟ್ಟುವ ಕ್ರಮವಾಗಿ ರಾಜ್ಯಾದ್ಯಂತ 24.03.2020ರಿಂದ 03.05.2020ರ ವರೆಗೆ ಸಂಪೂರ್ಣ ಲಾಕಡೌನ್ ಹೇರಲಾಗಿರುತ್ತದೆ. ದಿನಾಂಕ 04.05.2020ರಿಂದ ಹಸಿರು ವಲಯದ ಜಿಲ್ಲೆಗಳಲ್ಲಿ ಸಾರಿಗೆಗಳ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಗಿರುತ್ತದೆ. ದಿನಾಂಕ 19.05.2020ರಿಂದ 31.05.2020ರ ವರೆಗೆ ರಾಜ್ಯಾದ್ಯಾಂತ ಬೆಳಿಗ್ಗೆ 07.00 ರಿಂದ ಸಾಯಂಕಾಲ 07.00ರ ವರೆಗೆ ಕಾರ್ಯಾಚರಣೆ ಹಾಗೂ ಪ್ರತಿ ರವಿವಾರ ಸಂಪೂರ್ಣ ಲಾಕ್‌ಡೌನ್. ನಂತರ ದಿನಾಂಕ 01.06.2020ರಿಂದ ಬೆಳಿಗ್ಗೆ 05.00 ರಿಂದ ರಾತ್ರಿ 09.00 ಘಂಟೆಯವರೆಗೆ ಸಾರಿಗೆಗಳ ಕಾರ್ಯಾಚರಣೆಯನ್ನು ಮಾಡಲಾಗುತ್ತಿತ್ತು, ಮುಂದುವರೆದು ದಿನಾಂಕ 05.06.2020ರಿಂದ ರಾತ್ರಿ ಸಾರಿಗೆಗಳ ಕಾರ್ಯಚರಣೆಯನ್ನು ಪ್ರಾರಂಭಿಸಲಾಗಿರುತ್ತದೆ. ದಿನಾಂಕ 08.06.2020ರಿಂದ ಲಾಕ್‌ಡೌನ್ ಸಡಿಲಗೊಂಡ ಹಿನ್ನೆಲೆಯಲ್ಲಿ ಹಂತಹಂತವಾಗಿ ಸಾರಿಗೆಗಳನ್ನು ಕಾರ್ಯಾಚರಿಸಲಾಗಿರುತ್ತದೆ.

**1.7 ಔದ್ಯಮಿಕ ಸಂಬಂಧ:**

ಸಂಸ್ಥೆಯು ಕಾರ್ಮಿಕರೊಂದಿಗೆ ಸೌಹಾರ್ದಯುತ ಬಾಂಧವ್ಯವನ್ನು ಹೊಂದಿದೆ. ಅದು ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಅಭಿವೃದ್ಧಿಗಾಗಿ ಕಾರ್ಮಿಕರಿಗೆ ಒದಗಿಸಿದ್ದ ಸವಲತ್ತುಗಳನ್ನು ಮುಂದುವರೆಸುವುದರೊಂದಿಗೆ, ವೈದ್ಯಕೀಯ, ವಸತಿ ಹಾಗೂ ಇತರ ಕ್ಷೇಮಾಭ್ಯುದಯ ಸವಲತ್ತುಗಳನ್ನೂ ಸಹ ವಿಸ್ತರಿಸಿದೆ.

**1.8 2021–22ನೇ ಸಾಲಿನ ಕಾರ್ಯ ಯೋಜನೆ:**

2021–22ನೇ ಸಾಲಿನ ಕಾರ್ಯ ಯೋಜನೆಯ ಪ್ರಮುಖ ಅಂಶಗಳು ಈ ಕೆಳಕಂಡಂತಿವೆ.

- 267 ಹೊಸ ಅನುಸೂಚಿಗಳನ್ನು ಪ್ರಾರಂಭಿಸುವುದು,
- 650 ಹೊಸ ವಾಹನಗಳನ್ನು ಖರೀದಿಸಲು ಯೋಜಿಸಿದ್ದು, ಆದರೆ, ಕೋವಿಡ್–19ರ ಪ್ರಯುಕ್ತ ಹೊಸ ವಾಹನಗಳ ಖರೀದಿ ಕೈಬಿಡಲಾಗಿದೆ.
- 345 ಕಿ.ಮಿ.ಗಳ ಸರಾಸರಿ ವಾಹನ ಬಳಕೆಯನ್ನು ಸಾಧಿಸುವುದು.
- 51.24 ಕೋಟಿ ಪರಿಣಾಮಕಾರಿ ಕಿ.ಮೀ.ಗಳನ್ನು ಕಾರ್ಯಾಚರಿಸುವುದು ಮತ್ತು ರೂ. 1785.88ಕೋಟಿ ಸಾರಿಗೆ ಆದಾಯ ಗಳಿಸುವುದು.
- 5.43 ಕೆ.ಎಂ.ಪಿ.ಎಲ್ ಮತ್ತು 1,99,000ಕಿ.ಮೀ. ಟಯರ್ ಜೀವಮಾನವನ್ನು ಸಾಧಿಸುವುದು.
- 3485.3 ಪೈಸೆ ಪ್ರತಿ ಕಿ.ಮೀ. ಸಾರಿಗೆ ಆದಾಯ ಸಾಧಿಸುವುದು ಮತ್ತು ಪ್ರತಿ ಕಿ.ಮೀ. ವೆಚ್ಚವನ್ನು 4428.7 ಪೈಸೆಗೆ ಸೀಮಿತಗೊಳಿಸುವುದು.

ಸಮಗ್ರ ಕಾರ್ಯ ಯೋಜನೆಯನ್ನು ರೂಪಿಸಿದ್ದು, ಭೌತಿಕ ಮತ್ತು ಆರ್ಥಿಕ ನಿಯತಾಂಕಗಳ ಗುರಿಗಳನ್ನು ನಿಗದಿಪಡಿಸಲಾಗಿದೆ. ಅವುಗಳನ್ನು ಸಾಧಿಸಿ ಕಾರ್ಯನಿರ್ವಹಣಾ ದಕ್ಷತೆಯನ್ನು ಸುಧಾರಿಸಲು ವಿವಿಧ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಘಟಕ, ವಿಭಾಗೀಯ ಕಛೇರಿ ಮತ್ತು ಬಸ್ ನಿಲ್ದಾಣ ಇವುಗಳಲ್ಲಿ ಗಣಕೀಕರಣ ಚಟುವಟಿಕೆಗಳನ್ನು ವಿಸ್ತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

*****

ಪರಿಚ್ಛೇದ 2

# ಆಡಳಿತ ಮಂಡಳಿ

## 2.1 ನಿರ್ದೇಶಕರ ಮಂಡಳಿ ರಚನೆ:

ದಿನಾಂಕ 31–03–2021ರಂದು ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಮಂಡಳಿಯು ಅಧ್ಯಕ್ಷರನ್ನು ಒಳಗೊಂಡಂತೆ ಒಟ್ಟು 09 ಮಂದಿ ನಿರ್ದೇಶಕರನ್ನು ಒಳಗೊಂಡಿತ್ತು. ಅಧ್ಯಕ್ಷರು ಅಧಿಕಾರಿ/ಅಧಿಕಾರೇತರ ನಿರ್ದೇಶಕರಾಗಿರಬಹುದು. ಅವರುಗಳ ಪೈಕಿ 7 ಮಂದಿ ಅಧಿಕಾರಿಯುತ ನಿರ್ದೇಶಕರಾಗಿದ್ದು, ಅಧಿಕಾರೇತರ ಇಬ್ಬರಲ್ಲಿ ಒಬ್ಬರು ನಿರ್ದೇಶಕರು ಇನ್ನೊಬ್ಬರು ಅಧ್ಯಕ್ಷರಾಗಿರುತ್ತಾರೆ. ಎಲ್ಲಾ ನಿರ್ದೇಶಕರನ್ನು ಕರ್ನಾಟಕ ರಾಜ್ಯ ಸರ್ಕಾರವು ನೇಮಿಸಿರುತ್ತದೆ.

## 2.2 ವರದಿ ವರ್ಷದಲ್ಲಿ ಮಂಡಳಿ ನಿರ್ದೇಶಕರುಗಳ ಬದಲಾವಣೆ:

2020–21ನೇ ಸಾಲಿನಲ್ಲಿ ಮಂಡಳಿಯ ನಿರ್ದೇಶಕರುಗಳಲ್ಲಿ ಆದ ಬದಲಾವಣೆ ಕೆಳಗಿನಂತಿರುತ್ತದೆ.

1. ರಸ್ತೆ ಸಾರಿಗೆ ನಿಗಮಗಳ ಅಧಿನಿಯಮ ಹಾಗೂ ಕ.ರಾ.ರ.ಸಾ.ನಿಗಮದ ನಿಯಮಾವಳಿಗಳು 1961ರನ್ವಯ ಶ್ರೀಮತಿ ಕಲಾವತಿ ಎಸ್.ವಿ., ಸರ್ಕಾರದ ಉಪ ಕಾರ್ಯದರ್ಶಿ (ವಿಶ್ರಾಂತಿ ವೇತನ), ಆರ್ಥಿಕ ಇಲಾಖೆ, ಬೆಂಗಳೂರು, ಇವರನ್ನು ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಕಲಬುರಗಿ, ಮಂಡಳಿಗೆ ಅಧಿಕಾರಿಯುತ ಮಂಡಳಿ ನಿರ್ದೇಶಕರನ್ನಾಗಿ, ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿಡಿ 4 ಟಿಸಿಎಸ್ 2020 ದಿನಾಂಕ: 13.04.2020 ರಂತೆ ನೇಮಿಸಲಾಗಿದೆ.
2. ರಸ್ತೆ ಸಾರಿಗೆ ನಿಗಮಗಳ ಅಧಿನಿಯಮ 1950ರ (1950ರ ಕೇಂದ್ರ ಅಧಿನಿಯಮ 64) ಕಲಂ 5 ಉಪ ಕಲಂ (2) ಹಾಗೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ನಿಯಮಾವಳಿಗಳು 1961ರ ನಿಯಮ 3(3) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರದ ಕಾರ್ಯದರ್ಶಿ, ಸರ್ಕಾರದ ಪ್ರಧಾನ ಕಾರ್ಯದರ್ಶಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಸಾರಿಗೆ ಇಲಾಖೆ, ಇವರನ್ನು ಈ.ಕ.ರ.ಸಾ.ಸಂಸ್ಥೆಯ ನಿರ್ದೇಶಕ ಮಂಡಳಿಗೆ ಅಧಿಕಾರಯುತ ನಿರ್ದೇಶಕರನ್ನಾಗಿ, ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿಡಿ 13 ಟಿಸಿಎಸ್ 2020 ದಿನಾಂಕ: 05.06.2020 ರಂತೆ ನೇಮಿಸಲಾಗಿದೆ.
3. ರಸ್ತೆ ಸಾರಿಗೆ ನಿಗಮಗಳ ಅಧಿನಿಯಮ 1950ರ (1950ರ ಕೇಂದ್ರ ಅಧಿನಿಯಮ 64) ಕಲಂ 5 ಉಪ ಕಲಂ (2) ಹಾಗೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ನಿಯಮಾವಳಿಗಳು 1961ರ ನಿಯಮ 3 (3) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ರಾಜಕುಮಾರ್ ಪಾಟಿಲ್ ತೆಲ್ಕೂರ್, ಮಾನ್ಯ ವಿಧಾನ ಸಭಾ ಸದಸ್ಯರು, ಸೇಡಂ ಕ್ಷೇತ್ರ ಕಲಬುರಗಿ ಜಿಲ್ಲೆ ಇವರನ್ನು ಈ.ಕ.ರ.ಸಾ.ಸಂಸ್ಥೆಯ ಅಧ್ಯಕ್ಷರನ್ನಾಗಿ ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿಡಿ 13 ಟಿಸಿಎಸ್ 2020 ದಿನಾಂಕ: 27.07.2020 ರಂತೆ ನೇಮಿಸಲಾಗಿದೆ.
4. ಶ್ರೀ ರಾಜಕುಮಾರ್ ಪಾಟಿಲ್ ತೆಲ್ಕೂರ್, ಮಾನ್ಯ ವಿಧಾನ ಸಭಾ ಸದಸ್ಯರು ಹಾಗೂ ಅಧ್ಯಕ್ಷರು ಈ.ಕ.ರ.ಸಾ.ಸಂಸ್ಥೆ ಇವರಿಗೆ ತಕ್ಷಣದಿಂದ ಜಾರಿಗೆ ಬರುವಂತೆ ರಾಜ್ಯ ಸಚಿವ ಸ್ಥಾನಮಾನ ನೀಡಿ, ರಾಜ್ಯ ಸಚಿವರಿಗೆ ಅನ್ವಯಿಸುವ ಎಲ್ಲಾ ಸೌಲಭ್ಯಗಳನ್ನು ನೀಡಲು ಕರ್ನಾಟಕ ಸರ್ಕಾರ ಅಧಿಸೂಚನೆ ಸಂಖ್ಯೆ: ಸಿಆಸುಇ 96 ಶಿಸೇನೆ 2020 ದಿನಾಂಕ: 19.09.2020ರನ್ವಯ ಆದೇಶಿಸಲಾಗಿದೆ.
5. ರಸ್ತೆ ಸಾರಿಗೆ ನಿಗಮಗಳ ಅಧಿನಿಯಮ 1950ರ (1950ರ ಕೇಂದ್ರ ಅಧಿನಿಯಮ 64) ಕಲಂ 5 ಉಪ ಕಲಂ (2) ಹಾಗೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ನಿಯಮಾವಳಿಗಳು 1961ರ ನಿಯಮ 3 (3) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಕೂರ್ಮಾರಾವ್ ಎಂ, ಭಾ.ಆ.ಸೇ., ವ್ಯವಸ್ಥಾಪಕ ನಿರ್ದೇಶಕರು ಈ.ಕ.ರ.ಸಾ.ಸಂಸ್ಥೆಯ ಇವರನ್ನು ಸಂಸ್ಥೆಯ ನಿರ್ದೇಶಕರ ಮಂಡಳಿಗೆ ಅಧಿಕಾರಿಯುತ ನಿರ್ದೇಶಕರನ್ನಾಗಿ ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿಡಿ 28 ಟಿಸಿಎಸ್ 2020 (ಭಾ) ದಿನಾಂಕ: 22.09.2020ರಂತೆ ನೇಮಿಸಲಾಗಿದೆ.

6. ರಸ್ತೆ ಸಾರಿಗೆ ನಿಗಮಗಳ ಅಧಿನಿಯಮ 1950ರ (1950ರ ಕೇಂದ್ರ ಅಧಿನಿಯಮ 64) ಕಲಂ 5 ಉಪ ಕಲಂ (2) ಹಾಗೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ನಿಯಮಾವಳಿಗಳು 1961ರ ನಿಯಮ 3(3) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಪುರಷೋತ್ತಮ ಸಿಂಗ್, ವಿಶೇಷಾಧಿಕಾರಿ (ಜಿ.ಪಂ) ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ ಇವರನ್ನು ಸಂಸ್ಥೆಯ ನಿರ್ದೇಶಕ ಮಂಡಳಿಗೆ ಅಧಿಕಾರಯುತ ನಿರ್ದೇಶಕರನ್ನಾಗಿ, ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿಡಿ 04 ಟಿಸಿಎಸ್ 2020 ದಿನಾಂಕ: 14.09.2020 ರಂತೆ ನೇಮಿಸಲಾಗಿದೆ.

7. ರಸ್ತೆ ಸಾರಿಗೆ ನಿಗಮಗಳ ಅಧಿನಿಯಮ 1950ರ (1950ರ ಕೇಂದ್ರ ಅಧಿನಿಯಮ 64) ಕಲಂ 5 ಉಪ ಕಲಂ (2) ಹಾಗೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ನಿಯಮಾವಳಿಗಳು 1961ರ ನಿಯಮ 3 (3) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಮಲ್ಲಿಕಾರ್ಜುನ ಬಿನ್ ಗುರುಲಿಂಗಪ್ಪ ತಡಕಲ್, ಕಡಗಂಚಿ ಅಂಚೆ, ಆಳಂದ ತಾಲ್ಲುಕು, ಕಲಬುರಗಿ ಜಿಲ್ಲೆ ಇವರನ್ನು ಸಂಸ್ಥೆಯ ನಿರ್ದೇಶಕರ ಮಂಡಳಿಗೆ ಅಧಿಕಾರೇತರ ನಿರ್ದೇಶಕರಾಗಿ ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿಡಿ 41 ಟಿಸಿಎಸ್ 2020 ದಿನಾಂಕ: 25.11.2020 ರಂತೆ ನೇಮಿಸಲಾಗಿದೆ.

## ದಿನಾಂಕ 31.03.2021ರಂದು ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ನಿರ್ದೇಶಕರ ಮಂಡಳಿಯಲ್ಲಿದ್ದ ನಿರ್ದೇಶಕರುಗಳು

| | | |
|---|---|---|
| 1) ಶ್ರೀ ರಾಜಕುಮಾರ್ ಪಾಟೀಲ್ ತೆಲ್ಕೂರ,<br>ಸನ್ಮಾನ್ಯ ಶಾಸಕರು ಸೇಡಂ,<br>ವಿಧಾನಸೌಧ, ಬೆಂಗಳೂರು-560 001.<br>ಹಾಗೂ ಅಧ್ಯಕ್ಷರು ಈ.ಕ.ರ.ಸಾ.ಸಂಸ್ಥೆ, | : | ಅಧಿಕಾರೇತರ ಅಧ್ಯಕ್ಷರು |
| 2) ಶ್ರೀ ಅಂಜುಂ ಪರ್ವೇಜ್, ಭಾ.ಆ.ಸೇ.,<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಸಾರಿಗೆ ಇಲಾಖೆ, ಕರ್ನಾಟಕ ಸರ್ಕಾರ,<br>ಬಹುಮಹಡಿಗಳ ಕಟ್ಟಡ,<br>ಬೆಂಗಳೂರು-560001. | : | ಅಧಿಕಾರಿಯುತ ನಿರ್ದೇಶಕರು |
| 3) ಶ್ರೀ ಶಿವಯೋಗಿ ಸಿ. ಕಳಸದ, ಭಾ.ಆ.ಸೇ.<br>ವ್ಯವಸ್ಥಾಪಕ ನಿರ್ದೇಶಕರು,<br>ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ,<br>ಬೆಂಗಳೂರು-560 027. | : | ಅಧಿಕಾರಿಯುತ ನಿರ್ದೇಶಕರು |
| 4) ಶ್ರೀಮತಿ ಸಿ. ಶಿಖಾ, ಭಾ.ಆ.ಸೇ.,<br>ವ್ಯವಸ್ಥಾಪಕ ನಿರ್ದೇಶಕರು,<br>ಬೆಂ.ಮ.ಸಾ.ಸಂಸ್ಥೆ ಕೇಂದ್ರ ಕಛೇರಿ,<br>ಶಾಂತಿನಗರ, ಬೆಂಗಳೂರು-560 027. | : | ಅಧಿಕಾರಿಯುತ ನಿರ್ದೇಶಕರು |
| 5) ಶ್ರೀ ಕೂರ್ಮಾರಾವ್ ಎಂ, ಭಾ.ಆ.ಸೇ.,<br>ವ್ಯವಸ್ಥಾಪಕ ನಿರ್ದೇಶಕರು,<br>ಈ.ಕ.ರ.ಸಾ.ಸಂಸ್ಥೆ. ಕೇಂದ್ರ ಕಛೇರಿ,<br>ಕಲಬುರಗಿ-585 102 | : | ಅಧಿಕಾರಿಯುತ ನಿರ್ದೇಶಕರು |
| 6) ಶ್ರೀ ಕೃಷ್ಣ ಬಾಜಪೇಯಿ, ಭಾ.ಆ.ಸೇ.,<br>ವ್ಯವಸ್ಥಾಪಕ ನಿರ್ದೇಶಕರು,<br>ವಾ.ಕ.ರ.ಸಾ.ಸಂಸ್ಥೆ, ಕೇಂದ್ರ ಕಛೇರಿ,<br>ಗೋಕುಲ ರಸ್ತೆ, ಹುಬ್ಬಳ್ಳಿ 580030 | : | ಅಧಿಕಾರಿಯುತ ನಿರ್ದೇಶಕರು |

| | | |
|---|---|---|
| 7) ಶ್ರೀ ಪರೇಶ್ ಕುಮಾರ್ ಗೋಯೆಲ್,<br>ನಿರ್ದೇಶಕರು(ಸಾರಿಗೆ),<br>ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ,<br>ಸಾರಿಗೆ ಭವನ, ನಂ.1, ಸಂಸದ್ ಮಾರ್ಗ,<br>ನವದೆಹಲಿ-110 001. | : | ಅಧಿಕಾರಿಯುತ ನಿರ್ದೇಶಕರು<br>(ಕೇಂದ್ರ ಸರ್ಕಾರದ ಪ್ರತಿನಿಧಿ) |
| 8) ಶ್ರೀ ಪುರುಷೋತ್ತಮ್ ಸಿಂಗ್<br>ವಿಶೇಷಾಧಿಕಾರಿ (ಜಿ.ಪಂ) ಹಾಗೂ<br>ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ,<br>ಬೆಂಗಳೂರು-560 001. | : | ಅಧಿಕಾರಿಯುತ ನಿರ್ದೇಶಕರು |
| 9) ಶ್ರೀ ಮಲ್ಲಿಕಾರ್ಜುನ ಬಿನ್ ಗುರುಲಿಂಗಪ್ಪ ತಡಕಲ್<br>ಮನೆ ನಂ ಇ/2/25, ಕಡಗಂಚಿ ಅಂಚೆ, ಆಳಂದ ತಾಲ್ಲೂಕು,<br>ಕಲಬುರಗಿ ಜಿಲ್ಲೆ. | : | ಅಧಿಕಾರೇತರ ನಿರ್ದೇಶಕರು |

### 2.3 ಸಮಾವೇಶಗೊಂಡ ಸಭೆಗಳು:

2020-21ನೇ ಸಾಲಿನಲ್ಲಿ 3(ಮೂರು) ನಿರ್ದೇಶಕರ ಮಂಡಳಿ ಸಭೆಗಳನ್ನು ನಡೆಸಲಾಗಿದೆ. ಒಟ್ಟು 63 (ಅರವತ್ಮೂರು) ವಿಷಯಗಳನ್ನು ಮಂಡಿಸಿದ್ದು, 63 (ಅರವತ್ಮೂರು) ಠರಾವುಗಳು ಅಂಗೀಕಾರವಾಗಿರುತ್ತವೆ. ಒಂದು ವಿಷಯವು ಪ್ರಸರಣ ಮುಖಾಂತರ ಅಂಗೀಕಾರವಾಗಿರುತ್ತದೆ.

ವರದಿ ವರ್ಷದಲ್ಲಿ ನಡೆಸಲಾದ ಸಭೆಗಳಿಗೆ ಭಾಗವಹಿಸಿದ ನಿರ್ದೇಶಕರ ಹಾಜರಾತಿ ಮಾಹಿತಿಯನ್ನು ಅನುಸೂಚಿ-'ಅ'ದಲ್ಲಿ ತೋರಿಸಲಾಗಿದೆ.

*****

**ಪರಿಚ್ಛೇದ 3**

# ಆಡಳಿತ

## 3.1 ಕಾರ್ಯವ್ಯವಸ್ಥೆ:

ಸಂಸ್ಥೆಯು ವರದಿ ವರ್ಷದಲ್ಲಿ ತನ್ನ ವ್ಯಾಪ್ತಿಯ 9 ವಿಭಾಗಗಳಡಿಯಲ್ಲಿ 52 ಘಟಕಗಳನ್ನು ಹೊಂದಿದೆ. ದಿನಾಂಕ 31–03–2021ರಂದು ಇದ್ದಂತೆ, ಘಟಕಗಳ ಸಂಖ್ಯೆ ಮತ್ತು ಅನುಸೂಚಿಗಳ ಸಂಖ್ಯೆ ಕುರಿತ ವಿಭಾಗವಾರು ಮಾಹಿತಿಯನ್ನು ಕಳೆದ ವರ್ಷದದೊಂದಿಗೆ ಹೋಲಿಸಿ **ತ:ಖ್ತೆ–1**ರಲ್ಲಿ ನೀಡಲಾಗಿದೆ.

**ತ:ಖ್ತೆ–1**

| ಕ್ರ. ಸಂ. | ವಿಭಾಗ | 31–03–2020ರಂದು ಇದ್ದಂತೆ | | 31–03–2021ರಂದು ಇದ್ದಂತೆ | |
|---|---|---|---|---|---|
| | | ಘಟಕಗಳು | ಅನುಸೂಚಿಗಳು | ಘಟಕಗಳು | ಅನುಸೂಚಿಗಳು |
| 1 | ಕಲಬುರಗಿ–1 | 6 | 417 | 6 | 397 |
| 2 | ಕಲಬುರಗಿ–2 | 5 | 437 | 5 | 408 |
| 3 | ಯಾದಗಿರಿ | 4 | 334 | 4 | 315 |
| 4 | ಬೀದರ್ | 6 | 548 | 6 | 501 |
| 5 | ರಾಯಚೂರು | 7 | 590 | 7 | 557 |
| 6 | ಕೊಪ್ಪಳ | 5 | 410 | 5 | 403 |
| 7 | ಬಳ್ಳಾರಿ | 5 | 364 | 5 | 341 |
| 8 | ವಿಜಯಪುರ | 8 | 701 | 8 | 670 |
| 9 | ಹೊಸಪೇಟೆ | 6 | 451 | 6 | 445 |
| | **ಒಟ್ಟು** | **52** | **4252** | **52** | **4037** |

## 3.2 ಸಿಬ್ಬಂದಿ ಸ್ಥಿತಿ ಮತ್ತು ಸಿಬ್ಬಂದಿ ಅನುಪಾತ:

### 3.2.1 ಸಿಬ್ಬಂದಿ ಸ್ಥಿತಿ:

ದಿನಾಂಕ 31–03–2021ರಂದು ಸಂಸ್ಥೆಯಲ್ಲಿ ಒಟ್ಟು 19629 ನೌಕರರಿದ್ದರು. ವರ್ಗವಾರು ವಿವರವನ್ನು **ತ:ಖ್ತೆ–2**ರಲ್ಲಿ ನೀಡಲಾಗಿದೆ.

**ತ:ಖ್ತೆ–2**

| ಕ್ರ. ಸಂ. | ವರ್ಗ | ನೌಕರರ ಸಂಖ್ಯೆ 31–03–2020ರಂದು ಇದ್ದಂತೆ | ನೌಕರರ ಸಂಖ್ಯೆ 31–03–2021ರಂದು ಇದ್ದಂತೆ. |
|---|---|---|---|
| 1 | **ಖಾಯಂ ಸಿಬ್ಬಂದಿ:**<br>ದರ್ಜೆ–1 ಮತ್ತು ದರ್ಜೆ– 2 ಅಧಿಕಾರಿಗಳು | 163 | 159 |

| | | | |
|---|---|---|---|
| 2 | ದರ್ಜೆ–3 ಮತ್ತು ದರ್ಜೆ–4 ನೌಕರರು | | |
| | 1. ಚಾಲಕರು | 5458 | 5227 |
| | 2. ಚಾಲಕ–ಕಂ–ನಿರ್ವಾಹಕರು | 6694 | 6676 |
| | 3. ನಿರ್ವಾಹಕರು | 1698 | 1475 |
| | 4. ಸಂಚಾರ ಮೇಲ್ವಿಚಾರಕ ಸಿಬ್ಬಂದಿ | 737 | 781 |
| | 5. ತಾಂತ್ರಿಕ ಸಿಬ್ಬಂದಿ | 3325 | 3289 |
| | 6. ಆಡಳಿತ ಸಿಬ್ಬಂದಿ | 1947 | 2004 |
| | 7. ಕಾಮಗಾರಿ ಸಿಬ್ಬಂದಿ | 9 | 18 |
| | **ಒಟ್ಟು (ವರ್ಗ 3 &4 )** | **19868** | **19470** |
| | **ಒಟ್ಟು ಸಿಬ್ಬಂದಿ** | **20376** | **19629** |

ದಿನಾಂಕ 31–03–2021ರಂದು ದರ್ಜೆ–1 ಮತ್ತು ದರ್ಜೆ–2 ಅಧಿಕಾರಿಗಳ ಒಟ್ಟು ಸಂಖ್ಯೆ 159 ಆಗಿದ್ದು, ಅವರ ಸಂಖ್ಯೆಯು, ಸಂಸ್ಥೆಯ ಒಟ್ಟು ನೌಕರರ ಸಂಖ್ಯೆಯ ಶೇ.0.81ರಷ್ಟಿದೆ. ಅಧಿಕಾರಿಗಳ ಹಾಗೂ ಒಟ್ಟು ನೌಕರರ ಸಂಖ್ಯೆಯ ಅನುಪಾತವು 1:122 ಆಗಿರುತ್ತದೆ. ಸಂಸ್ಥೆಯಲ್ಲಿ ಒಟ್ಟು 992 ಮಹಿಳಾ ಸಿಬ್ಬಂದಿ ಇದ್ದು, ಸಂಸ್ಥೆಯ ಒಟ್ಟು ನೌಕರರ ಸಂಖ್ಯೆಯ ಶೇ.5.05ರಷ್ಟಿದ್ದಾರೆ.

### 3.2.2 ಸಿಬ್ಬಂದಿ ಪ್ರಮಾಣ/ಅನುಪಾತ:

ವರದಿ ವರ್ಷದ ಕೊನೆಯಲ್ಲಿ ಒಟ್ಟು 4037 ಅನುಸೂಚಿಗಳ ಕಾರ್ಯಾಚರಣೆಗಾಗಿ 19629 ಖಾಯಂ ನೌಕರರು ಕೆಲಸ ನಿರ್ವಹಿಸುತ್ತಿದ್ದರು. ವಿಭಾಗಗಳಲ್ಲಿ ಪ್ರತಿ ಅನುಸೂಚಿಗೆ ನೌಕರರ ಪ್ರಮಾಣ (ಅಧಿಕಾರಿಗಳು ಸೇರಿ) 4.75 ಆಗಿರುತ್ತದೆ. ಸಂಸ್ಥೆಯ ಕೇಂದ್ರ ಕಛೇರಿ, ಪ್ರಾದೇಶಿಕ ತರಬೇತಿ ಕೇಂದ್ರಗಳು, ಪ್ರಾದೇಶಿಕ ಕಾರ್ಯಾಗಾರ ಮತ್ತು ಕಾಮಗಾರಿ ವಿಭಾಗಗಳು ಸೇರಿದಂತೆ, ನೌಕರರ ಪ್ರಮಾಣವು ಪ್ರತಿ ಅನುಸೂಚಿಗೆ 4.86 ಆಗಿರುತ್ತದೆ. ವಿಭಾಗವಾರು ಅನುಸೂಚಿಗಳು ಮತ್ತು ಸಿಬ್ಬಂದಿ ವಿವರವನ್ನು **ಅನುಬಂಧ–1**ರಲ್ಲಿ ನೀಡಲಾಗಿದೆ. ಸಿಬ್ಬಂದಿ ಸಂಖ್ಯೆ ಮತ್ತು ಪ್ರತಿ ಅನುಸೂಚಿಗೆ ಸಿಬ್ಬಂದಿ ಪ್ರಮಾಣ/ಅನುಪಾತ ವಿವರವನ್ನು **ತ:ಖ್ತೆ–3**ರಲ್ಲಿ ನೀಡಲಾಗಿದೆ. ದಿನಾಂಕ 31–03–2021ರಂದು ಇದ್ದಂತೆ, ವರ್ಗವಾರು ವೇತನ ಶ್ರೇಣಿಗಳ ವಿವರವನ್ನು **ಅನುಸೂಚಿ–'ಆ'**ದಲ್ಲಿ ನೀಡಲಾಗಿದೆ.

**ತ:ಖ್ತೆ–3**

| ಕ್ರ.ಸಂ. | ವಿಭಾಗ/ಕಛೇರಿ | 31–03–2020ರಂದು ಇದ್ದಂತೆ | | 31–03–2021ರಂದು ಇದ್ದಂತೆ | |
|---|---|---|---|---|---|
| | | ಸಿಬ್ಬಂದಿ | ಪ್ರತಿ ಅನುಸೂಚಿಗೆ ಸಿಬ್ಬಂದಿ ಪ್ರಮಾಣ | ಸಿಬ್ಬಂದಿ | ಪ್ರತಿ ಅನುಸೂಚಿಗೆ ಸಿಬ್ಬಂದಿ ಪ್ರಮಾಣ |
| 1 | ಕಾರ್ಯಾಚರಣೆ ವಿಭಾಗಗಳು | 20087 | 4.72 | 19346 | 4.79 |
| 2 | ಕೇಂದ್ರ ಕಛೇರಿ/ ತರಬೇತಿ ಕೇಂದ್ರಗಳು/ ಕಾಮಗಾರಿ ವಿಭಾಗಗಳು/ ಪ್ರಾ.ಕಾ | 289 | 0.07 | 283 | 0.07 |
| **ಒಟ್ಟು** | | **20376** | **4.79** | **19629** | **4.86** |

### 3.3 ನೇಮಕಾತಿ:

ವರದಿ ವರ್ಷದಲ್ಲಿ ಯಾವುದೇ ಹುದ್ದೆಯನ್ನು (ನೇರ ನೇಮಕಾತಿ ಮೂಲಕ) ಭರ್ತಿ ಮಾಡಿಕೊಂಡಿರುವುದಿಲ್ಲ.

**ತ:ಖ್ತೆ–4**

| ಕ್ರ. ಸಂ. | ವರ್ಗ | 2020–21ರಲ್ಲಿ ನೇಮಕಗೊಂಡವರ ಸಂಖ್ಯೆ | | | |
|---|---|---|---|---|---|
| | | ಪ.ಜಾ. | ಪ.ಪಂ | ಇತರರು | ಒಟ್ಟು |
| 1 | ಚಾಲಕರು | – | – | – | – |
| 2 | ಚಾಲಕ–ಕಂ–ನಿರ್ವಾಹಕರು | – | – | – | – |

ದಿನಾಂಕ 31–03–2021ರಂದು ಕಾರ್ಯನಿರ್ವಹಿಸುತ್ತಿದ್ದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರ ಸಂಖ್ಯೆಯ ವಿವರವನ್ನು **ತ:ಖ್ತೆ–5**ರಲ್ಲಿ ನೀಡಲಾಗಿದೆ.

**ತ:ಖ್ತೆ–5**

| ಕ್ರ. ಸಂ. | ಹುದ್ದೆ | 31–03–2020ರಂದು ಇದ್ದಂತೆ | | | 31–03–2021ರಂದು ಇದ್ದಂತೆ | | |
|---|---|---|---|---|---|---|---|
| | | ಒಟ್ಟು | ಪ.ಜಾ | ಪ.ಪಂ | ಒಟ್ಟು | ಪ.ಜಾ. | ಪ.ಪಂ. |
| 1 | ದರ್ಜೆ–1 ಮತ್ತು ದರ್ಜೆ–2 ಅಧಿಕಾರಿಗಳು | 163 | 31 | 12 | 159 | 26 | 9 |
| 2 | ದರ್ಜೆ–3 ಮತ್ತು ದರ್ಜೆ–4 ನೌಕರರು : | | | | | | |
| | ಅ) ಆಡಳಿತ ಸಿಬ್ಬಂದಿ | 2657 | 536 | 164 | 2748 | 571 | 176 |
| | ಆ) ಸಂಚಾರ ಸಿಬ್ಬಂದಿ | | | | | | |
| | 1) ಮೇಲ್ವಿಚಾರಕ ಸಿಬ್ಬಂದಿ | 143 | 63 | 16 | 140 | 18 | 1 |
| | 2) ಚಾಲನಾ ಸಿಬ್ಬಂದಿ | 14024 | 2729 | 696 | 13378 | 2614 | 662 |
| | ಇ) ತಾಂತ್ರಿಕ ಸಿಬ್ಬಂದಿ | 3389 | 664 | 183 | 3204 | 613 | 176 |
| | ಒಟ್ಟು (2) | **20213** | **3992** | **1059** | **19470** | **3816** | **1015** |
| **ಒಟ್ಟು (1+2)** | | **260376** | **4023** | **1071** | **19629** | **3842** | **1024** |

### 3.4 ತರಬೇತಿ ಕಾರ್ಯಕ್ರಮಗಳು:

ವರದಿ ವರ್ಷದಲ್ಲಿ ವಿವಿಧ ವರ್ಗದ ಅಧಿಕಾರಿಗಳಿಗೆ/ನೌಕರರಿಗೆ ಸಂಸ್ಥೆಯ ತರಬೇತಿ ಕೇಂದ್ರಗಳಲ್ಲಿ ಮತ್ತು ಹೊರಗಿನ ತರಬೇತಿ ಸಂಸ್ಥೆಗಳಲ್ಲಿ ತರಬೇತಿ ನೀಡಲಾಗಿದೆ.

ವಿವಿಧ ವರ್ಗದ ಒಟ್ಟು 3080 ನೌಕರರಿಗೆ ತರಬೇತಿಯನ್ನು ಪ್ರಾದೇಶಿಕ ತರಬೇತಿ ಕೇಂದ್ರ, ಹುಮನಾಬಾದ್ ಹಾಗೂ ಚಾಲಕರ ತರಬೇತಿ ಕೇಂದ್ರ, ಹಗರಿಬೊಮ್ಮನಹಳ್ಳಿ ಇವುಗಳಲ್ಲಿ ನೀಡಲಾಗಿದೆ. ವಿವರಗಳನ್ನು ತಖ್ತೆ–6ರಲ್ಲಿ ನೀಡಲಾಗಿದೆ.

**ತ:ಖ್ತೆ–6**

| ಕ್ರ. ಸಂ. | ತರಬೇತಿ ಕೇಂದ್ರದ ಹೆಸರು | ತರಬೇತಿ ಪಡೆದವರ ಸಂಖ್ಯೆ | ತರಬೇತಿಯ ವಿಷಯ/ಸ್ವರೂಪ |
|---|---|---|---|
| 1 | ಚಾಲಕರ ತರಬೇತಿ ಕೇಂದ್ರ, ಹ.ಬೊ.ಹಳ್ಳಿ | 1704 | ಪುನಶ್ಚೇತನ ತರಬೇತಿ |
| 2 | ಪ್ರಾದೇಶಿಕ ತರಬೇತಿ ಕೇಂದ್ರ, ಹುಮನಾಬಾದ್ | 1376 | ಪುನಶ್ಚೇತನ ತರಬೇತಿ |
| **ಒಟ್ಟು** | | **3080** | |

**3.5 ಬಹುಮಾನಗಳು :**

ನೌಕರರ ಕೆಲಸದಲ್ಲಿನ ಅತ್ಯುತ್ತಮ ಕಾರ್ಯದಕ್ಷತೆ, ಪ್ರಾಮಾಣಿಕತೆ, ಅನುಕರಣೀಯ ನಡತೆ, ಪ್ರಶಂಸನಾರ್ಹ ಸೇವೆ, ಇತ್ಯಾದಿಯನ್ನು ಗುರುತಿಸಿ, ನಗದು ಬಹುಮಾನ ಮತ್ತು ಪ್ರಮಾಣ ಪತ್ರವನ್ನು ನೀಡುವ ಪದ್ಧತಿ ಸಂಸ್ಥೆಯಲ್ಲಿ ಜಾರಿಯಲ್ಲಿದೆ. ವರದಿ ವರ್ಷದಲ್ಲೂ ವಿಭಾಗಗಳ ವಿವಿಧ ವರ್ಗದ ಅರ್ಹ ನೌಕರರನ್ನು ಗುರುತಿಸಿ ಅವರಿಗೆ ಬಹುಮಾನವನ್ನು ನೀಡಲಾಗಿದೆ. ಅದರಂತೆ ಅಪಘಾತ ರಹಿತ ಚಾಲಕರಿಗೆ ಸುವರ್ಣ ಪದಕ ಹಾಗೂ ಬೆಳ್ಳಿ ಪದಕ ಬಹುಮಾನಗಳನ್ನು ನೀಡಲಾಗುತ್ತಿದೆ.

**3.6 ಶಿಸ್ತು ಮತ್ತು ಗೈರುಹಾಜರಾತಿ ಪ್ರಕರಣಗಳು :**

ವರದಿ ವರ್ಷದಲ್ಲಿ ದಾಖಲಾದ, ವಿಲೇವಾರಿಗೊಂಡ ಮತ್ತು ವರ್ಷಾಂತ್ಯಕ್ಕೆ ಬಾಕಿ ಉಳಿದ ಶಿಸ್ತು ಮತ್ತು ಗೈರುಹಾಜರಾತಿ ಪ್ರಕರಣಗಳ ಸಂಖ್ಯೆಯ ವಿವರವನ್ನು **ತ:ಖ್ತೆ–7**ರಲ್ಲಿ ನೀಡಲಾಗಿದೆ.

**ತ:ಖ್ತೆ–7**

| ಕ್ರ. ಸಂ. | ವಿವರ | 2019–20 | | 2020–21 | |
|---|---|---|---|---|---|
| | | ಗೈರು–ಹಾಜರಾತಿ | ಶಿಸ್ತು | ಗೈರು–ಹಾಜರಾತಿ | ಶಿಸ್ತು |
| 1 | ಹಿಂದಿನ ವರ್ಷದ ಕೊನೆಯ ದಿನದಂದು ಬಾಕಿಯಿದ್ದ ಪ್ರಕರಣಗಳ ಸಂಖ್ಯೆ | 2189 | 3287 | 1638 | 3143 |
| 2 | ವರದಿ ವರ್ಷದಲ್ಲಿ ಪತ್ತೆ ಹಚ್ಚಲಾದ ಪ್ರಕರಣಗಳ ಸಂಖ್ಯೆ : | | | | |
| | ಅ) ನಿರ್ವಾಹಕರಿಗೆ ಸಂಬಂಧಿಸಿದಂತೆ | 1225 | 6298 | 1695 | 6780 |
| | ಆ) ಚಾಲಕರಿಗೆ ಸಂಬಂಧಿಸಿದಂತೆ | 2713 | 3625 | 2025 | 602 |
| | ಇ) ಇತರ ಸಿಬ್ಬಂದಿಗೆ ಸಂಬಂಧಿಸಿದಂತೆ | 1716 | 4830 | 1339 | 2851 |
| | ಒಟ್ಟು (2) | **5654** | **14753** | **5059** | **10233** |
| 3 | ಅಮಾನತ್ತು (ನಿರ್ದಿಷ್ಟ ಶಿಕ್ಷೆಯಾಗಿ) | 0 | 0 | 0 | 0 |
| 4 | ವಿಲೇವಾರಿಗೊಂಡ ಪ್ರಕರಣಗಳ ಸಂಖ್ಯೆ : | | | | |
| | ಅ) ವಜಾ/ಬಿಡುಗಡೆ/ತೆಗೆದುಹಾಕಲ್ಪಟ್ಟ | 104 | 29 | 47 | 31 |
| | ಆ) ಜುಲ್ಮಾನೆ | 2261 | 4259 | 1323 | 2156 |

| | | | | | |
|---|---|---|---|---|---|
| | ಇ) ಇತರ ಶಿಕ್ಷೆಗಳು | 3840 | 10609 | 3735 | 8847 |
| | ಒಟ್ಟು (4) | **6205** | **14897** | **5105** | **11034** |
| 5 | ವರ್ಷದ ಕೊನೆಯ ದಿನದಂದು ಬಾಕಿಯಿದ್ದ ಪ್ರಕರಣಗಳ ಸಂಖ್ಯೆ | **1638** | **3143** | **1592** | **2342** |

ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ದರ್ಜೆ-3 ಮತ್ತು ದರ್ಜೆ-4ರ ವರ್ಗದ ಸಿಬ್ಬಂದಿಯ ಮೇಲೆ ಗುರುತರ ಶಿಕ್ಷೆಯನ್ನು ವಿಧಿಸುವ ಅಧಿಕಾರವನ್ನು ಆಯಾ ವಿಭಾಗದ ಮುಖ್ಯಸ್ಥರು ಹೊಂದಿರುತ್ತಾರೆ. ವಿಭಾಗ ಮಟ್ಟದ ಶಾಖಾ ಮುಖ್ಯಸ್ಥರು ಮತ್ತು ಘಟಕ ವ್ಯವಸ್ಥಾಪಕರು ಸಹ ಅವರವರ ಆಡಳಿತ ನಿಯಂತ್ರಣಕ್ಕೆ ಒಳಪಡುವ ದರ್ಜೆ-3 ಮತ್ತು ದರ್ಜೆ-4 ನೌಕರರಿಗೆ ಲಘು ಶಿಕ್ಷೆಗಳನ್ನು ವಿಧಿಸುವ ಅಧಿಕಾರವನ್ನು ಹೊಂದಿರುತ್ತಾರೆ.

*****

ಪರಿಚ್ಛೇದ 4

# ಕಾರ್ಯಾಚರಣೆ

## 4.0 ಮಾರ್ಗಗಳು, ಮಾರ್ಗ ಕಿ.ಮೀ.ಗಳು, ಅನುಸೂಚಿಗಳು ಮತ್ತು ಅನುಸೂಚಿ ಕಿ.ಮೀ.ಗಳು :

ದಿನಾಂಕ 31–03–2021ರಂದು ಒಟ್ಟು 3641 ಮಾರ್ಗಗಳು ಕಾರ್ಯಾಚರಣೆಯಲ್ಲಿದ್ದವು. ಸರಾಸರಿ ಕ್ರಮಿಸಿದ ಮಾರ್ಗ ದೂರ 97.44 ಕಿ.ಮೀ.ಗಳಿರುತ್ತದೆ.

ದಿನಾಂಕ 31–03–2021ರಂದು ಇದ್ದಂತೆ, ಮಾರ್ಗಗಳು, ಮಾರ್ಗ ಕಿ.ಮೀ.ಗಳು, ಅನುಸೂಚಿಗಳು ಮತ್ತು ಅನುಸೂಚಿ ಕಿ.ಮೀ.ಗಳ ವಿವರವನ್ನು **ತ:ಖ್ತೆ–8**ರಲ್ಲಿ ನೀಡಲಾಗಿದೆ.

**ತ:ಖ್ತೆ–8**

| ಕ್ರ. ಸಂ. | ವಿವರ | ಮಾರ್ಚ್ 31ರಂದು ಇದ್ದಂತೆ | | ವ್ಯತ್ಯಾಸ | |
|---|---|---|---|---|---|
| | | **2020** | **2021** | ವಾಸ್ತವಿಕ | ಶೇ. |
| 1 | ಮಾರ್ಗಗಳ ಸಂಖ್ಯೆ | 3790 | 3641 | –149 | –3.9 |
| 2 | ಮಾರ್ಗ ಕಿ.ಮೀ.ಗಳು | 365943 | 354764 | –11179 | –3.1 |
| 3 | ಮಾರ್ಗ ದೂರ (ಸರಾಸರಿ ಕಿ.ಮೀ.ಗಳು) | 96.55 | 97.44 | 0.88 | 0.9 |
| 4 | ಅನುಸೂಚಿಗಳ ಸಂಖ್ಯೆ | 4252 | 4037 | –215 | –5.1 |
| 5 | ದೈನಿಕ ಅನುಸೂಚಿ ಕಿ.ಮೀ.ಗಳು (ಲಕ್ಷದಲ್ಲಿ) | 15.25 | 14.50 | –0.75 | –4.9 |

ದಿನಾಂಕ 31–03–2021ರಂದು ಇದ್ದಂತೆ, ವಿಭಾಗವಾರು ಮಾರ್ಗ ಮತ್ತು ಮಾರ್ಗ ಕಿ.ಮೀ.ಗಳ ವಿವರವನ್ನು **ಅನುಬಂಧ–2**ರಲ್ಲಿ ನೀಡಲಾಗಿದೆ.

## 4.1 ಅಂತರರಾಜ್ಯ ಮಾರ್ಗಗಳು :

ನೆರೆ ರಾಜ್ಯಗಳ ಜೊತೆ ಪರಸ್ಪರ ಒಪ್ಪಂದದ ಮೇರೆಗೆ ಅಂತರರಾಜ್ಯ ಮಾರ್ಗಗಳ ಕಾರ್ಯಾಚರಣೆ ವಿವರವನ್ನು **ತ:ಖ್ತೆ–9** ರಲ್ಲಿ ಕೊಡಲಾಗಿದೆ.

**ತ:ಖ್ತೆ–9**

| ಕ್ರ. ಸಂ. | ರಾಜ್ಯ | ಮಾರ್ಗಗಳ ಸಂಖ್ಯೆ | ಅನುಸೂಚಿಗಳ ಸಂಖ್ಯೆ | ಅನುಸೂಚಿ ಕಿ.ಮೀ.ಗಳು | | |
|---|---|---|---|---|---|---|
| | | | | ರಾಜ್ಯದ ಒಳಗೆ | ರಾಜ್ಯದ ಹೊರಗೆ | ಒಟ್ಟು |
| 1 | ಆಂಧ್ರ ಪ್ರದೇಶ | 74 | 145 | 30446 | 31771 | 62217 |
| 2 | ತೆಲಂಗಾಣ | 112 | 225 | 43723 | 51545 | 95268 |
| 3 | ಗೋವಾ | 17 | 42 | 15650 | 3434 | 19084 |
| 4 | ಮಹಾರಾಷ್ಟ್ರ | 231 | 400 | 93928 | 68038 | 161966 |
| 5 | ತಮಿಳುನಾಡು (ಪುದುಚೇರಿ ಒಳಗೊಂಡು) | 1 | 2 | 50 | 1046 | 1096 |
| | **ಒಟ್ಟು** | **435** | **814** | **183797** | **155834** | **339631** |

**4.2 ಸಾರಿಗೆ ಸೇವೆಗಳು :**

**(ಅ) ನಗರ ಸಾರಿಗೆ :**

ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು, ಬಳ್ಳಾರಿ, ಕೊಪ್ಪಳ, ಗಂಗಾವತಿ, ಸೇಡಂ, ಹೊಸಪೇಟೆ, ವಿಜಯಪುರ ನಗರ/ಪಟ್ಟಣಗಳಲ್ಲಿ ನಗರಸಾರಿಗೆ ಸೇವೆ ಮತ್ತು ಉಪನಗರ ಸಾರಿಗೆ ಸೇವೆಗಳನ್ನು ಮುಂದುವರೆಸಲಾಗಿದೆ. ಸದರಿ ನಗರ ಸಾರಿಗೆ ವಾಹನಗಳಲ್ಲಿ ಗಣಕೀಕೃತ ಮಾರ್ಗಫಲಕಗಳನ್ನು ಅಳವಡಿಸಿದ್ದು, ಅವುಗಳು ಅನುಸೂಚಿತ ಮಾರ್ಗದಲ್ಲಿ ಪ್ರಯಾಣಿಕರಿಗೆ ವಾಹನ ತಲುಪಿದ ನಿಲುಗಡೆ ಮತ್ತು ನಂತರ ಬರುವ ನಿಲುಗಡೆಯ ಮಾಹಿತಿಯನ್ನು ಪ್ರಕಟಿಸುವ ಸ್ವಯಂಚಾಲಿತ ಪ್ರಕಟಣಾ ವ್ಯವಸ್ಥೆ (ಆಟೋಮ್ಯಾಟಿಕ್ ಅನೌನ್ಸ್‌ಮೆಂಟ್ ಸಿಸ್ಟಮ್) ಸೌಲಭ್ಯವನ್ನು ಹೊಂದಿರುತ್ತದೆ.

ದಿನಾಂಕ 31–03–2021ರಂದು ನಗರ ಸಾರಿಗೆ ಮತ್ತು ಉಪನಗರ ಸೇವೆಗಳ ದೈನಿಕ ಅನುಸೂಚಿ ಕಿ.ಮೀ.ಗಳು 33226 ಆಗಿರುತ್ತದೆ. ಇದು ಸಂಸ್ಥೆಯ ಒಟ್ಟು ಅನುಸೂಚಿ ಕಿ.ಮೀ.ಗಳ ಶೇ.2.29ರಷ್ಟಿರುತ್ತದೆ. ನಗರಸಾರಿಗೆ ಸೇವೆಗಳ ವಿವರವನ್ನು **ತ:ಖ್ತೆ–10**ರಲ್ಲಿ ಕೊಡಲಾಗಿದೆ.

**ತ:ಖ್ತೆ–10**

| ಕ್ರ ಸಂ. | ನಗರ/ಪಟ್ಟಣ | ಮಾರ್ಗಗಳು | | ಮಾರ್ಗ ಕಿ.ಮೀ.ಗಳು | | ಅನುಸೂಚಿಗಳು | | ದೈನಿಕ ಅನುಸೂಚಿ ಕಿ.ಮೀ.ಗಳು | |
|---|---|---|---|---|---|---|---|---|---|
| | | 19–20 | 20–21 | 19–20 | 20–21 | 19–20 | 20–21 | 19–20 | 20–21 |
| 1 | ಕಲಬುರಗಿ–1 | 80 | 64 | 752 | 577 | 71 | 61 | 12454 | 9131 |
| 2 | ಸೇಡಂ | 10 | 10 | 75 | 75 | 3 | 3 | 543 | 543 |
| 3 | ಯಾದಗಿರಿ | 15 | 7 | 107 | 41 | 11 | 5 | 2073 | 718 |
| 4 | ರಾಯಚೂರು | 21 | 11 | 248 | 138 | 26 | 13 | 4787 | 2393 |
| 5 | ಬಳ್ಳಾರಿ | 35 | 10 | 345 | 345 | 37 | 21 | 5662 | 3552 |
| 6 | ಕೊಪ್ಪಳ | 32 | 31 | 515 | 648 | 12 | 8 | 5835 | 1439 |
| 7 | ಗಂಗಾವತಿ | 30 | 27 | 794 | 718 | 18 | 12 | 4294 | 3408 |
| 8 | ಬೀದರ್ | 14 | 14 | 143 | 143 | 17 | 17 | 2638 | 2295 |
| 9 | ವಿಜಯಪುರ | 36 | 23 | 360 | 242 | 45 | 38 | 7154 | 7182 |
| 10 | ಹೊಸಪೇಟೆ | 23 | 21 | 278 | 232 | 26 | 14 | 4685 | 2565 |
| | **ಒಟ್ಟು** | **296** | **218** | **3617** | **3158** | **266** | **192** | **50125** | **33226** |

**(ಆ) ಗ್ರಾಮಾಂತರ ಸಾರಿಗೆ :**

ವರದಿ ವರ್ಷದ ಕೊನೆ ದಿನದಂದು ಸಾಮಾನ್ಯ ಸಾರಿಗೆ ಸೇವೆಗಳ ಕಾರ್ಯಾಚರಣೆ ಪ್ರಮಾಣವು (ನಗರ ಮತ್ತು ಉಪನಗರ ಸೇವೆಗಳು ಒಳಗೊಂಡಂತೆ) ಸಂಸ್ಥೆಯ ಒಟ್ಟು ಸಾರಿಗೆ ಸೇವೆಗಳ ಕಾರ್ಯಾಚರಣೆಯ ಶೇ.37.60ರಷ್ಟಿದ್ದು, ದೈನಿಕ ಅನುಸೂಚಿ ಕಿ.ಮೀ.ಗಳು 545271 ಆಗಿರುತ್ತದೆ. ಸಂಸ್ಥೆಯು ಸಾಮಾನ್ಯ ಸಾರಿಗೆ ಸೇವೆಗಳನ್ನು ಗ್ರಾಮಾಂತರ ಮಾರ್ಗಗಳಲ್ಲಿ ಕಾರ್ಯಾಚರಿಸುವ ಜೊತೆಗೆ, ವೇಗದೂತ, ತಡೆರಹಿತ ಮತ್ತು ರಾತ್ರಿ ಸೇವೆಗಳ (ಸುಖಾಸೀನ ಮತ್ತು ರಾಜಹಂಸ ಸಾರಿಗೆ ಸೇವೆಗಳನ್ನೊಳಗೊಂಡಂತೆ) ಸೌಲಭ್ಯವನ್ನು ಸಹ ಒದಗಿಸಿದೆ. ದಿನಾಂಕ 31–03–2021ರಂದು ಇದ್ದಂತೆ, ಸೇವಾವಾರು ಕಾರ್ಯಾಚರಣೆ ವಿವರವನ್ನು **ತ:ಖ್ತೆ–11**ರಲ್ಲಿ ಕೊಡಲಾಗಿದೆ.

ತ:ಖ್ತೆ-11

| ಕ್ರ. ಸಂ | ಸೇವಾ ಮಾದರಿ | ದೈನಿಕ ಅನುಸೂಚಿ ಕಿ.ಮೀ.ಗಳು | | ಒಟ್ಟು ಕಾರ್ಯಾಚರಣೆಯ ಶೇ. ಪ್ರಮಾಣ | |
|---|---|---|---|---|---|
| | | 2019-20 | 2020-21 | 2019-20 | 2020-21 |
| 1 | ಸಾಮಾನ್ಯ, ನಗರ ಸಾರಿಗೆ ಮತ್ತು ಉಪನಗರ | 648021 | 545271 | 42.5 | 37.6 |
| 2 | ವೇಗದೂತ | 797299 | 833998 | 52.3 | 57.5 |
| 3 | ಸುಖಾಸೀನ/ರಾಜಹಂಸ | 26788 | 21564 | 1.8 | 1.5 |
| 4 | ಹವಾನಿಯಂತ್ರಿತರಹಿತ ಸ್ಲೀಪರ | 45208 | 46036 | 3.0 | 3.2 |
| 5 | ಹವಾನಿಯಂತ್ರಿತ ಜಂಬೂ ಮತ್ತು ಹವಾನಿಯಂತ್ರಿತ ಸ್ಲೀಪರ್ | 7612 | 3222 | 0.5 | 0.2 |
| ಒಟ್ಟು | | **1524928** | **1450091** | **100.0** | **100.0** |

**(i)** **ದೂರಮಾರ್ಗದ ಮತ್ತು ರಾತ್ರಿ ಪ್ರಯಾಣದ ಸಾರಿಗೆ ಸೇವೆಗಳು :** ಸಂಸ್ಥೆಯು ವಿಭಾಗೀಯ ಕೇಂದ್ರ ಸ್ಥಳಗಳ ಮತ್ತು ತಾಲೂಕು ಕೇಂದ್ರಗಳ ನಡುವೆ, ತಾಲೂಕು ಕೇಂದ್ರಗಳಿಂದ ಬೆಂಗಳೂರಿಗೆ ಮತ್ತು ರಾಜ್ಯದ ಹಾಗೂ ನೆರೆ ರಾಜ್ಯದ ಕೆಲವು ಪ್ರಮುಖ ಸ್ಥಳಗಳಿಗೆ ಶೀಘ್ರ ಸಾರಿಗೆ ಸಂಪರ್ಕವನ್ನು ಒದಗಿಸುವುದಕ್ಕಾಗಿ ದೂರ ಮಾರ್ಗ ಮತ್ತು ರಾತ್ರಿ ಸೇವೆಗಳನ್ನು ಕಾರ್ಯಾಚರಿಸುತ್ತಿದೆ. ದಿನಾಂಕ 31-03-2021ರಂದು ಇದ್ದಂತೆ, 300 ಕಿ.ಮೀ.ಗಳಿಂದ 650 ಕಿ.ಮೀ.ಗಳವರೆಗಿನ ಮಾರ್ಗ ದೂರವಿರುವ ಸುಮಾರು 800 ಮಾರ್ಗಗಳಲ್ಲಿ ದೂರ ಪ್ರಯಾಣ ಸಾರಿಗೆ ಸೇವೆಗಳನ್ನು ಕಾರ್ಯಾಚರಣೆ ಮಾಡಲಾಗಿದೆ. ದೂರಮಾರ್ಗ ಸಾರಿಗೆ ಸೇವೆಗಳನ್ನು ಜಿಲ್ಲಾ ಕೇಂದ್ರಗಳಿಂದ ರಾಜ್ಯದ ಮತ್ತು ಹೊರ ರಾಜ್ಯದ ಕೆಲವು ಪ್ರಮುಖ ಸ್ಥಳಗಳಿಗೆ ಸಂಪರ್ಕ ಒದಗಿಸಲು ಕಾರ್ಯಾಚರಣೆ ಮಾಡುತ್ತಿದ್ದು, ಅವುಗಳಲ್ಲಿ ಬಹುತೇಕ ಅನುಸೂಚಿಗಳು ರಾತ್ರಿ ಸೇವೆಗಳಾಗಿವೆ.

**(ii)** **ವೇಗದೂತ ಮತ್ತು ತಡೆರಹಿತ ಸಾರಿಗೆ ಸೇವೆಗಳು:** ಪ್ರಯಾಣದ ಅವಧಿಯನ್ನು ಕಡಿಮೆಗೊಳಿಸುವುದಕ್ಕಾಗಿ ಕಡಿಮೆ ಸಂಖ್ಯೆಯ ನಿಲುಗಡೆ ಕಲ್ಪಿಸಿರುವ ವೇಗದೂತ ಸೇವೆಗಳನ್ನು ಮತ್ತು ಕೆಲವು ಆಯ್ದ ಮಾರ್ಗಗಳಲ್ಲಿ ತಡೆರಹಿತ ವಾಹನಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ದಿನಾಂಕ 31-03-2021ರಂದು ಇದ್ದಂತೆ, 2043 ವೇಗದೂತ ಅನುಸೂಚಿಗಳಿಂದ ದೈನಿಕ 833998 ಕಿ.ಮೀ.ಗಳನ್ನು ಕಾರ್ಯಾಚರಣೆ ಮಾಡಲಾಗಿದ್ದು, ಇದು ಒಟ್ಟು ಕಾರ್ಯಾಚರಣೆಯ ಶೇ.57.51ರಷ್ಟು ಆಗಿರುತ್ತದೆ.

**(iii)** **ಸುಖಾಸೀನ, ಹೈ-ಟೆಕ್ ಮತ್ತು ಹವಾನಿಯಂತ್ರಿತ ಸಾರಿಗೆ ಸೇವೆಗಳು:** ಹಿತಕರ ಪ್ರಯಾಣದ ಅವಶ್ಯಕತೆಗಳನ್ನು ಪೂರೈಸಲು, ಸಂಸ್ಥೆಯು ಪ್ರಯಾಣಿಕರಿಗಾಗಿ ಬಹುತೇಕ ಸುಖಾಸೀನ ಪ್ರತಿಷ್ಠಿತ ಸಾರಿಗೆ ಸೇವೆಗಳನ್ನು ರಾತ್ರಿ ವೇಳೆಯಲ್ಲಿ ಕಾರ್ಯಾಚರಿಸುತ್ತಿದೆ. ದಿನಾಂಕ 31-03-2021ರಂದು, 44 ಸುಖಾಸೀನ/ಹೈ-ಟೆಕ್/ರಾಜಹಂಸ, 08 ಹವಾನಿಯಂತ್ರಿತ, 106 ಹವಾನಿಯಂತ್ರಿತರಹಿತ ಸ್ಲೀಪರ್ ಸಾರಿಗೆ ಸೇವೆಗಳು ಕಾರ್ಯಾಚರಣೆಯಲ್ಲಿದ್ದವು. ಸುಖಾಸೀನ/ರಾಜಹಂಸ ಸಾರಿಗೆ ಸೇವೆಗಳು ದೈನಿಕ 21564 ಕಿ.ಮೀ.ಗಳನ್ನು ಕ್ರಮಿಸಿದ್ದು, ಇದು ಸಂಸ್ಥೆಯು ಕಾರ್ಯಾಚರಿಸಿದ ಒಟ್ಟು ಕಿ.ಮೀ.ಗಳ ಶೇ.1.49 ಆಗಿರುತ್ತದೆ. ಹವಾನಿಯಂತ್ರಿತ ಸಾರಿಗೆ ಸೇವೆಗಳು ದೈನಿಕ 3222 ಕಿ.ಮೀ.ಗಳನ್ನು ಕ್ರಮಿಸಿದ್ದು, ಒಟ್ಟು ಕಿ.ಮಿ.ಗಳ ಶೇ.0.22 ಆಗಿರುತ್ತದೆ. ಹವಾನಿಯಂತ್ರಿತರಹಿತ ಸಾರಿಗೆ ಸೇವೆಗಳು ದೈನಿಕ 46036 ಕಿ.ಮೀ.ಗಳನ್ನು ಕ್ರಮಿಸಿದ್ದು, ಒಟ್ಟು ಕಿ.ಮೀ.ಗಳ ಶೇ.3.17ರಷ್ಟಾಗುತ್ತದೆ.

**(iv) ಪ್ರೋತ್ಸಾಹಕ ಪ್ರಯಾಣ ದರಗಳ ವ್ಯವಸ್ಥೆ:** ಖಾಸಗಿ ಪ್ರವರ್ತಕರ ಪೈಪೋಟಿಯನ್ನು ಪರಿಣಾಮಕಾರಿಯಾಗಿ ಎದುರಿಸಲು ಮತ್ತು ಹೆಚ್ಚಿನ ಸಂಖ್ಯೆಯ ಪ್ರಯಾಣಿಕರನ್ನು ಆಕರ್ಷಿಸಲು ಈ ಕೆಳಕಂಡ ಮಾರ್ಗಗಳಲ್ಲಿ ಪ್ರೋತ್ಸಾಹಕ ಪ್ರಯಾಣ ದರಗಳನ್ನು ನಿಗದಿಪಡಿಸಲಾಗಿದೆ.

- ಕಲಬುರಗಿ–ಬೆಂಗಳೂರು (ನಾನ್ ಎ/ಸಿ ಸ್ಲೀಪರ್)
- ಕಲಬುರಗಿ–ಶಿವಮೊಗ್ಗ (ಎ/ಸಿ ಸ್ಲೀಪರ್)
- ಜೇವರ್ಗಿ–ಬೆಂಗಳೂರು (ನಾನ್ ಎ/ಸಿ ಸ್ಲೀಪರ್)
- ಬೀದರ–ಬೆಂಗಳೂರು (ನಾನ್ ಎ/ಸಿ ಸ್ಲೀಪರ್) ವ್ಹಾಯಾ ಹೈದ್ರಾಬಾದ
- ಬೀದರ–ಬೆಂಗಳೂರು (ರಾಜಹಂಸ್) ವ್ಹಾಯಾ ಹೈದ್ರಾಬಾದ
- ಯಾದಗಿರಿ–ಬೆಂಗಳೂರು ವ್ಹಾಯಾ ಮಂತ್ರಾಲಯ (ನಾನ್–ಎ/ಸಿ ಸ್ಲೀಪರ್)
- ಬಳ್ಳಾರಿ–ಚೆನ್ನೈ (ನಾನ್–ಎ/ಸಿ ಸ್ಲೀಪರ್)
- ಬಳ್ಳಾರಿ–ಹೈದ್ರಾಬಾದ್(ಎ/ಸಿ ಸ್ಲೀಪರ್)
- ಬಳ್ಳಾರಿ–ಬೆಂಗಳೂರು (ನಾನ್–ಎ/ಸಿ ಸ್ಲೀಪರ್)
- ಲಿಂಗಸುಗೂರು–ಬೆಂಗಳೂರು(ರಾಜಹಂಸ)
- ಹಟ್ಟಿ–ಬೆಂಗಳೂರು (ನಾನ್–ಎ/ಸಿ ಸ್ಲೀಪರ್)
- ವಿಜಯಪುರ–ಬೆಂಗಳೂರು (ರಾಜಹಂಸ)
- ವಿಜಯಪುರ–ಬೆಂಗಳೂರು (ನಾನ್–ಎ/ಸಿ ಸ್ಲೀಪರ್)
- ತಾಳಿಕೋಟೆ–ಬೆಂಗಳೂರು (ನಾನ್–ಎ/ಸಿ ಸ್ಲೀಪರ್)
- ಬ.ಬಾಗೇವಾಡಿ–ಬೆಂಗಳೂರು (ರಾಜಹಂಸ/ಸುಹಾಸ)
- ಬ.ಬಾಗೇವಾಡಿ–ಬೆಂಗಳೂರು (ರಾಜಹಂಸ/ಸುಹಾಸ)
- ಹಗರಿಬೊಮ್ಮನಹಳ್ಳಿ–ಬೆಂಗಳೂರು (ನಾನ್–ಎ/ಸಿ ಸ್ಲೀಪರ್)

**4.3 ಪ್ರಯಾಣ ದರಗಳು :**

ಪ್ರಯಾಣ ದರಗಳನ್ನು ದಿನಾಂಕ 25/26.2.2020ರ ಮಧ್ಯರಾತ್ರಿಯಿಂದ ಜಾರಿಗೆ ಬರುವಂತೆ ಹೆಚ್ಚಿಗೆ(12.5%)ಮಾಡಲಾಗಿದೆ. ಪ್ರಯಾಣ ದರಗಳ ವಿವರವನ್ನು **ಅನುಸೂಚಿ–'ಇ'ನಲ್ಲಿ** ಕೊಡಲಾಗಿದೆ. ವರದಿ ವರ್ಷದಲ್ಲಿ ಪ್ರಯಾಣ ದರಗಳನ್ನು ಪರಿಷ್ಕರಿಸಿರುವುದಿಲ್ಲ.

**4.4 ಕಾರ್ಯಾಚರಣೆಯ ಪ್ರಗತಿ:**

ಸಂಸ್ಥೆಯು ವರದಿ ವರ್ಷದಲ್ಲಿ ಕಾರ್ಯಾಚರಣೆಯಲ್ಲಿದ್ದ ಸಾರಿಗೆ ಸೇವೆಗಳನ್ನು ಮತ್ತಷ್ಟು ಬಲಪಡಿಸುವತ್ತ ಪ್ರಯತ್ನವನ್ನು ಮುಂದುವರಿಸಿದೆ. ಕಾರ್ಯಾಚರಣೆಯ ಪ್ರಮುಖ ಸಾಧನೆಗಳನ್ನು ಈ ಮುಂದಿನ ಅಂಕಣಗಳಲ್ಲಿ ನೀಡಲಾಗಿದೆ.

**(ಅ) ಕ್ರಮಿಸಿದ ಕಿ.ಮೀ.ಗಳು :**

ವರದಿ ವರ್ಷದಲ್ಲಿ ಕಾರ್ಯಾಚರಿಸಿದ ಕಿ.ಮೀ.ಗಳ ವಿವರವನ್ನು **ತ:ಖ್ತೆ–12**ರಲ್ಲಿ ಕೊಡಲಾಗಿದೆ.

ತ:ಖ್ತೆ–12

| ಕ್ರ. ಸಂ. | ಕಾರ್ಯಾಚರಣೆ ವಿವರ | 2019–20 | 2020–21 |
|---|---|---|---|
| 1 | ಕಾರ್ಯಾಚರಣೆಯಾದ ಕಿ.ಮೀ.ಗಳು (ಲಕ್ಷ)<br>ಅ) ಒಟ್ಟು ಕಿ.ಮೀ.ಗಳು | 5169.41 | 3112.65 |
| | ಆ) ಪರಿಣಾಮಕಾರಿ ಕಿ.ಮೀ.ಗಳು | 5064.17 | 3057.44 |
| | ಇ) ಆದಾಯರಹಿತ ಕಿ.ಮೀ.ಗಳು | 105.24 | 55.21 |
| 2 | ಪರಿಣಾಮಕಾರಿ ಕಿ.ಮೀ.ಗಳಿಗೆ<br>ಆದಾಯರಹಿತ ಕಿ.ಮೀ.ಗಳ ಶೇ. ಪ್ರಮಾಣ | 2.1 | 1.8 |
| 3 | ದೈನಿಕ ಪರಿಣಾಮಕಾರಿ ಕಿ.ಮೀ.ಗಳು (ಲಕ್ಷ) | 13.84 | 8.38 |

ವರದಿ ವರ್ಷದಲ್ಲಿ 3057.44 ಲಕ್ಷ ಪರಿಣಾಮಕಾರಿ ಕಿ.ಮೀ.ಗಳು ಕಾರ್ಯಾಚರಣೆಯಾಗಿವೆ. ಆದಾಯರಹಿತ ಕಿ.ಮೀ.ಗಳ ಶೇ. ಪ್ರಮಾಣವು (ಪರಿಣಾಮಕಾರಿ ಕಿ.ಮೀ.ಗಳಿಗೆ) ಶೇ. 1.8ರಷ್ಟು ಆಗಿದೆ. ಕಾರ್ಯಾಚರಣೆಯಾದ ಕಿ.ಮೀ.ಗಳ ವಿಭಾಗವಾರು ವಿವರವನ್ನು **ಅನುಬಂಧ–3**ರಲ್ಲಿ ಕೊಡಲಾಗಿದೆ.

**(ಆ) ವಾಹನಗಳು, ಅವುಗಳ ಬಳಕೆ ಮತ್ತು ಸಂಚರಿಸಿದ ಪ್ರಯಾಣಿಕರು :**

ವರದಿ ವರ್ಷದಲ್ಲಿ ಕಾರ್ಯಾಚರಣೆಗಾಗಿ ಬಳಸಲಾದ ವಾಹನಗಳ ಸಂಖ್ಯೆ ಮತ್ತು ಅವುಗಳ ಬಳಕೆಯನ್ನು ಕಳೆದ ವರ್ಷದದೊಂದಿಗೆ ಹೋಲಿಸಿ **ತಃಖ್ತೆ–13**ರಲ್ಲಿ ಕೊಡಲಾಗಿದೆ.

ತಃಖ್ತೆ–13

| ಕ್ರ. ಸಂ. | ಕಾರ್ಯಾಚರಣೆ ಅಂಶಗಳು | ವರ್ಷ | | ಹಿಂದಿನ ವರ್ಷಕ್ಕೆ ವ್ಯತ್ಯಾಸ | |
|---|---|---|---|---|---|
| | | 2019–20 | 2020–21 | ವಾಸ್ತವಿಕ | ಶೇ. |
| 1 | ಸರಾಸರಿ ಹೊಂದಿದ ವಾಹನಗಳ ಸಂಖ್ಯೆ | 4722.5 | 4653.7 | –68.8 | –1.5 |
| 2 | ಸರಾಸರಿ ಓಡಾಡಿದ ವಾಹನಗಳ ಸಂಖ್ಯೆ | 4031.6 | 2664.3 | –1367.3 | –33.9 |
| 3 | ವಾಹನ ಸಮೂಹ ಬಳಕೆ (ಶೇ.) | 85.4 | 57.2 | –28.1 | –32.9 |
| 4 | ಸರಾಸರಿ ವಾಹನ ಬಳಕೆ (ಕಿ.ಮೀ.ಗಳು)<br>ಅ)ಒಟ್ಟು ಕಿ.ಮೀ.ಗಳ ಮೇಲೆ<br>ಆ)ಪರಿಣಾಮಕಾರಿ ಕಿ.ಮೀ.ಗಳ ಮೇಲೆ | 350<br>343 | 320<br>314 | –30.3<br>–28.8 | –8.6<br>–8.4 |
| 5 | ಸರಾಸರಿ ಕೊಂಡೊಯ್ಯುವ ಸಾಮರ್ಥ್ಯ | 51.1 | 51.1 | 0.0 | 0.0 |
| 6 | ಕೊಂಡೊಯ್ದ ಪ್ರಯಾಣಿಕರ ಸಂಖ್ಯೆ (ಲಕ್ಷ) | 4848.06 | 1911.25 | –2936.81 | –60.5 |
| 7 | ಸರಾಸರಿ ಪ್ರತಿದಿನ ಕೊಂಡೊಯ್ದ ಪ್ರಯಾಣಿಕರ ಸಂಖ್ಯೆ (ಲಕ್ಷ) | 13.58 | 5.24 | –8.34 | -61.4 |

ವರದಿ ವರ್ಷದಲ್ಲಿ ವಿಭಾಗಗಳು ಸರಾಸರಿ ಹೊಂದಿದ ವಾಹನಗಳ ಸಂಖ್ಯೆ 4653.7 ಮತ್ತು ಸರಾಸರಿ ಓಡಾಡಿದ ವಾಹನಗಳ ಸಂಖ್ಯೆ 2664.3 ಆಗಿದ್ದು, ವಾಹನ ಸಮೂಹ ಬಳಕೆಯಲ್ಲಿ ಶೇ.57.2ರ ಸಾಧನೆಯಾಗಿದೆ. ಸರಾಸರಿ ವಾಹನ ಬಳಕೆ ಒಟ್ಟು ಕಿ.ಮೀ.ಗಳ ಮೇಲೆ 320 ಕಿ.ಮೀ.ಗಳು ಹಾಗೂ ಪರಿಣಾಮಕಾರಿ ಕಿಮೀ.ಗಳ ಮೇಲೆ 314

ಕಿ.ಮೀ.ಗಳು ಆಗಿದೆ. ವಿಭಾಗವಾರು ವಾಹನ ಬಳಕೆ, ಸರಾಸರಿ ಓಡಾಡಿದ ವಾಹನಗಳ ಮೇಲೆ ಮತ್ತು ವಾಹನ ಬಲದ ಮೇಲಿನ ವಿವರವನ್ನು **ಅನುಬಂಧ–4**ರಲ್ಲಿ ನೀಡಲಾಗಿದೆ. ವರದಿ ವರ್ಷದಲ್ಲಿ ಒಟ್ಟು 1911.25ಲಕ್ಷ ಪ್ರಯಾಣಿಕರು ಪ್ರಯಾಣಿಸಿದ್ದು, ಸರಾಸರಿ ಪ್ರತಿದಿನ ಕೊಂಡೊಯ್ದ ಪ್ರಯಾಣಿಕರ ಸಂಖ್ಯೆಯು 5.24 ಲಕ್ಷ ಇರುತ್ತದೆ.

**(ಇ) ಸರಕು ಸರಂಜಾಮುಗಳ ಸಾಗಣೆ :**

ಪ್ರತಿ ವಯಸ್ಕ ಪ್ರಯಾಣಿಕನು 30 ಕೆ.ಜಿ.ಯಷ್ಟು ಹಾಗೂ ಬಾಲ ಪ್ರಯಾಣಿಕನು 15 ಕೆ.ಜಿ.ಯಷ್ಟು ಸರಕನ್ನು ತಮ್ಮ ಜೊತೆಯಲ್ಲಿ ಉಚಿತವಾಗಿ ಒಯ್ಯುವ ಸೌಲಭ್ಯವನ್ನು ವರದಿ ವರ್ಷದಲ್ಲಿಯೂ ಮುಂದುವರಿಸಲಾಗಿದೆ. ಇದಕ್ಕೂ ಮೇಲ್ಪಟ್ಟ ಸರಕುಗಳಿಗೆ ಕೆಳಕಂಡ ದರವನ್ನು ನಿಗದಿಪಡಿಸಲಾಗಿದೆ.

1. **ಸರಕು ದರ :** 20 ಕೆ.ಜಿ. ತೂಕದ ಪ್ರತಿ ಹೊರೆಗೆ 1 ರಿಂದ 5ನೇ ಹಂತದವರೆಗೆ ರೂ.05.00 (ಕನಿಷ್ಠ ರೂ.5)
2. **ವರ್ತಮಾನ ಪತ್ರಿಕೆ:** ಅ) 5 ಕೆ.ಜಿ. ತೂಕದ ಪ್ರತಿ ಹೊರೆಗೆ ಅಥವಾ ಅದರ ಭಾಗಾಂಶಕ್ಕೆ (ದೂರದ ಮಿತಿಯಿಲ್ಲದಂತೆ) ರೂ. 5.00 ಆ) 5 ಕೆ.ಜಿ. ತೂಕದ ವರ್ತಮಾನ ಪತ್ರಿಕೆಗಳನ್ನು 1.0 ಯೂನಿಟ್ ಎಂದು ಪರಿಗಣಿಸಲಾಗುವುದು

**(ಈ) ಬಸ್ ನಿಲ್ದಾಣಗಳು ಮತ್ತು ಪ್ರಯಾಣಿಕರ ರಸ್ತೆಯಂಚಿನ ಆಶ್ರಯದಾಣಗಳು :**

31–03–2021ರಂದು ಇದ್ದಂತೆ, ಸಂಸ್ಥೆಯು ಒಟ್ಟು 154 ಖಾಯಂ ಬಸ್ ನಿಲ್ದಾಣಗಳನ್ನು, 922 ಗ್ರಾಮೀಣ ರಸ್ತೆಯಂಚಿನ ಆಶ್ರಯದಾಣಗಳನ್ನು ಮತ್ತು 155 ನಗರಸಾರಿಗೆ ಆಶ್ರಯದಾಣಗಳನ್ನು ಹೊಂದಿದೆ. ಸಂಸ್ಥೆಯು ನಿರ್ಮಿಸಿ ನಿರ್ವಹಿಸುತ್ತಿರುವ ಎಲ್ಲಾ ಬಸ್ ನಿಲ್ದಾಣಗಳಲ್ಲಿ ಪ್ರಯಾಣಿಕರ ಅತ್ಯಾವಶ್ಯಕ ಸೌಲಭ್ಯಗಳಾದ ನಿರೀಕ್ಷಣಾ ಕೊಠಡಿ, ಕುಡಿಯುವ ನೀರಿನ ಸೌಲಭ್ಯ, ಶೌಚಾಲಯ ಮುಂತಾದವುಗಳನ್ನು ಒದಗಿಸಲಾಗಿದೆ. ಪ್ರಯಾಣಿಕರ ಅನುಕೂಲಕ್ಕಾಗಿ 102 ಉಪಹಾರ ಗೃಹಗಳನ್ನು, 1173 ವಿವಿಧ ವಾಣಿಜ್ಯ ಮಳಿಗೆಗಳನ್ನು ತಂಪು ಪಾನೀಯ, ಹಣ್ಣು, ಪಾನ್ ಬೀಡಾ, ಪುಸ್ತಕ, ಲೇಖನ ಸಾಮಗ್ರಿ ಇತ್ಯಾದಿ ಮಾರಾಟಕ್ಕಾಗಿ ಒದಗಿಸಲಾಗಿದೆ. ವರದಿ ವರ್ಷದ ಕೊನೆಯಲ್ಲಿ ಒದಗಿಸಲಾಗಿದ್ದ ಸೌಲಭ್ಯ ಹಾಗೂ ಅನುಕೂಲತೆಗಳನ್ನು **ತಃಖ್ತೆ–14**ರಲ್ಲಿ ಕೊಡಲಾಗಿದೆ.

**ತಃಖ್ತೆ–14**

| ಕ್ರ. ಸಂ. | ಸೌಲಭ್ಯ | 31–03–2020ರಂದು ಇದ್ದಂತೆ | 31–03–2021 ರಂದು ಇದ್ದಂತೆ |
|---|---|---|---|
| 1 | ಬಸ್ ನಿಲ್ದಾಣಗಳು | 154 | 154 |
| 2 | ಗ್ರಾಮಾಂತರ ರಸ್ತೆಯಂಚಿನ ಆಶ್ರಯದಾಣಗಳು | 943 | 922 |
| 3 | ನಗರಸಾರಿಗೆ ಆಶ್ರಯದಾಣಗಳು | 130 | 155 |
| 4 | ಉಪಹಾರ ಗೃಹಗಳು | 88 | 102 |
| 5 | ತಂಪು ಪಾನೀಯ, ಹಣ್ಣು, ಪಾನ್ ಬೀಡ, ಪುಸ್ತಕ, ಇತರ ಮಳಿಗೆಗಳು | 1112 | 1173 |

**(ಉ) ಮುಂಗಡ ಟಿಕೆಟ್ ಖರೀದಿ ಮತ್ತು ಆಸನ ಕಾಯ್ದಿರಿಸುವ ಸೌಲಭ್ಯಗಳು :**

ಮುಂಗಡ ಟಿಕೆಟ್ ನೀಡುವ ವ್ಯವಸ್ಥೆ ವರದಿ ವರ್ಷದಲ್ಲಿಯೂ ಜಾರಿಯಲ್ಲಿದ್ದು, ಮುಂಗಡ ಟಿಕೆಟ್‌ಗಳನ್ನು 30 ದಿನ ಮುಂಚಿತವಾಗಿ ಮತ್ತು ಬಸ್ ನಿಲ್ದಾಣ ಕೌಂಟರ್‌ಗಳಲ್ಲಿ ಬಸ್ ಹೊರಡುವ ನಿಗದಿತ ಸಮಯದ ಅರ್ಧ ಗಂಟೆ ಮುಂಚಿತವರೆಗೆ ಮುಂಗಡ ಟಿಕೆಟ್ ನೀಡಲಾಗುತ್ತಿದೆ.

4 ಮತ್ತು ಅದಕ್ಕಿಂತ ಹೆಚ್ಚಿನ ಟಿಕೆಟ್‌ಗಳನ್ನು ಮುಂಗಡವಾಗಿ ಕಾಯ್ದಿರಿಸುವವರಿಗೆ ಪ್ರಯಾಣ ದರದಲ್ಲಿ ಶೇ. 5ರಷ್ಟು ರಿಯಾಯತಿ ನೀಡಲಾಗುತ್ತಿದೆ. ಹೋಗುವ ಪ್ರಯಾಣ ಮತ್ತು ಹಿಂದಿರುಗುವ ಪ್ರಯಾಣದ ಟಿಕೆಟ್‌ಗಳನ್ನು ಮುಂಗಡವಾಗಿ ಏಕಕಾಲಕ್ಕೆ ಖರೀದಿಸಿದಲ್ಲಿ, ಹಿಂದಿರುಗುವ ಪ್ರಯಾಣದ ದರದ ಶೇ. 10ರಷ್ಟು ರಿಯಾಯತಿಯನ್ನು ನೀಡಲಾಗುತ್ತಿದೆ.

ಅವತಾರ್ (AWATAR) ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಬರಲಾಗಿದೆ. ಈ ವ್ಯವಸ್ಥೆಯನ್ನು ಪ್ರಯಾಣಿಕರು ಎಲ್ಲಿಯಾದರೂ ಯಾವಾಗಲಾದರೂ ಅಂತರ್‌ಜಾಲದ ಮೂಲಕ ಮುಂಗಡ ಟಿಕೆಟ್ ಕಾಯ್ದಿರಿಸಬಹುದಾಗಿದೆ. ಈ ವ್ಯವಸ್ಥೆಯು ಕಲಬುರಗಿಯ ಕೇಂದ್ರೀಯ ಬಸ್ ನಿಲ್ದಾಣ ಮತ್ತು ರಾಷ್ಟ್ರಪತಿ ವೃತ್ತದ ಕೌಂಟರ್‌ಗಳಲ್ಲಿ ಚಾಲ್ತಿಯಲ್ಲಿದೆ. ಶಹಾಪುರ, ಯಾದಗಿರಿ, ಬಳ್ಳಾರಿ, ಹೊಸಪೇಟೆ, ರಾಯಚೂರು, ಬೀದರ್, ವಿಜಯಪುರ, ಸಿಂಧನೂರು, ಲಿಂಗಸುಗೂರು, ಹುಮನಾಬಾದ್, ಕೊಪ್ಪಳ, ಗಂಗಾವತಿ ಮತ್ತು ಹಗರಿಬೊಮ್ಮನಹಳ್ಳಿ ನಗರ/ಪಟ್ಟಣಗಳ ಕೇಂದ್ರೀಯ ಬಸ್ ನಿಲ್ದಾಣಗಳಲ್ಲಿ ಹಾಗೂ ಹೈದ್ರಾಬಾದ್, ಮಂತ್ರಾಲಯದಲ್ಲಿ ಗಣಕೀಕೃತ ಮುಂಗಡ ಟಿಕೆಟ್ ಕಾಯ್ದಿರಿಸಲಾಗುತ್ತಿದೆ ಹಾಗೂ ಎಲ್ಲಾ ಪ್ರಮುಖ ಘಟಕ ಕೇಂದ್ರ ಸ್ಥಳಗಳಲ್ಲೂ ಈ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಇದಲ್ಲದೇ, ಇಂಟರ್‌ನೆಟ್ ಸೌಲಭ್ಯದಿಂದ ಟಿಕೆಟ್‌ಗಳನ್ನು **ಈ–ಟಿಕೆಟಿಂಗ್ ಮತ್ತು ಎಂ–ಟಿಕೆಟಿಂಗ್ (ಮೊಬೈಲ್ ಪೋನ್ ಮೂಲಕ)** ಸೇವೆಗಳ ಮೂಲಕ ಪ್ರಯಾಣಿಕರು ಮುಂಗಡವಾಗಿ ಕಾಯ್ದಿರಿಸಬಹುದಾಗಿದೆ. ವರ್ಷಾಂತ್ಯಕ್ಕೆ ಸಂಸ್ಥೆಯ 16 ಹಾಗೂ ಖಾಸಗಿಯವರ 63 ಮುಂಗಡ ಟಿಕೆಟ್ ವಿತರಣಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದವು. ಮುಂಗಡ ಟಿಕೇಟ್ ಕಾಯ್ದಿರಿಸುವುದಕ್ಕಾಗಿ ಪ್ರಯಾಣ ದರ ರೂ. 200ಕ್ಕಿಂತ ಕಡಿಮೆ ಇದ್ದಲ್ಲಿ, ರೂ.5.00 ಹಾಗೂ ರೂ. 200ಕ್ಕಿಂತ ಹೆಚ್ಚು ಇದ್ದಲ್ಲಿ, ರೂ. 10 ಅನ್ನು ಸಂಸ್ಕರಣಾ ಶುಲ್ಕವನ್ನಾಗಿ ವಿಧಿಸಲಾಗುತ್ತಿದೆ.

**(ಊ) ಸಾಂದರ್ಭಿಕ ಸಾರಿಗೆ ಒಪ್ಪಂದದ ಸೌಲಭ್ಯ :**

ದೈನಿಕ ಪ್ರಯಾಣಿಕರ ಸೇವೆಯ ಜೊತೆಗೆ, ಸಂಸ್ಥೆಯು ಸಾರ್ವಜನಿಕರ ಅನುಕೂಲಕ್ಕಾಗಿ ನಿಗದಿತ ದರಗಳಲ್ಲಿ ಸಾಂದರ್ಭಿಕ ಸಾರಿಗೆ ಒಪ್ಪಂದದ ಮೇರೆಗೆ ವಾಹನಗಳನ್ನು ಕಿ.ಮೀ. ಅಥವಾ ಅವಧಿಯ ಆಧಾರದ ಮೇಲೆ ಒದಗಿಸುತ್ತಿದೆ. ದಿನಾಂಕ 31–03–2021ರಂದು ಜಾರಿಯಲ್ಲಿದ್ದ ಸಾಂದರ್ಭಿಕ ಒಪ್ಪಂದದ ದರಗಳ ಪಟ್ಟಿಯನ್ನು **ಅನುಸೂಚಿ–'ಈ'**ನಲ್ಲಿ ಕೊಡಲಾಗಿದೆ.

**(ಋ) ರಿಯಾಯಿತಿ/ನಿಯತಕಾಲಿಕ ಮತ್ತು ಉಚಿತ ಪಾಸ್‌ಗಳು :**

ಸಂಸ್ಥೆಯು ವಿವಿಧ ವರ್ಗದ ಪ್ರಯಾಣಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ವಿತರಿಸುತ್ತಿರುವ ಪಾಸುಗಳಲ್ಲಿ ನೀಡಿರುವ ರಿಯಾಯಿತಿ ಕುರಿತ ಮಾಹಿತಿಯನ್ನು ಈ ಮುಂದೆ ನೀಡಲಾಗಿದೆ.

**(i) ವಿದ್ಯಾರ್ಥಿಗಳು :**

| | | |
|---|---|---|
| 1 | 7ನೇ ತರಗತಿವರೆಗಿನ ಶಾಲಾ ವಿದ್ಯಾರ್ಥಿಗಳಿಗೆ | 10 ತಿಂಗಳ ಅವಧಿಗೆ ಉಚಿತ (ಗರಿಷ್ಠ 60 ಕಿ.ಮೀ.ಗಳು) |
| 2 | 8, 9, 10ನೇ ತರಗತಿಯ ಹೈಸ್ಕೂಲ್ ವಿದ್ಯಾರ್ಥಿಗಳಿಗೆ (ಬಾಲಕರು) | 10 ತಿಂಗಳಿಗೆ ರೂ.600 (ಗರಿಷ್ಠ 60 ಕಿ.ಮೀ.ಗಳು) |
| 3 | 8, 9, 10ನೇ ತರಗತಿಯ ಹೈಸ್ಕೂಲ್ ವಿದ್ಯಾರ್ಥಿನಿಯರಿಗೆ | 10 ತಿಂಗಳಿಗೆ ರೂ.400 (ಗರಿಷ್ಠ 60 ಕಿ.ಮೀ.ಗಳು) |
| 4 | ಕಾಲೇಜ್ & ಡಿಪ್ಲೊಮಾ ವಿದ್ಯಾರ್ಥಿಗಳಿಗೆ | 10 ತಿಂಗಳಿಗೆ ರೂ.900 (ಗರಿಷ್ಠ 60 ಕಿ.ಮೀ.ಗಳು) |
| 5 | ಐ.ಟಿ.ಐ. ವಿದ್ಯಾರ್ಥಿಗಳಿಗೆ | 12 ತಿಂಗಳಿಗೆ ರೂ.1150 (ಗರಿಷ್ಠ 60 ಕಿ.ಮೀ.ಗಳು) |
| 6 | ವೈದ್ಯಕೀಯ, ತಾಂತ್ರಿಕ ಹಾಗೂ ಇನ್ನಿತರ ವಿದ್ಯಾರ್ಥಿಗಳಿಗೆ | 10 ತಿಂಗಳಿಗೆ ರೂ.1400 (ಗರಿಷ್ಠ 60 ಕಿ.ಮೀ.ಗಳು) |
| 7 | ಸಂಜೆ ಕಾಲೇಜ್ / ಪಿಹೆಚ್.ಡಿ. ವಿದ್ಯಾರ್ಥಿಗಳಿಗೆ | 10 ತಿಂಗಳಿಗೆ ರೂ.1200 (ಗರಿಷ್ಠ 60 ಕಿ.ಮೀ.ಗಳು) |
| 8 | ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗೆ | ಉಚಿತ ಬಸ್‌ಪಾಸ್ |

(ಸೇವಾ ಶುಲ್ಕ ಪ್ರತಿ ಪಾಸ್‌ಗೆ ಪ್ರತಿ ಬಾರಿ ರೂ. 100 ಹಾಗೂ ಅಪಘಾತ ಪರಿಹಾರ ನಿಧಿಗಾಗಿ ಪ್ರತಿ ವಿದ್ಯಾರ್ಥಿಯಿಂದ ರೂ.5ನ್ನು ಪಡೆಯಲಾಗುತ್ತಿದೆ.)

**(ii) ವಿದ್ಯಾರ್ಥಿಯೇತರರು :**

| | |
|---|---|
| 1 | ಕರ್ನಾಟಕ ಸಂಗೀತ ನಾಟಕ ಅಕಾಡೆಮಿಯವರಿಂದ ಪುರಸ್ಕೃತವಾದ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ನಾಟಕ, ಯಕ್ಷಗಾನ ತಂಡದವರಿಗೆ ಪ್ರಯಾಣ ದರದಲ್ಲಿ ಶೇ.50ರಷ್ಟು ರಿಯಾಯಿತಿ ನೀಡಲಾಗಿದೆ. |
| 2 | ಸಮವಸ್ತ್ರ ಧರಿಸಿ ಕರ್ತವ್ಯ ನಿರ್ವಹಿಸುವ ಗೃಹರಕ್ಷಕರಿಗೆ ನಗರಸಾರಿಗೆ ಬಸ್‌ಗಳಲ್ಲಿ ಪ್ರಯಾಣ ಮಾಡಲು ಉಚಿತ ಪಾಸ್‌ಗಳನ್ನು ನೀಡಲಾಗಿದೆ. |
| 3 | ನಗರಸಾರಿಗೆ, ನಗರ ಹೊರವಲಯ ಹಾಗೂ ಗ್ರಾಮಾಂತರ ವಾಹನಗಳಲ್ಲಿ ರಾಜ್ಯಾದ್ಯಂತ ಪ್ರಯಾಣ ಮಾಡಲು ಅಂಧರಿಗೆ ಉಚಿತ ಪಾಸ್‌ಗಳನ್ನು ನೀಡಲಾಗಿದೆ. |
| 4 | ಅಂಗವಿಕಲರಿಗೆ ತಮ್ಮ ವಾಸಸ್ಥಳದಿಂದ 100 ಕಿ.ಮೀ.ಗಳವರೆಗೆ ಪ್ರಯಾಣ ಮಾಡಲು ರಿಯಾಯಿತಿ ಪಾಸ್‌ಗಳನ್ನು ನೀಡಲಾಗಿದೆ. |
| 5 | ಸ್ವಾತಂತ್ರ್ಯ ಯೋಧರಿಗೆ ಕರ್ನಾಟಕದಾದ್ಯಂತ ಉಚಿತವಾಗಿ ಪ್ರಯಾಣ ಮಾಡಲು ಅವಕಾಶ ಕಲ್ಪಿಸಲಾಗಿದೆ. 75 ವರ್ಷ ಮೀರಿದ ಸ್ವಾತಂತ್ರ್ಯ ಯೋಧರಿಗೆ ಒಬ್ಬ ಸಹಾಯಕನನ್ನು ತಮ್ಮ ಜೊತೆಯಲ್ಲಿ ಉಚಿತವಾಗಿ ಕರೆದೊಯ್ಯಲು ಅವಕಾಶ ಕಲ್ಪಿಸಲಾಗಿದೆ. |
| 6 | ಗೋವಾ ಸ್ವಾತಂತ್ರ್ಯ ಯೋಧರಿಗೆ ಕರ್ನಾಟಕದಾದ್ಯಂತ ಉಚಿತವಾಗಿ ಪ್ರಯಾಣ ಮಾಡಲು ಅವಕಾಶ ಕಲ್ಪಿಸಲಾಗಿದೆ. 75 ವರ್ಷ ಮೀರಿದ ಗೋವಾ ಸ್ವಾತಂತ್ರ್ಯ ಯೋಧರಿಗೆ ಒಬ್ಬ ಸಹಾಯಕನನ್ನು ತಮ್ಮ ಜೊತೆಯಲ್ಲಿ ಉಚಿತವಾಗಿ ಕರೆದೊಯ್ಯಲು ಅವಕಾಶ ಕಲ್ಪಿಸಲಾಗಿದೆ. |
| 7 | 60 ವರ್ಷ ಮೇಲ್ಪಟ್ಟ ಹಿರಿಯ ನಾಗರೀಕರಿಗೆ ಅಂತರ್‌ರಾಜ್ಯ ಮಾರ್ಗವೂ ಸೇರಿದಂತೆ ಸಾಮಾನ್ಯ/ ವೇಗದೂತ/ ರಾಜಹಂಸ ವಾಹನಗಳಲ್ಲಿ ಪ್ರಯಾಣಿಸಲು ಶೇ.25ರಷ್ಟು ರಿಯಾಯತಿಯನ್ನು ನೀಡಲಾಗಿದೆ. |
| 8 | ಸಾರ್ವಜನಿಕರಿಗೆ ನಗರಸಾರಿಗೆಯಲ್ಲಿ ಪ್ರಯಾಣ ಮಾಡಲು ತಿಂಗಳಿಗೆ ರೂ. 700 ಮೌಲ್ಯದ ಮಾಸಿಕ ಪಾಸ್‌ಗಳನ್ನು ವಿತರಿಸಲಾಗಿದೆ. |
| 9 | ಶಾಲೆ/ಕಾಲೇಜ್/ಕೈಗಾರಿಕೆಗಳು ಒಪ್ಪಂದದ ಆಧಾರದ ಮೇಲೆ ಸಾರಿಗೆ ಬಸ್‌ಗಳನ್ನು ತೆಗೆದುಕೊಂಡಲ್ಲಿ, ಶಾಲೆಗಳಿಗೆ ಒಂದು ಕಿ.ಮೀ.ಗೆ ರೂ.35ರಂತೆ ರಿಯಾಯಿತಿ ದರದಲ್ಲಿ, ಕಾಲೇಜ್‌ಗಳಿಗೆ ಒಂದು ಕಿ.ಮೀ.ಗೆ ರೂ.36ರಂತೆ ರಿಯಾಯಿತಿ ದರದಲ್ಲಿ ನೀಡಲಾಗಿದೆ. ಕೈಗಾರಿಕೆಗಳಿಗೆ ಪ್ರತಿ ಕಿ.ಮೀ.ಗೆ ಸಾಮಾನ್ಯ ವಾಹನಕ್ಕೆ ರೂ. 37 ಹಾಗೂ ಸುಖಾಸೀನ ವಾಹನಕ್ಕೆ ರೂ. 43 ದರವನ್ನು ನಿಗದಿ ಪಡಿಸಲಾಗಿದೆ. |
| 10 | ಸ್ವಾತಂತ್ರ್ಯ ಯೋಧರ ವಿಧವೆಯರಿಗೆ, ವರ್ಷಕ್ಕೆ ರೂ.2000 ಮೊತ್ತದ ಪ್ರವಾಸ ಕೂಪನ್‌ಗಳನ್ನು ನೀಡಲಾಗಿದೆ. |
| 11 | ಭಾರತ ಸರ್ಕಾರದಿಂದ "ಶೌರ್ಯ ಪ್ರಶಸ್ತಿ" ಪಡೆದ ಮಕ್ಕಳಿಗೆ 18 ವರ್ಷ ತುಂಬುವವರೆಗೆ ಸಂಸ್ಥೆಯ ನಗರಸಾರಿಗೆ, ಸಾಮಾನ್ಯ, ವೇಗದೂತ ಮತ್ತು ರಾಜಹಂಸ ಬಸ್‌ಗಳಲ್ಲಿ ರಾಜ್ಯಾದ್ಯಂತ ಉಚಿತವಾಗಿ ಪ್ರಯಾಣಿಸಲು ಸೌಲಭ್ಯ ಕಲ್ಪಿಸಲಾಗಿದೆ. |
| 12 | ರಾಜ್ಯ ಮಟ್ಟದಲ್ಲಿ ನೋಂದಾಯಿಸಿಕೊಂಡ ಪತ್ರಕರ್ತರಿಗೆ ರಾಜ್ಯಾದ್ಯಂತ ವೃತ್ತಿನಿಮಿತ್ತ ಚಟುವಟಿಕೆಗಳಿಗೆ ಉಚಿತವಾಗಿ ಪ್ರಯಾಣ ಮಾಡಲು ಅವಕಾಶ ಕಲ್ಪಿಸಲಾಗಿದೆ. |
| 13 | ರಾಷ್ಟ್ರಕ್ಕಾಗಿ ಜೀವತೆತ್ತ ಸೈನಿಕರ ಅವಲಂಬಿತರಿಗೆ ಉಚಿತ ಪಾಸುಗಳನ್ನು ವಿತರಿಸಲಾಗಿದೆ. ಈ ಸೌಲಭ್ಯವನ್ನು ಮೃತರ ಅವಲಂಬಿತರಿಗೆ (ತಂದೆ, ತಾಯಿ, ಪತ್ನಿ ಮತ್ತು 10 ವರ್ಷದವರೆಗಿನ ಅವಲಂಬಿತ ಮಕ್ಕಳಿಗೆ) ಸಾಮಾನ್ಯ ಮತ್ತು ವೇಗದೂತ ಸಾರಿಗೆ ಸೇವೆಗಳಲ್ಲಿ ರಾಜ್ಯದೊಳಗೆ ಪ್ರಯಾಣಿಸಲು ಅನುಮತಿಸಲಾಗಿದೆ (ಜುಲೈ 2012ರಿಂದ ಜುಲೈ 2022ರವರೆಗೆ). |
| 14 | ಸಂಸ್ಥೆಯ ಬಸ್ ನಿಲ್ದಾಣಗಳಲ್ಲಿರುವ ವಾಣಿಜ್ಯ ಮಳಿಗೆಗಳಲ್ಲಿ ಶೇ.16.20 ಪ್ರಮಾಣದಷ್ಟು ಮತ್ತು ಶೇ.6.55 ಪ್ರಮಾಣದಷ್ಟು ವಾಣಿಜ್ಯ ಮಳಿಗೆಗಳನ್ನು ಅನುಕ್ರಮವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಿಡಲಾಗಿದೆ. |
| 15 | ಕರ್ನಾಟಕ ರಾಜ್ಯದಲ್ಲಿನ ಅವತಾರ್ ಮುಂಗಡ ಟಿಕೆಟ್ ಬುಕ್ಕಿಂಗ್ ಖಾಸಗಿ ಏಜೆಂಟರುಗಳ ನೇಮಕಾತಿಯಲ್ಲಿ ಶೇ.10ರಷ್ಟು ಪ್ರಮಾಣದ ಮೀಸಲಾತಿಯನ್ನು ಅಂಗವಿಕಲರಿಗೆ ಕಲ್ಪಿಸಲಾಗಿದೆ. |

| | |
|---|---|
| 16 | ಸಂಸ್ಥೆಯ ಬಸ್ ನಿಲ್ದಾಣಗಳಲ್ಲಿರುವ ವಾಣಿಜ್ಯ ಮಳಿಗೆಗಳ ಪೈಕಿ ಶೇ.10ರಷ್ಟು ವಾಣಿಜ್ಯ ಮಳಿಗೆಗಳನ್ನು ಅಂಗವಿಕಲರಿಗೆ ಮೀಸಲಿಡಲಾಗಿದೆ. |
| 17 | ಪೂರ್ಣ ಅಂಧರಿಗೆ (ಶೇ.100) ಬಸ್ ನಿಲ್ದಾಣಗಳಲ್ಲಿರುವ ಟೆಲಿಫೋನ್ ಬೂತ್‌ಗಳ ನೀಡಿಕೆಯಲ್ಲಿ ಶೇ.100 ಪ್ರಮಾಣದಷ್ಟು ಮೀಸಲಾತಿ ಕಲ್ಪಿಸಲಾಗಿದೆ. |
| 18 | 4 ಮತ್ತು ಹೆಚ್ಚು ಸಂಖ್ಯೆಯ ಪ್ರಯಾಣಿಕರು ಒಂದೇ ಗುಂಪು ಮುಂಗಡ ಟಿಕೆಟ್ ಕಾಯ್ದಿರಿಸಿದರೆ, ಶೇ. 5ರಷ್ಟು ರಿಯಾಯತಿ ನೀಡಲಾಗಿದೆ. |
| 19 | ಹೋಗುವ ಮತ್ತು ಹಿಂದಿರುಗುವ ಪ್ರಯಾಣದ ಟಿಕೆಟ್‌ಗಳನ್ನು ಏಕಕಾಲದಲ್ಲಿ ಖರೀದಿಸುವ ಪ್ರಯಾಣಿಕರಿಗೆ ಹಿಂದಿರುಗುವ ಪ್ರಯಾಣದ ಪ್ರಯಾಣದರದ ಶೇ.10ರಷ್ಟು ರಿಯಾಯತಿ ನೀಡಲಾಗಿದೆ. |
| 20 | ಸಂಸ್ಥೆಯ ಒಟ್ಟು 60 ಬಸ್ ನಿಲ್ದಾಣಗಳಲ್ಲಿ ಗಣಕೀಕೃತ ಮಾಹಿತಿ ಬಿತ್ತರಿಕೆ ವ್ಯವಸ್ಥೆ (ಪಿ.ಐ.ಎಸ್.) ಜಾರಿಗೆ ತರಲಾಗಿದೆ. |
| 21 | ಕಲಬುರಗಿ, ಯಾದಗಿರಿ, ಬೀದರ್, ವಿಜಯಪುರ, ಕೊಪ್ಪಳ, ರಾಯಚೂರು, ಹೊಸಪೇಟೆ ಮತ್ತು ಬಳ್ಳಾರಿ ನಗರ/ಪಟ್ಟಣಗಳಲ್ಲಿ ನಗರ ಸಾರಿಗೆ ದೈನಿಕ ಪಾಸ್‌ಗಳನ್ನು ರೂ. 40ರ ದರದಲ್ಲಿ ವಿತರಿಸಲಾಗುತ್ತಿದೆ. |

### (iii) ಸಂಸ್ಥೆಯ ನೌಕರರಿಗೆ ರಿಯಾಯಿತಿ :

1. ಸಂಸ್ಥೆಯಲ್ಲಿ ಕೆಲಸ ಮಾಡುವ ಎಲ್ಲಾ ದರ್ಜೆ–3 ಮತ್ತು ದರ್ಜೆ–4ರ ನೌಕರರಿಗೆ ಔದ್ಯಮಿಕ ಒಪ್ಪಂದದ ಪ್ರಕಾರ ನಗರ ಸಾರಿಗೆ ವಾಹನಗಳಲ್ಲಿ ಕೆಲಸಕ್ಕೆ ಹಾಜರಾಗಲು ಮತ್ತು ಮನೆಗೆ ಹಿಂದಿರುಗಲು ಉಚಿತ ಪಾಸ್‌ಗಳನ್ನು ನೀಡಲಾಗಿದೆ.
2. ಸಂಸ್ಥೆಯಲ್ಲಿ ಕೆಲಸ ಮಾಡುವ ನೌಕರರಿಗೆ ಮತ್ತು ಕುಟುಂಬದವರಿಗೆ ವರ್ಷದಲ್ಲಿನ ಒಂದು ತಿಂಗಳ ಅವಧಿಗೆ ಸಂಸ್ಥೆಯ ಬಸ್‌ಗಳಲ್ಲಿ ದೂರದ ಮಿತಿ ವಿಧಿಸದ ಉಚಿತ ಪಾಸ್‌ಗಳನ್ನು ನೀಡಲಾಗಿದೆ.
3. ಸಂಸ್ಥೆಯಲ್ಲಿ ಕೆಲಸ ಮಾಡುವ ನೌಕರರ ಮಕ್ಕಳಿಗೆ ಶಾಲೆ ಮತ್ತು ಕಾಲೇಜುಗಳಿಗೆ ಹೋಗಿ ಬರಲು ನಗರ ಸಾರಿಗೆ ಹಾಗೂ ಗ್ರಾಮಾಂತರ ಸಾರಿಗೆ ಬಸ್‌ಗಳಲ್ಲಿ ಪ್ರಯಾಣಿಸಲು ಹಂತಸಂಖ್ಯೆ 12ರ ವರೆಗೆ ಉಚಿತ ಪಾಸ್‌ಗಳನ್ನು ನೀಡಲಾಗಿದೆ.

### (ಎ) ಸಾರ್ವಜನಿಕ ದೂರುಗಳು :

ವರದಿ ವರ್ಷದಲ್ಲಿ ಸಾರ್ವಜನಿಕರಿಂದ ಬಂದ ಎಲ್ಲಾ 292 ದೂರುಗಳನ್ನು ಅಗತ್ಯವಿದ್ದ ಪ್ರಕರಣಗಳನ್ನು ತನಿಖೆಗೆ ಒಳಪಡಿಸಿ, 255 ದೂರುಗಳನ್ನು ಇತ್ಯರ್ಥಗೊಳಿಸಲಾಗಿದೆ. ವರ್ಷಾಂತ್ಯಕ್ಕೆ 37 ದೂರುಗಳು ಬಾಕಿ ಉಳಿದವು. ಸೇವಾ ಸೌಲಭ್ಯಗಳ ಸುಧಾರಣೆಗಾಗಿ ಸಾರ್ವಜನಿಕರಿಂದ ಬಂದ ಸಲಹೆಗಳನ್ನು ಪರಿಶೀಲಿಸಿ ಸೂಕ್ತವೆಂದು ಕಂಡುಬಂದವುಗಳನ್ನು ಅನುಷ್ಠಾನಗೊಳಿಸಲಾಗಿದೆ.

### (ಏ) ಜಾತ್ರಾ ಮತ್ತು ಇತರ ವಿಶೇಷ ಸಂದರ್ಭಗಳಿಗಾಗಿ ಹೆಚ್ಚಿನ ಸಾರಿಗೆ ಸೇವೆಗಳು :

ಸಂಸ್ಥೆಯು ಜಾತ್ರೆ, ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಮಾರಂಭಗಳ ಸಂದರ್ಭದಲ್ಲಿ ಜನತೆಯ ಅನುಕೂಲಕ್ಕಾಗಿ 2020–21ನೇ ಸಾಲಿನಲ್ಲಿ ಕೋವಿಡ್–19 ಪ್ರಯುಕ್ತ (SOP) ನಿಯಮಾವಳಿ ಪ್ರಕಾರ ಸರ್ಕಾರದ ಆದೇಶದಂತೆ ಅವಶ್ಯಕತೆಗನುಗುಣವಾಗಿ ಸಾರಿಗೆ ಸೌಲಭ್ಯವನ್ನು ಒದಗಿಸಿದೆ.

### (ಐ) ಸಾರಿಗೆ ಸೇವೆಯ ಗುಣಮಟ್ಟ :

ವರದಿ ವರ್ಷದಲ್ಲಿ ಒದಗಿಸಲಾದ ಸಾರಿಗೆ ವ್ಯವಸ್ಥೆ ಗುಣಮಟ್ಟದ ವಿವರವನ್ನು **ತಃಖ್ತೆ–15**ರಲ್ಲಿ ನೀಡಲಾಗಿದೆ. ವಿಭಾಗವಾರು ವಿವರವನ್ನು **ಅನುಬಂಧ–5**ರಲ್ಲಿ ನೀಡಲಾಗಿದೆ.

**ತಃಖ್ತೆ–15**

| ಕ್ರ. ಸಂ. | ವಿವರ | 2019–20 | 2020–21 |
|---|---|---|---|
| 1 | ಸಮಯಪಾಲನೆ (ಶೇ.) (ಗ್ರಾಮಾಂತರ ಸೇವೆಗಳು)<br>ಅ) ನಿರ್ಗಮನ<br>ಆ) ಆಗಮನ | <br>91.0<br>94.0 | <br>93.6<br>95.1 |
| 2 | ಅವಘಡ ಪ್ರಮಾಣ (ಪ್ರತಿ 10,000 ಕಿ.ಮೀ.ಗಳಿಗೆ) | 0.06 | 0.03 |
| 3 | ಅಪಘಾತ ಪ್ರಮಾಣ (ಪ್ರತಿ ಲಕ್ಷ ಕಿ.ಮೀ.ಗಳಿಗೆ) | 0.06 | 0.06 |

ವರದಿ ವರ್ಷದಲ್ಲಿ ವಾಹನಗಳ ಅವಘಡ ಪ್ರಮಾಣವು (ಪ್ರತಿ 10,000 ಕಿ.ಮೀ.ಗಳಿಗೆ) ಕಳೆದ ವರ್ಷದ 0.06ರಿಂದ 0.03ಕ್ಕೆ ಇಳಿಕೆಯಾಗಿದೆ. ಅಪಘಾತ ಪ್ರಮಾಣವು (ಪ್ರತಿ ಲಕ್ಷ ಕಿ.ಮೀ.ಗಳಿಗೆ) ಕಳೆದ ವರ್ಷದಷ್ಟೆ ಸ್ಥಿರವಾಗಿದೆ.

ಅಪಘಾತಗಳ ವರ್ಗೀಕರಣವನ್ನು ಅವುಗಳ ಸ್ವರೂಪದನುಗುಣವಾಗಿ **ತಃಖ್ತೆ–16**ರಲ್ಲಿ ಕೊಡಲಾಗಿದೆ.

**ತಃಖ್ತೆ–16**

| ಕ್ರ. ಸಂ. | ಅಪಘಾತ ಸ್ವರೂಪ | 2019–20 | 2020–21 |
|---|---|---|---|
| 1 | ಮರಣಾಂತಿಕ : ಸಂಖ್ಯೆ<br>ಪ್ರಮಾಣ | 86<br>0.02 | 53<br>0.02 |
| 2 | ಗಂಭೀರ : ಸಂಖ್ಯೆ<br>ಪ್ರಮಾಣ | 62<br>0.01 | 33<br>0.01 |
| 3 | ಲಘು/ನಗಣ್ಯ : ಸಂಖ್ಯೆ<br>ಪ್ರಮಾಣ | 173<br>0.03 | 101<br>0.03 |
| | **ಒಟ್ಟು : ಸಂಖ್ಯೆ<br>ಪ್ರಮಾಣ** | **321<br>0.06** | **187<br>0.06** |
| 4 | ಮರಣ ಹೊಂದಿದವರ ಸಂಖ್ಯೆ | 109 | 57 |
| 5 | ಗಾಯಗೊಂಡವರ ಸಂಖ್ಯೆ | 706 | 349 |

ವರದಿ ವರ್ಷದಲ್ಲಿ ಒಟ್ಟು 187 ಅಪಘಾತಗಳು ವರದಿಯಾಗಿವೆ. ಅವುಗಳಲ್ಲಿ 53 ಅಪಘಾತಗಳು ಮರಣಾಂತಿಕ, 33 ಗಂಭೀರ ಸ್ವರೂಪದ ಮತ್ತು 101 ಲಘು ಸ್ವರೂಪದ ಅಪಘಾತಗಳಾಗಿರುತ್ತವೆ. ಸೇವಾ ಗುಣಮಟ್ಟದ ಇನ್ನಿತರ ನಿಯತಾಂಕಗಳ ವಿವರವನ್ನು **ಅನುಬಂಧ–5**ರಲ್ಲಿ ಕೊಡಲಾಗಿದೆ.

**(ಒ) ಮಾರ್ಗ ತಪಾಸಣೆ:**

ವರದಿ ವರ್ಷದಲ್ಲಿ ಸಾರಿಗೆ ಆದಾಯದ ಸೋರಿಕೆಯನ್ನು ನಿಯಂತ್ರಿಸುವ ನಿಟ್ಟಿನಲ್ಲಿ, ಕೇಂದ್ರಿಯ ತನಿಖಾ ದಳ ಮತ್ತು ವಿಭಾಗೀಯ ತನಿಖಾ ದಳಗಳು ಕಾರ್ಯನಿರ್ವಹಿಸುತ್ತಿದ್ದು, ಒಟ್ಟಾರೆಯಾಗಿ 117769 ಬಸ್‌ಗಳನ್ನು ತನಿಖೆ ಮಾಡಿ, 4914 ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ. ವಿವರವನ್ನು ತಃಖ್ತೆ–16 'ಎ'ದಲ್ಲಿ ನೀಡಲಾಗಿದೆ.

**ತಃಖ್ತೆ–16ಎ**

| ಕ್ರ. ಸಂ. | ವಿವರ | 2019–20 | 2020–21 |
|---|---|---|---|
| 1 | ಕರ್ತವ್ಯ ಮೇಲಿದ್ದ ತನಿಖಾ ಸಿಬ್ಬಂದಿ | 653 | 536 |
| 2 | ಪರಿಣಾಮಕಾರಿ ಮಾನವ ತನಿಖಾ ದಿನಗಳು | 14927 | 10527 |
| 3 | ತಪಾಸಣೆ ಮಾಡಲಾದ ಬಸ್‌ಗಳ ಸಂಖ್ಯೆ | 176996 | 117769 |
| 4 | ಪತ್ತೆ ಹಚ್ಚಲಾದ ಗಂಭೀರ ಕೆಂಪು ಗುರುತಿನ ಪ್ರಕರಣಗಳ ಸಂಖ್ಯೆ | 498 | 222 |
| 5 | ಪತ್ತೆ ಹಚ್ಚಲಾದ ಕೆಂಪು ಗುರುತಿನ ಪ್ರಕರಣಗಳ ಸಂಖ್ಯೆ | 935 | 623 |
| 6 | ಪತ್ತೆ ಹಚ್ಚಲಾದ ಸಾಮಾನ್ಯ ಪ್ರಕರಣಗಳ ಸಂಖ್ಯೆ | 9523 | 4069 |
| 7 | ಪತ್ತೆ ಹಚ್ಚಲಾದ ಒಟ್ಟು ಪ್ರಕರಣಗಳ ಸಂಖ್ಯೆ | 10956 | 4914 |
| 8 | ಸೋರಿಕೆ ಹಣದ ಮೊತ್ತ (ರೂ.ಗಳಲ್ಲಿ) | 306455 | 174320 |
| 9 | ಸಂಗ್ರಹಿಸಲಾದ ದಂಡ (ರೂ.ಗಳಲ್ಲಿ) | 2122971 | 937537 |
| 10 | ದಂಡತೆತ್ತ ಟಿಕೆಟ್‌ರಹಿತ ಪ್ರಯಾಣಿಕರ ಸಂಖ್ಯೆ | 13587 | 5466 |
| 11 | ಶೇ.ತನಿಖಾ ಪ್ರಮಾಣ | 1.6 | 2.6 |

*****

**ಪರಿಚ್ಛೇದ 5**

# ಆಟೋ ಇಂಜಿನೀಯರಿಂಗ್

## 5.1 ವಾಹನ ಬಲ :

ಸಂಸ್ಥೆಯು ಕಳೆದ ವರ್ಷದ (2019–20) ಅಂತ್ಯಕ್ಕೆ 4729 ವಾಹನಗಳನ್ನು ಹೊಂದಿತ್ತು. ವರದಿ ವರ್ಷದಲ್ಲಿ ಒಂದು ಹೊಸ ವಾಹನವನ್ನು ಖರೀದಿಸಲಾಗಿದೆ. 113 ಹಳೆಯ ವಾಹನಗಳನ್ನು ನಿಷ್ಕ್ರಿಯಗೊಳಿಸಲಾಗಿದೆ. ವರದಿ ವರ್ಷದ ಅಂತ್ಯಕ್ಕೆ (31.3.2021) ಸಂಸ್ಥೆಯ ವಾಹನ ಬಲ ಒಟ್ಟು 4616 ಆಗಿತ್ತು. ಅವುಗಳ ಪೈಕಿ ಕಾರ್, ಜೀಪ್, ಟ್ರಕ್ ಇತ್ಯಾದಿ ವಾಹನಗಳು ಸೇರಿ ಒಟ್ಟು 156 ಇಲಾಖಾ ವಾಹನಗಳಿದ್ದವು. ವಿವರವನ್ನು **ತಃಖ್ತೆ–17**ರಲ್ಲಿ ನೀಡಲಾಗಿದೆ.

**ತಃಖ್ತೆ–17**

| ಕ್ರ. ಸಂ | ವಿವರ | ವಾಹನಗಳ ಸಂಖ್ಯೆ ಮಾರ್ಚ್ 31ರಂದು ಇದ್ದಂತೆ | |
|---|---|---|---|
| | | **2019–20** | **2020–21** |
| 1 | ನೋಂದಣಿಯಾದ ಪ್ರಯಾಣಿಕ ವಾಹನಗಳು:<br>ಅ) ಲೈಲ್ಯಾಂಡ್ | 2688 | 2662 |
| | ಆ) ಟಾಟಾ | 1042 | 957 |
| | ಇ) ಐಶರ್ | 704 | 704 |
| | ಈ) ಕರೋನಾ | 26 | 24 |
| | ಉ) ಸ್ವರಾಜ್ ಮಜ್ದ (ಮಿನಿ) | 4 | 4 |
| | ಊ) ಮಿಡಿ ಜೆಎನ್.ನರ್ಮ್ | 265 | 265 |
| | ಒಟ್ಟು | **4729** | **4616** |
| 2 | ನೋಂದಣಿಯಾಗದ ವಾಹನಗಳು | 0 | 0 |
| 3 | ಬಸ್ ಛಾಸಿಸ್ | 0 | 0 |
| 4 | ಇಲಾಖಾ ವಾಹನಗಳು :<br>ಅ) ಕಾರ್, ವ್ಯಾನ್ | 29 | 29 |
| | ಆ) ಜೀಪ್ | 46 | 46 |
| | ಇ) ಟ್ರಕ್ | 49 | 54 |
| | ಈ) ಇತರ ವಾಹನಗಳು<br>(ವಾಟರ್ ಟ್ಯಾಂಕರ್, ಕ್ರೇನ್ ಇತ್ಯಾದಿ) | 25 | 27 |
| | **ಒಟ್ಟು (4)** | **149** | **156** |

ತಯಾರಿಕಾವಾರು ಮತ್ತು ವಿಭಾಗವಾರು ವಾಹನಗಳ ವಿವರವನ್ನು **ಅನುಬಂಧ–6**ರಲ್ಲಿ ಕೊಡಲಾಗಿದೆ.

ವಾಹನಗಳ ತಯಾರಿಕಾವಾರು ವಯೋಮಾನ (ಕಿ.ಮೀ.ಗಳಲ್ಲಿ) ವಿಂಗಡಣೆಯ ವಿವರವನ್ನು **ತಃಖ್ತೆ–18**ರಲ್ಲಿ ಕೊಡಲಾಗಿದೆ.

## ತಃಖ್ತೆ-18

| ಕ್ರ. ಸಂ. | ವಯೋಮಾನ (ಲಕ್ಷ ಕಿ.ಮೀ.ಗಳಲ್ಲಿ) | | ಲೈಲ್ಯಾಂಡ್ | | ಟಾಟಾ | | ಐಸರ್ | | ಮಿಡಿ (ಟಾಟಾ) | | ಕರೋನಾ | | ಮಿನಿ (ಸ್ವಮಜ್ದ) | | ಒಟ್ಟು | |
|---|---|---|---|---|---|---|---|---|---|---|---|---|---|---|---|---|
| | | | ಸಂಖ್ಯೆ | ಶೇ. | ಸಂಖ್ಯೆ | ಶೇ. | ಸಂಖ್ಯೆ | ಶೇ. | ಸಂಖ್ಯೆ | ಶೇ. | ಸಂಖ್ಯೆ | ಶೇ. | ಸಂಖ್ಯೆ | ಶೇ. | ಸಂಖ್ಯೆ | ಶೇ. |
| 1 | 0.00ರಿಂದ 1.00 | ಸಂಖ್ಯೆ | 0 | 0.0 | 19 | 2.0 | 0 | 0.0 | 0 | 0.0 | 0 | 0.0 | 0 | 0.0 | 19 | 0.4 |
| | | ಕಿ.ಮೀ. | 0 | | 79223 | | 0 | | 0 | | 0 | | 0 | | 79223 | |
| 2 | 1.01ರಿಂದ 2.00 | ಸಂಖ್ಯೆ | 9 | 0.3 | 34 | 3.6 | 0 | 0.0 | 52 | 19.6 | 0 | 0.0 | 3 | 75.0 | 98 | 2.1 |
| | | ಕಿ.ಮೀ. | 153051 | | 119735 | | 0 | | 156585 | | 0 | | 166989 | | 143794 | |
| 3 | 2.01ರಿಂದ 3.00 | ಸಂಖ್ಯೆ | 54 | 2.0 | 5 | 0.5 | 3 | 0.4 | 162 | 61.1 | 0 | 0.0 | 1 | 25.0 | 225 | 4.9 |
| | | ಕಿ.ಮೀ. | 271985 | | 256445 | | 264594 | | 251275 | | 0 | | 259658 | | 256575 | |
| 4 | 3.01ರಿಂದ 4.00 | ಸಂಖ್ಯೆ | 379 | 14.2 | 36 | 3.8 | 61 | 8.7 | 43 | 16.2 | 2 | 8.3 | 0 | 0.0 | 521 | 11.3 |
| | | ಕಿ.ಮೀ. | 358361 | | 357130 | | 371996 | | 336369 | | 369031 | | 0 | | 358098 | |
| 5 | 4.01ರಿಂದ 5.00 | ಸಂಖ್ಯೆ | 527 | 19.8 | 33 | 3.4 | 340 | 48.3 | 8 | 3.0 | 0 | 0.0 | 0 | 0.0 | 908 | 19.7 |
| | | ಕಿ.ಮೀ. | 445111 | | 434763 | | 454878 | | 408492 | | 0 | | 0 | | 448070 | |
| 6 | 5.01ರಿಂದ 6.00 | ಸಂಖ್ಯೆ | 293 | 11.0 | 3 | 0.3 | 260 | 36.9 | 0 | 0.0 | 0 | 0.0 | 0 | 0.0 | 556 | 12.0 |
| | | ಕಿ.ಮೀ. | 546369 | | 521958 | | 539844 | | 0 | | 0 | | 0 | | 543186 | |
| 7 | 6.00ರಿಂದ 7.00 | ಸಂಖ್ಯೆ | 101 | 3.8 | 13 | 1.4 | 39 | 5.5 | 0 | 0.0 | 4 | 16.7 | 0 | 0.0 | 157 | 3.4 |
| | | ಕಿ.ಮೀ. | 639997 | | 645910 | | 640193 | | 0 | | 683854 | | 0 | | 641653 | |
| 8 | 7.01ರಿಂದ 7.50 | ಸಂಖ್ಯೆ | 61 | 2.3 | 21 | 2.2 | 1 | 0.1 | 0 | 0.0 | 4 | 16.7 | 0 | 0.0 | 87 | 1.9 |
| | | ಕಿ.ಮೀ. | 726460 | | 730793 | | 711089 | | 0 | | 718540 | | 0 | | 726965 | |
| 9 | 7.51ರಿಂದ 8.00 | ಸಂಖ್ಯೆ | 62 | 2.3 | 44 | 4.6 | 0 | 0.0 | 0 | 0.0 | 4 | 16.7 | 0 | 0.0 | 110 | 2.4 |
| | | ಕಿ.ಮೀ. | 778292 | | 778657 | | 0 | | 0 | | 775027 | | 0 | | 778319 | |
| 10 | 8.01ರಿಂದ 8.50 | ಸಂಖ್ಯೆ | 92 | 3.5 | 83 | 8.7 | 0 | 0.0 | 0 | 0.0 | 2 | 8.3 | 0 | 0.0 | 177 | 3.8 |
| | | ಕಿ.ಮೀ. | 825845 | | 828118 | | 0 | | 0 | | 828571 | | 0 | | 826942 | |
| 11 | 8.51ರಿಂದ 9.00 | ಸಂಖ್ಯೆ | 96 | 3.6 | 107 | 11.2 | 0 | 0.0 | 0 | 0.0 | 0 | 0.0 | 0 | 0.0 | 203 | 4.4 |
| | | ಕಿ.ಮೀ. | 876294 | | 877764 | | 0 | | 0 | | 0 | | 0 | | 877069 | |
| 12 | 9.01ರಿಂದ 10.00 | ಸಂಖ್ಯೆ | 224 | 8.4 | 243 | 25.4 | 0 | 0.0 | 0 | 0.0 | 3 | 12.5 | 0 | 0.0 | 470 | 10.2 |
| | | ಕಿ.ಮೀ. | 947161 | | 948842 | | 0 | | 0 | | 927286 | | 0 | | 947903 | |
| 13 | 10.00 ಮೇಲ್ಪಟ್ಟು | ಸಂಖ್ಯೆ | 764 | 28.7 | 316 | 33.0 | 0 | 0.0 | 0 | 0.0 | 5 | 20.8 | 0 | 0.0 | 1085 | 23.5 |
| | | ಕಿ.ಮೀ. | 1174873 | | 1091630 | | 0 | | 0 | | 1062358 | | 0 | | 1150110 | |
| | ಒಟ್ಟು | ಸಂಖ್ಯೆ | 2662 | 100 | 957 | 100 | 704 | 100 | 265 | 100 | 24 | 100 | 4 | 100 | 4616 | 100 |
| | | ಕಿ.ಮೀ. | 741405 | | 869186 | | 488895 | | 251248 | | 799939 | | 190156 | | 701073 | |

**5.2 ಛಾಸಿಸ್ ಖರೀದಿ :**

ವರದಿ ವರ್ಷದಲ್ಲಿ ಒಂದು ಛಾಸಿಯನ್ನು ಖರೀದಿಸಲಾಗಿದೆ. ಛಾಸಿಸ್ ಖರೀದಿಗಾಗಿ ನೀಡಲಾದ ಆದೇಶ, ಪೂರೈಕೆಗೊಂಡ ಮತ್ತು ಬಾಕಿ ಉಳಿದವುಗಳ ಸಂಖ್ಯೆಯ ತಯಾರಿಕೆವಾರು ವಿವರವನ್ನು **ತಃಖ್ತೆ-19**ರಲ್ಲಿ ನೀಡಲಾಗಿದೆ.

**ತಃಖ್ತೆ-19**

| ತಯಾರಿಕೆ | 31.03.2020ರಂದು ಇದ್ದ ಬಾಕಿ | 2020-21ರಲ್ಲಿ ನೀಡಲಾದ ಆದೇಶ | 2020-21ರಲ್ಲಿ ಆದ ಪೂರೈಕೆ | 31-03-2021ರಂದು ಉಳಿದ ಬಾಕಿ |
|---|---|---|---|---|
| ಟಾಟಾ | 1 | 0 | 1 | 0 |
| ಮಿನಿ ಜೆಎನ್‌ನರ್ಮ್ | 0 | 0 | 0 | 0 |
| ಲೈಲ್ಯಾಂಡ್ | 0 | 0 | 0 | 0 |
| ಐಸರ್ | 0 | 0 | 0 | 0 |
| ಕರೋನಾ | 0 | 0 | 0 | 0 |
| ಒಟ್ಟು | **1** | **0** | **1** | **0** |

**1.3 (ಅ) ವಾಹನಗಳ, ಅಸೆಂಬ್ಲಿಗಳ ಮತ್ತು ಟಯರ್‌ಗಳ ಕಾರ್ಯನಿರ್ವಹಣೆ:**

ವರದಿ ವರ್ಷದಲ್ಲಿ ವಾಹನ, ಅಸೆಂಬ್ಲಿ ಮತ್ತು ಟಯರ್ ಇವುಗಳಿಗೆ ಸಂಬಂಧಿಸಿದ ಕಾರ್ಯನಿರ್ವಹಣೆ ವಿವರವನ್ನು **ತಃಖ್ತೆ-20**ರಲ್ಲಿ ಕೊಡಲಾಗಿದೆ.

**ತಃಖ್ತೆ-20**

| ಕ್ರ ಸಂ. | ವಿವರ | 2019-20 | 2020-21 |
|---|---|---|---|
| 1 | ಮಾರ್ಚ್ 31ರಂದು ವಾಹನಗಳ ಸರಾಸರಿ ವಯೋಮಾನ (ಕಿ.ಮೀ.ಗಳಲ್ಲಿ) | 641998 | 701073 |
| 2 | ವಾಹನ ಸಮೂಹದಲ್ಲಿ 9 ಲಕ್ಷಕ್ಕಿಂತ ಹೆಚ್ಚು ಕಿ.ಮೀ. ಕ್ರಮಿಸಿದ ವಾಹನಗಳ ಪ್ರಮಾಣ (ಶೇ.) | 30.2 | 33.7 |
| 3 | ಸರಾಸರಿ ವಾಹನ ಬಳಕೆ (ಒಟ್ಟು ಕಿ.ಮೀ. ಮೇಲೆ) | 350.3 | 320.1 |
| 4 | ವಾಹನ ಸಮೂಹ ಬಳಕೆ (ಶೇ.) :<br>ಅ) ವಿಭಾಗೀಯ ವಾಹನ ಸಮೂಹದ ಮೇಲೆ<br>ಆ) ಒಟ್ಟು ವಾಹನ ಸಮೂಹದ ಮೇಲೆ (ಪ್ರಾದೇಶಿಕ ಕಾರ್ಯಾಗಾರ ಸೇರಿ) | <br>85.4<br>84.1 | <br>57.2<br>56.0 |
| 5 | ದುರಸ್ತಿಗಾಗಿ ನಿಂತ ವಾಹನಗಳ ಪ್ರಮಾಣ (ಶೇ.):<br>ಅ) ವಿಭಾಗಗಳಲ್ಲಿ<br>ಆ) ಒಟ್ಟು ಸಂಸ್ಥೆಯಲ್ಲಿ(ಪ್ರಾದೇಶಿಕ ಕಾರ್ಯಾಗಾರ ಸೇರಿ) | <br>3.04<br>4.35 | <br>2.84<br>4.06 |
| 6 | ಅವಘಡ ಪ್ರಮಾಣ (ಪ್ರತಿ 10,000 ಕಿ.ಮೀ.ಗೆ):<br>ಅ) ತಾಂತ್ರಿಕ ಕಾರಣಗಳಿಗಾಗಿ<br>ಆ) ಇತರ ವೈಫಲ್ಯಗಳಿಗಾಗಿ<br>ಇ) ಒಟ್ಟು | <br>0.06<br>0.00<br>0.06 | <br>0.03<br>0.00<br>0.03 |
| 7 | ಕೆ.ಎಂ.ಪಿ.ಎಲ್ (ಡೀಸಲ್) | 5.24 | 5.47 |

| | | | |
|---|---|---|---|
| 8 | ಕೆ.ಎಂ.ಪಿ.ಎಲ್ (ಯಂತ್ರದೆಣ್ಣೆ)(ಟಾಪ್-ಅಪ್) | 15877 | 30532 |
| 9 | ಸರಾಸರಿ ಟಯರ್ ಜೀವಮಾನ (ಕಿ.ಮೀ.ಗಳಲ್ಲಿ) :<br>ಅ) ಹೊಸದು<br>ಆ) ಮರುಒಪ್ಪಗೊಳಿಸಿದ<br>ಇ) ಒಟ್ಟು ಜೀವಮಾನ | <br>91291<br>43314<br>161305 | <br>94415<br>48936<br>179560 |
| 10 | ಸರಾಸರಿ ಬ್ಯಾಟರಿ ಜೀವಮಾನ (ಲಕ್ಷ ಕಿ.ಮೀ.ಗಳಲ್ಲಿ) | 3.07 | 3.19 |
| 11 | ಸರಾಸರಿ ಇಂಜಿನ್ ಜೀವಮಾನ (ಲಕ್ಷ ಕಿ.ಮೀ.ಗಳಲ್ಲಿ):<br>ಅ) ಹೊಸದು<br>ಆ) ಮರುಒಪ್ಪಗೊಳಿಸಿದ | <br>9.10<br>4.06 | <br>9.99<br>5.94 |
| 12 | ಸರಾಸರಿ ಎಫ್.ಐ.ಪಿ. ಜೀವಮಾನ (ಲಕ್ಷ ಕಿ.ಮೀ.ಗಳಲ್ಲಿ):<br>ಅ) ಹೊಸದು<br>ಆ) ಮರುಒಪ್ಪಗೊಳಿಸಿದ | <br>5.29<br>2.73 | <br>6.98<br>1.30 |

ವಿಭಾಗವಾರು ಇಂಧನ ಮತ್ತು ಟಯರ್ ಕಾರ್ಯನಿರ್ವಹಣೆ ವಿವರವನ್ನು **ಅನುಬಂಧ-7**ರಲ್ಲಿ ಕೊಡಲಾಗಿದೆ.

(ಆ) **ಅವಘಡಗಳು :**

ವರದಿ ವರ್ಷದಲ್ಲಿ ಅವಘಡ ಪ್ರಮಾಣವು (ಪ್ರತಿ 10,000 ಕಿ.ಮೀ.ಗಳಿಗೆ) 0.03ರಷ್ಟಿತ್ತು. ಕಾರಣವಾರು ವೈಫಲ್ಯತೆ ವಿವರವನ್ನು **ತಃಖ್ತೆ-21**ರಲ್ಲಿ ಕೊಡಲಾಗಿದೆ.

**ತಃಖ್ತೆ-21**

| ಕ್ರ. ಸಂ. | ವೈಫಲ್ಯತೆ | ಅವಘಡಗಳ ಸಂಖ್ಯೆ | | ಒಟ್ಟು ಅವಘಡಗಳಿಗೆ ಶೇ. ಪ್ರಮಾಣ | | ಅವಘಡ ಪ್ರಮಾಣ (10000 ಕಿ.ಮೀ.ಗಳಿಗೆ) | |
|---|---|---|---|---|---|---|---|
| | | 2019-20 | 2020-21 | 2019-20 | 2020-21 | 2019-20 | 2020-21 |
| 1 | ವಿದ್ಯುತ್ | 457 | 209 | 16.7 | 24.4 | 0.01 | 0.01 |
| 2 | ಇಂಜಿನ್ | 227 | 95 | 8.3 | 11.1 | 0.00 | 0.01 |
| 3 | ಟ್ರಾನ್ಸ್‌ಮಿಷನ್ | 642 | 148 | 23.4 | 17.2 | 0.01 | 0.01 |
| 4 | ಫ್ರಂಟ್ ಆ್ಯಕ್ಸ್ಲ್ ಮತ್ತು ಸ್ಟೇರಿಂಗ್ | 59 | 23 | 2.2 | 2.7 | 0.00 | 0.00 |
| 5 | ರಿಯರ್ ಆ್ಯಕ್ಸ್ಲ್ | 152 | 64 | 5.5 | 7.5 | 0.00 | 0.00 |
| 6 | ರೋಡ್ ವ್ಹೀಲ್ಸ್ | 315 | 85 | 11.5 | 9.9 | 0.01 | 0.00 |
| 7 | ಬ್ರೇಕ್ | 250 | 72 | 9.1 | 8.4 | 0.00 | 0.00 |
| 8 | ಸ್ಪ್ರಿಂಗ್ | 348 | 87 | 12.7 | 10.1 | 0.01 | 0.00 |
| 9 | ಇಂಧನ | 110 | 31 | 4.0 | 3.6 | 0.00 | 0.00 |
| 10 | ಇತರ | 179 | 44 | 6.5 | 5.1 | 0.00 | 0.00 |
| | **ಒಟ್ಟು** | **2739** | **858** | **100.0** | **100.0** | **0.06** | **0.03** |

**1.4 ಪ್ರಾದೇಶಿಕ ಕಾರ್ಯಾಗಾರ ಮತ್ತು ವಿಭಾಗೀಯ ಕಾರ್ಯಾಗಾರಗಳ ಉತ್ಪಾದನೆ :**

ವರದಿ ವರ್ಷದಲ್ಲಿ ಯಾದಗಿರಿ ಪ್ರಾದೇಶಿಕ ಕಾರ್ಯಾಗಾರದಲ್ಲಿನ ಮತ್ತು ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು, ಕೊಪ್ಪಳ, ವಿಜಯಪುರ ಮತ್ತು ಬಳ್ಳಾರಿ ವಿಭಾಗೀಯ ಕಾರ್ಯಾಗಾರಗಳಲ್ಲಿನ ಉತ್ಪಾದನೆ ಮತ್ತು ಪ್ರಾದೇಶಿಕ ಕಾರ್ಯಾಗಾರದಿಂದ ಪಡೆಯಲಾದ ವಿವಿಧ ಸಾಮಗ್ರಿಗಳ ವಿವರವನ್ನು **ತಃಖ್ತೆ–22**ರಲ್ಲಿ ಕೊಡಲಾಗಿದೆ.

**ತಃಖ್ತೆ–22**

| ಕ್ರ. ಸಂ. | ಬಾಬ್ತು | ಉತ್ಪಾದನೆ (ಸಂಖ್ಯೆ) | |
|---|---|---|---|
| | | **2019–20** | **2020–21** |
| 1 | ಹೊಸ ವಾಹನ ಕವಚಗಳು: | | |
| | (ಅ) ವೇಗದೂತ/ಸಾಮಾನ್ಯ | 0 | 0 |
| | (ಆ) ಸುಖಾಸೀನ/ಹೈ–ಟೆಕ್ | 0 | 0 |
| | (ಇ) ನಗರಸಾರಿಗೆ | 0 | 0 |
| | **ಒಟ್ಟು** | **0** | **0** |
| 2 | ವಾಹನಗಳ ದುರಸ್ತಿ: | | |
| | (ಅ) ಮರುಒಪ್ಪಕ್ಕಾಗಿ | 22 | 18 |
| | (ಆ) ಭಾರಿ ದುರಸ್ತಿಗಾಗಿ | 31 | 15 |
| 3 | ಮರುಒಪ್ಪ/ದುರಸ್ತಿ ಮಾಡಿದ ಅಸೆಂಬ್ಲಿಗಳು: | | |
| | (ಅ) ಇಂಜಿನ್ | 0 | 5 |
| | (ಆ) ಎಫ್.ಐ.ಪಿ. | 0 | 0 |
| | (ಇ) ಫ್ರಂಟ್ ಆ್ಯಕ್ಸ್ಲ್ | 0 | 0 |
| | (ಈ) ರಿಯರ್ ಆ್ಯಕ್ಸ್ಲ್ | 0 | 0 |
| | (ಉ) ರಿಯರ್ ಆ್ಯಕ್ಸ್ಲ್ ಹೌಸಿಂಗ್ | 0 | 0 |
| | (ಊ) ಆಟೋಮೈಸರ್ | 0 | 0 |

**1.5 ಹೊಸ ವಾಹನ ಕವಚಗಳು :**

ವರದಿ ವರ್ಷದಲ್ಲಿ ಒಟ್ಟು 01 ವಾಹನವನ್ನು ಮಾತ್ರ ಖಾಸಗಿಯವರ ಮುಖಾಂತರ ನಿರ್ಮಾಣ ಮಾಡಲಾಗಿದೆ. ವಿವರವನ್ನು **ತಃಖ್ತೆ–23**ರಲ್ಲಿ ಕೊಡಲಾಗಿದೆ.

**ತಃಖ್ತೆ–23**

| ಕ್ರ. ಸಂ. | ವಾಹನ ಮಾದರಿ | ಪ್ರಾದೇಶಿಕ ಕಾರ್ಯಾಗಾರ | | ಖಾಸಗಿ ಕಾರ್ಯಾಗಾರ | | ಒಟ್ಟು | |
|---|---|---|---|---|---|---|---|
| | | **2019–20** | **2020–21** | **2019–20** | **2020–21** | **2019–20** | **2020–21** |
| 1 | ಗ್ರಾಮಾಂತರ | | | | | | |
| | ಅ) ಸುಖಾಸೀನ/ಹೈ–ಟೆಕ್/ ಹವಾನಿಯಂತ್ರಿತ | 0 | 0 | 0 | 0 | 0 | 0 |
| | ಬ) ವೇಗದೂತ | 0 | 0 | 49 | 1 | 49 | 1 |
| | ಕ) ಸಾಮಾನ್ಯ | 0 | 0 | 0 | 0 | 0 | 0 |
| 2 | ನಗರಸಾರಿಗೆ | 0 | 0 | 0 | 0 | 0 | 0 |
| 3 | ಕರೋನಾ | 0 | 0 | 0 | 0 | 0 | 0 |
| 4 | ಜೆಎನ್.ನರ್ಮ್ (ನಗರಸಾರಿಗೆ) | 0 | 0 | 0 | 0 | 0 | 0 |
| 5 | ಹವಾನಿಯಂತ್ರಣರಹಿತ ಸ್ಲೀಪರ್ | 0 | 0 | 0 | 0 | 0 | 0 |
| 6 | ರಾಜಹಂಸ | 0 | 0 | 0 | 0 | 0 | 0 |
| **ಒಟ್ಟು** | | **0** | **0** | **49** | **1** | **49** | **1** |

1) ಅಸೆಂಬ್ಲಿಗಳ ಮರುಒಪ್ಪದ ಜೊತೆಗೆ ಬಹುತೇಕ ಬಿಡಿಭಾಗಗಳನ್ನು ಮತ್ತು ಲಘು ಅಸೆಂಬ್ಲಿಗಳನ್ನು ಉತ್ಪಾದಿಸಿ ವಿಭಾಗೀಯ/ಘಟಕ ಕಾರ್ಯಾಗಾರಗಳಿಗೆ ಅಗತ್ಯತೆಗನುಗುಣವಾಗಿ ಕಾಲಕಾಲಕ್ಕೆ ಪೂರೈಸಲಾಗಿದೆ.

2) ವಿಭಾಗಗಳ ಕಾರ್ ಮತ್ತು ಜೀಪ್ ದುರಸ್ತಿಯನ್ನು ಆಯಾಯ ವಿಭಾಗೀಯ ಕಾರ್ಯಾಗಾರದಲ್ಲಿನ ಇಲಾಖಾ ವಾಹನ ಶಾಖೆಯು ಕೈಗೊಂಡಿದೆ.

*****

**ಪರಿಚ್ಛೇದ 6**

# ಉಗ್ರಾಣ

## 6.1 ದಾಸ್ತಾನು ತಪಶೀಲು ಪಟ್ಟಿ :

ಸಂಸ್ಥೆಯು ದಿನಾಂಕ 31-03–2021ರಂದು ಹೊಂದಿದ ಬಿಡಿಭಾಗಗಳ ಮತ್ತು ಇತರ ಸರಕುಗಳ ದಾಸ್ತಾನಿನ ವಿವರವನ್ನು **ತಃಖ್ತೆ–24**ರಲ್ಲಿ ತೋರಿಸಲಾಗಿದೆ.

**ತಃಖ್ತೆ–24**

| ಕ್ರ. ಸಂ. | ವಿವರ | ಮೌಲ್ಯ (ಲಕ್ಷ ರೂ.ಗಳಲ್ಲಿ) | |
|---|---|---|---|
| | | **2019–20** | **2020–21** |
| 1 | ಪ್ರಾರಂಭಿಕ ಶಿಲ್ಕು | 2264.55 | 2529.72 |
| 2 | ಖರೀದಿಯಿಂದ ಸೇರ್ಪಡೆ | 70624.07 | 45277.57 |
| 3 | **ಒಟ್ಟು (1+2)** | 72888.62 | 47807.29 |
| 4 | ವಾರ್ಷಿಕ ಬಳಕೆ | 70358.90 | 45674.10 |
| 5 | **ವರ್ಷಾಂತ್ಯದ ಶಿಲ್ಕು (3–4)** | 2529.72 | 2133.19 |

ವರದಿ ವರ್ಷದಲ್ಲಿ ವರ್ಗೀಕರಿಸಿ ಸರಕುಗಳ ದಾಸ್ತಾನಿನ ವಿವರವನ್ನು **ತಃಖ್ತೆ–25**ರಲ್ಲಿ ಕೊಡಲಾಗಿದೆ.

**ತಃಖ್ತೆ–25**

| ಕ್ರ. ಸಂ. | ವರ್ಗೀಕರಣ | ಮಾರ್ಚ್ 31ರಂದು ಇದ್ದ ದಾಸ್ತಾನು (ಲಕ್ಷ ರೂ.ಗಳಲ್ಲಿ) | | ಮಾರ್ಚ್ 31ರಂದು ಇದ್ದ ದಾಸ್ತಾನು ಪ್ರಮಾಣ ವಾಹನವೊಂದಕ್ಕೆ (ರೂ.ಗಳಲ್ಲಿ) | | ಮಾರ್ಚ್ 31ರಂದು ಇದ್ದ ದಾಸ್ತಾನು ಪ್ರಮಾಣ (ಮಾಸಿಕ ಬಳಕೆ) (ಲಕ್ಷ ರೂ.ಗಳಲ್ಲಿ) | |
|---|---|---|---|---|---|---|---|
| | | **2020** | **2021** | **2020** | **2021** | **2020** | **2021** |
| 1 | ಇಂಧನ | 750.65 | 898.01 | 15873.00 | 19454.00 | 0.14 | 0.26 |
| 2 | ಕೀಲೆಣ್ಣೆ | 128.78 | 93.35 | 2723.00 | 2022.00 | 2.68 | 3.58 |
| 3 | ಟಯರ್, ಟ್ಯೂಬ್ ಮತ್ತು ಫ್ಲ್ಯಾಪ್ | 210.51 | 22.67 | 4451.00 | 491.00 | 0.68 | 0.17 |
| 4 | ಬ್ಯಾಟರಿ | 14.89 | 17.24 | 315.00 | 373.00 | 0.63 | 0.92 |
| 5 | ಬಿಡಿಭಾಗಗಳು (ಅಸೆಂಬ್ಲಿ ಸೇರಿದಂತೆ) | 822.04 | 702.10 | 17383.00 | 15210.00 | 5.29 | 10.02 |
| 6 | ಇತರ ಬಳಕೆ ವಸ್ತುಗಳು | 557.72 | 350.75 | 11794.00 | 7599.00 | 7.90 | 4.33 |
| 7 | ಟಿಕೆಟ್, ಲೇಖನ ಸಾಮಗ್ರಿ ಮತ್ತು ಸಮವಸ್ತ್ರ | 45.13 | 49.07 | 954.00 | 1063.00 | 1.30 | 4.06 |
| | **ಒಟ್ಟು** | **2529.72** | **2133.19** | **53493.00** | **46212.00** | **0.43** | **0.56** |

ದಿನಾಂಕ 31-03–2021ರಂದು ಹೊಂದಿದ್ದ ಒಟ್ಟು ದಾಸ್ತಾನಿನ ತಪಶೀಲು ಮೊತ್ತ ರೂ. 2133.19ಲಕ್ಷ ಆಗಿದೆ. ಇದರ ಪೈಕಿ, ಶೇ.42.1ರಷ್ಟು ಇಂಧನಕ್ಕಾಗಿ, ಶೇ. 4.4ರಷ್ಟು ಕೀಲೆಣ್ಣೆಗಳಿಗಾಗಿ, ಶೇ. 1.1ರಷ್ಟು ಟಯರ್, ಟ್ಯೂಬ್ ಮತ್ತು

ಫ್ಲ್ಯಾಪ್‌ಗಳಿಗಾಗಿ, ಶೇ.32.9ರಷ್ಟು ಬಿಡಿಭಾಗಗಳಿಗಾಗಿ ಹಾಗೂ ಶೇ.16.4ರಷ್ಟು ಇನ್ನಿತರ ಬಳಕೆ ವಸ್ತುಗಳಿಗಾಗಿ ಸಂಬಂಧಿಸಿದ್ದಾಗಿದೆ. ಈ ಅವಧಿಯಲ್ಲಿ ವಾಹನವೊಂದಕ್ಕೆ ದಾಸ್ತಾನಿನ ಪ್ರಮಾಣ ರೂ. 46212.00ರಷ್ಟಿತ್ತು.

### 6.2 ಸರಕುಗಳ ಖರೀದಿ ಮತ್ತು ಬಳಕೆ :

ವರದಿ ವರ್ಷದಲ್ಲಿ ಖರೀದಿಸಿ ಬಳಸಿದ ಸರಕುಗಳ ಮೌಲ್ಯ ವಿಶ್ಲೇಷಣೆ ವಿವರವನ್ನು **ತಃಖ್ತೆ–26**ರಲ್ಲಿ ನೀಡಲಾಗಿದೆ.

**ತಃಖ್ತೆ–26**

| ಕ್ರ. ಸಂ. | ವರ್ಗೀಕರಣ | ಖರೀದಿ | | | | ಬಳಕೆ | | | |
|---|---|---|---|---|---|---|---|---|---|
| | | ಲಕ್ಷ ರೂ.ಗಳಲ್ಲಿ | | ಸರಾಸರಿ ವಾಹನವೊಂದಕ್ಕೆ (ರೂ.ಗಳಲ್ಲಿ) | | ಲಕ್ಷ ರೂ.ಗಳಲ್ಲಿ | | ಸರಾಸರಿ ವಾಹನವೊಂದಕ್ಕೆ (ರೂ.ಗಳಲ್ಲಿ) | |
| | | 19–20 | 20–21 | 19–20 | 20–21 | 19–20 | 20–21 | 19–20 | 20–21 |
| 1 | ಇಂಧನ | 62757.51 | 41772.02 | 1327078 | 904940 | 62676.07 | 41624.66 | 1325356 | 901747 |
| 2 | ಕೀಲೆಣ್ಣೆ | 576.53 | 277.40 | 12191 | 6010 | 577.25 | 312.83 | 12207 | 6777 |
| 3 | ಟಯರ್, ಟ್ಯೂಬ್ ಮತ್ತು ಫ್ಲ್ಯಾಪ್ | 3756.73 | 1367.63 | 79440 | 29628 | 3689.27 | 1555.47 | 78014 | 33697 |
| 4 | ವಿದ್ಯುತ್‌ಕೋಶ | 280.22 | 226.25 | 5926 | 4901 | 285.79 | 223.90 | 6043 | 4851 |
| 5 | ಬಿಡಿಭಾಗಗಳು (ಅಸೆಂಬ್ಲಿಗಳು ಸೇರಿದಂತೆ) | 1624.73 | 720.60 | 34357 | 15611 | 1865.57 | 840.54 | 39450 | 18209 |
| 6 | ಇತರ ಬಳಕೆ ವಸ್ತುಗಳು | 1213.53 | 764.87 | 25661 | 16570 | 847.50 | 971.84 | 17921 | 21054 |
| 7 | ಟಿಕೆಟ್, ಲೇಖನ ಸಾಮಗ್ರಿ ಮತ್ತು ಸಮವಸ್ತ್ರ | 414.82 | 148.80 | 8772 | 3224 | 417.45 | 144.86 | 8827 | 3138 |
| **ಒಟ್ಟು** | | **70624.07** | **45277.57** | **1493425** | **980884** | **70358.90** | **45674.10** | **1487818** | **989473** |

ವರದಿ ವರ್ಷದಲ್ಲಿ ಖರೀದಿಸಿದ ಸರಕುಗಳ ಒಟ್ಟು ಮೌಲ್ಯವು ರೂ. 45277.57ಲಕ್ಷವಾಗಿರುತ್ತದೆ. ಖರೀದಿಸಿದ ಸರಕುಗಳ ಸರಾಸರಿ ಮೌಲ್ಯವು ವಾಹನವೊಂದಕ್ಕೆ ರೂ. 9.81ಲಕ್ಷವಾಗಿರುತ್ತದೆ. ಬಳಸಿದ ಸರಕುಗಳ ಒಟ್ಟು ಮೌಲ್ಯವು ರೂ. 45674.10ಲಕ್ಷವಾಗಿದ್ದು, ಬಳಸಿದ ಸರಕುಗಳ ಸರಾಸರಿ ಮೌಲ್ಯವು ವಾಹನವೊಂದಕ್ಕೆ ರೂ.9.89 ಲಕ್ಷವಾಗಿರುತ್ತದೆ.

### 6.3 ಆಮದು ಮಾಡಿಕೊಳ್ಳಲಾದ ಬಿಡಿಭಾಗಗಳು/ಯಂತ್ರೋಪಕರಣಗಳು :

ವರದಿ ವರ್ಷದಲ್ಲಿ ಯಾವುದೇ ಬಿಡಿಭಾಗ/ಯಂತ್ರೋಪಕರಣವನ್ನು ಆಮದು ಮಾಡಿಕೊಂಡಿರುವುದಿಲ್ಲ.

### 6.4 ನಿರುಪಯುಕ್ತ ಸರಕುಗಳ ಮತ್ತು ವಾಹನಗಳ ವಿಲೇವಾರಿ :

ವರದಿ ವರ್ಷದಲ್ಲಿ ನಿರುಪಯುಕ್ತ ಸರಕುಗಳ ಮತ್ತು ನಿಷ್ಕ್ರಿಯಗೊಳಿಸಿದ ವಾಹನಗಳನ್ನು ಹರಾಜು ಮೂಲಕ ಮಾರಾಟ ಮಾಡಿ ಒಟ್ಟು ರೂ. 6.58 ಕೋಟಿ ಆದಾಯವನ್ನು ಗಳಿಸಲಾಗಿದೆ.

*****

ಪರಿಚ್ಛೇದ 7

# ಆರ್ಥಿಕ ವ್ಯವಹಾರ

2020-21ನೇ ವರ್ಷದ ಸಂಸ್ಥೆಯ ಹಣಕಾಸು ಮತ್ತು ಆರ್ಥಿಕ ನಿರ್ವಹಣೆಯ ಪ್ರಮುಖ ಅಂಶಗಳನ್ನು ಈ ಕೆಳಗೆ ವಿವರಿಸಲಾಗಿದೆ.

## 7.1 ಬಂಡವಾಳ ರಚನೆ :

ಸಂಸ್ಥೆಯ ಬಂಡವಾಳ ವಂತಿಕೆಯು ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ವಂತಿಕೆಗಳನ್ನು ಒಳಗೊಂಡಿರುತ್ತವೆ. ಸಂಸ್ಥೆಯ ಬಂಡವಾಳ ಹೂಡಿಕೆ ವಿವರವನ್ನು **ತಃಖ್ತೆ-27**ರಲ್ಲಿ ನೀಡಲಾಗಿದೆ.

**ತಃಖ್ತೆ-27**

| ಕ್ರ. ಸಂ. | ಸಂಪನ್ಮೂಲ | 01.04.2020ರಂದು ಇದ್ದಂತೆ | | 2020-21ನೇ ವರ್ಷದಲ್ಲಿ ಜಮಾ (ಲಕ್ಷ ರೂ.ಗಳಲ್ಲಿ) | 2020-21ನೇ ವರ್ಷದಲ್ಲಿ ಮರುಪಾವತಿ (ಲಕ್ಷ ರೂ.ಗಳಲ್ಲಿ) | 31-03-2021ರಂದು ಇದ್ದಂತೆ | |
|---|---|---|---|---|---|---|---|
| | | ಲಕ್ಷ ರೂ.ಗಳಲ್ಲಿ | ಒಟ್ಟು ಮೊತ್ತದ ಶೇ. | | | ಲಕ್ಷ ರೂ.ಗಳಲ್ಲಿ | ಒಟ್ಟು ಮೊತ್ತದ ಶೇ. |
| 1 | ರಾಜ್ಯ ಸರ್ಕಾರ : | | | | | | |
| | ಅ)ಬಂಡವಾಳ ವಂತಿಕೆ | 3197.48 | 3.4 | 0.00 | 0.00 | 3197.48 | 3.4 |
| | ಆ)ಈಕ್ವಿಟಿ ಬಂಡವಾಳ | 9914.91 | 10.5 | 0.00 | 0.00 | 9914.91 | 10.6 |
| 2 | ಕೇಂದ್ರ ಸರ್ಕಾರ | 0.00 | 0.0 | 0.00 | 0.00 | 0.00 | 0.0 |
| 3 | ಆಂತರಿಕ ಸಂಪನ್ಮೂಲಗಳು | 72303.19 | 76.3 | 0.00 | 0.00 | 72303.19 | 77.7 |
| 4 | ಸಾಲಗಳು : | | | | | | |
| | ಅ) ಡಿಬೆಂಚರ್‌ಗಳು | 0.00 | 0.0 | 0.00 | 0.00 | 0.00 | 0.0 |
| | ಆ) ಗ್ರಾಮೀಣ ಡಿಬೆಂಚರ್‌ಗಳು | 0.00 | 0.0 | 0.00 | 0.00 | 0.00 | 0.0 |
| | ಇ) ವಾಣಿಜ್ಯ ಬ್ಯಾಂಕ್‌ಗಳು | 9319.60 | 9.8 | 0.00 | 1632.81 | 7686.78 | 8.3 |
| | ಈ) ಎಲ್.ಐ.ಸಿ. | 0.00 | 0.0 | 0.00 | 0.00 | 0.00 | 0.0 |
| | ಉ) ಐ.ಡಿ.ಬಿ.ಐ. | 0.00 | 0.0 | 0.00 | 0.00 | 0.00 | 0.0 |
| | ಊ) ಹುಡ್ಕೋ | 0.00 | 0.0 | 0.00 | 0.00 | 0.00 | 0.0 |
| | ಎ) ಡೆಫರ್ಡ್ ಪೇಮೆಂಟ್ | 0.00 | 0.0 | 0.00 | 0.00 | 0.00 | 0.0 |
| | ಏ) ರಾಜ್ಯ ಸರ್ಕಾರದಿಂದ ಸಾಲ | 0.00 | 0.0 | 0.00 | 0.00 | 0.00 | 0.0 |
| | ಐ) ಐ.ಡಿ.ಬಿ.ಐ. ಸಾಲ | 0.00 | 0.0 | 0.00 | 0.00 | 0.00 | 0.0 |
| | ಒ) ಇತರ (ಎಂ.ಪಿ. ಫಂಡ್) | 0.00 | 0.0 | 0.00 | 0.00 | 0.00 | 0.0 |
| **ಒಟ್ಟು** | | **94735.18** | **100.0** | **0.00** | **1632.81** | **93102.37** | **100.0** |

## 7.2 ಬಂಡವಾಳ ಜಮಾ :

ವರದಿ ವರ್ಷದಲ್ಲಿ ರೂ. 1632.81ಲಕ್ಷ ಸಾಲದ ಮರುಪಾವತಿಯಿಂದಾಗಿ ಸಂಸ್ಥೆಯ ಬಂಡವಾಳವು ದಿನಾಂಕ 31-03-2021ರಂದು ರೂ. 93102.37ಲಕ್ಷ ಆಗಿದ್ದು, ಕಳೆದ ವರ್ಷದ ಬಂಡವಾಳವಾದ ರೂ. 94735.18ಲಕ್ಷ ಅಂದರೆ, ರೂ. 1632.81ಲಕ್ಷದಷ್ಟು ಕಡಿಮೆಯಾಗಿದೆ.

## 7.3 ಬಂಡವಾಳ ವೆಚ್ಚ :

ವರದಿ ವರ್ಷಾಂತ್ಯಕ್ಕೆ ಒಟ್ಟು ಸ್ಥಿರಾಸ್ಥಿಗಳ ಮೇಲಿನ ಬಂಡವಾಳ ವೆಚ್ಚದ ಮೊಬಲಗು ಮತ್ತು ಆರ್ಥಿಕ ವರ್ಷದಲ್ಲಿ ಸೇರ್ಪಡೆಯಾದ ನಿವ್ವಳ ಬಾಬ್ತುಗಳ ವಿವರವನ್ನು **ತಃಖ್ತೆ–28**ರಲ್ಲಿ ನೀಡಲಾಗಿದೆ.

ವರದಿ ವರ್ಷದ ಅವಧಿಯಲ್ಲಿ ಸ್ಥಿರಾಸ್ಥಿಗಳ ಮೇಲೆ ಭರಿಸಿದ ರೂ. 4071.41ಲಕ್ಷ ಸೇರಿ ಒಟ್ಟು ಬಂಡವಾಳ ವೆಚ್ಚ ದಿನಾಂಕ 01–04–2020ರಂದು ಇದ್ದ ರೂ. 155101.05ಲಕ್ಷದಿಂದ ರೂ. 159172.46ಲಕ್ಷಕ್ಕೆ ಏರಿಕೆಯಾಗಿದೆ. ಒಟ್ಟು ಬಂಡವಾಳ ವೆಚ್ಚದಲ್ಲಿ ರೂ. 91490.74ಲಕ್ಷ ಅಥವಾ ಶೇ.57.5ರಷ್ಟು ಪ್ರಯಾಣಿಕ ವಾಹನಗಳಿಗೂ ಮತ್ತು ರೂ. 60560.11ಲಕ್ಷ ಅಥವಾ ಶೇ.38.0 ಭೂಮಿ ಮತ್ತು ಕಟ್ಟಡಗಳಿಗೂ, ಉಳಿದ ರೂ. 7121.61ಲಕ್ಷ ಅಥವಾ ಶೇ.4.5ರಷ್ಟು ಇಲಾಖಾ ವಾಹನಗಳಿಗೂ ಹಾಗೂ ಇತರ ಸ್ವತ್ತುಗಳಿಗಾಗಿಯೂ ತೊಡಗಿಸಲಾಗಿದೆ.

**ತಃಖ್ತೆ–28**

| ಕ್ರ. ಸಂ. | ಆಸ್ತಿಯ ವಿವರ | 01–04–2020ರಂದು ಇದ್ದಂತೆ | | 2020–21ರಲ್ಲಿ ಸೇರ್ಪಡೆಯಾದದ್ದು | | 31–03–2021ರಂದು ಇದ್ದಂತೆ | |
|---|---|---|---|---|---|---|---|
| | | ಲಕ್ಷ ರೂ. ಗಳಲ್ಲಿ | ಒಟ್ಟು ಮೊತ್ತದ ಶೇ. | ಲಕ್ಷ ರೂ. ಗಳಲ್ಲಿ | ಒಟ್ಟು ಮೊತ್ತದ ಶೇ. | ಲಕ್ಷ ರೂ. ಗಳಲ್ಲಿ | ಒಟ್ಟು ಮೊತ್ತದ ಶೇ. |
| 1 | ಭೂಮಿ | 707.50 | 0.5 | 31.31 | 0.8 | 738.81 | 0.5 |
| 2 | ಕಟ್ಟಡಗಳು (ನಿರ್ಮಾಣ ಹಂತದಲ್ಲಿರುವವೂ ಸೇರಿದಂತೆ) | 55068.66 | 35.5 | 5491.45 | 134.9 | 60560.11 | 38.0 |
| 3 | ಪ್ರಯಾಣಿಕ ವಾಹನಗಳು | 92988.54 | 60.0 | –1497.80 | –36.9 | 91490.74 | 57.5 |
| 4 | ಇಲಾಖಾ ವಾಹನಗಳು | 1160.33 | 0.7 | 0.00 | 0.0 | 1160.33 | 0.7 |
| 5 | ಸ್ಥಾವರ, ಯಂತ್ರೋಪಕರಣಗಳು ಮತ್ತು ಗಣಕಯಂತ್ರಗಳು | 4844.06 | 3.1 | 43.04 | 1.1 | 4887.10 | 3.1 |
| 6 | ಪೀಠೋಪಕರಣಗಳು ಮತ್ತು ಇತರ ಸಲಕರಣೆಗಳು | 331.96 | 0.2 | 3.41 | 0.1 | 335.37 | 0.2 |
| **ಒಟ್ಟು** | | **155101.05** | **100.0** | **4071.41** | **100.0** | **159172.46** | **100.0** |

## 7.4 ಆದಾಯ ಸಂದಾಯ :

ವರದಿ ವರ್ಷದಲ್ಲಿ ಸಂಸ್ಥೆಯು ರೂ.128141.59ಲಕ್ಷ ಒಟ್ಟು ಆದಾಯ ಗಳಿಸಿದೆ. ವಿವಿಧ ಮೂಲಗಳಿಂದ ಗಳಿಸಿದ ಆದಾಯದ ವಿವರವನ್ನು **ತಃಖ್ತೆ–29**ರಲ್ಲಿ ತೋರಿಸಲಾಗಿದೆ.

**ತಃಖ್ತೆ–29**

| ಕ್ರ. ಸಂ. | ಬಾಬ್ತು | ಮೊಬಲಗು (ಲಕ್ಷ ರೂ.ಗಳಲ್ಲಿ) | | ಒಟ್ಟು ಮೊತ್ತದ ಶೇ. | | ಆದಾಯ ಪ್ರತಿ ಪರಿಣಾಮಕಾರಿ ಕಿ.ಮೀ.ಗೆ (ಪೈಸೆ) | |
|---|---|---|---|---|---|---|---|
| | | 2019–20 | 2020–21 | 2019–20 | 2020–21 | 2019–20 | 2020–21 |
| ಅ | ಸಾರಿಗೆ ಆದಾಯ : | | | | | | |
| 1 | ಪ್ರಯಾಣಿಕರಿಂದ | 149885.10 | 85254.72 | 81.6 | 66.5 | 2959.7 | 2788.4 |
| 2 | ಸಾಂದರ್ಭಿಕ ಒಪ್ಪಂದಗಳಿಂದ | 3061.64 | 2889.62 | 1.7 | 2.3 | 60.5 | 94.5 |

| | | | | | | | |
|---|---|---|---|---|---|---|---|
| 3 | ಪ್ರಯಾಣಿಕರ ಸರಕು ಸಾಗಾಣಿಕೆಯಿಂದ | 907.69 | 620.30 | 0.5 | 0.5 | 17.9 | 20.3 |
| 4 | ಪಾರ್ಸಲ್ ಮತ್ತು ಅಂಚೆ ರವಾನೆಯಿಂದ | 96.43 | 35.22 | 0.1 | 0.0 | 1.9 | 1.2 |
| | **ಒಟ್ಟು (ಅ)** | **153950.86** | **88799.86** | **83.9** | **69.3** | **3040.0** | **2904.4** |
| ಆ | ಇತರ ಆದಾಯ : | | | | | | |
| 1 | ಜಾಹೀರಾತು | 382.94 | 84.28 | 0.2 | 0.1 | 7.6 | 2.8 |
| 2 | ನಿಷ್ಕ್ರಿಯ ವಾಹನ/ವಸ್ತುಗಳ ಮಾರಾಟ | 1445.95 | 966.99 | 0.8 | 0.8 | 28.6 | 31.6 |
| 3 | ಉಪಾಹಾರ ಗೃಹ ಮತ್ತು ಕ್ಯಾಂಟೀನ್ ಕರಾರಿನಿಂದ | 2030.26 | 1151.84 | 1.1 | 0.9 | 40.1 | 37.7 |
| 4 | ಬಡ್ಡಿ ಮತ್ತು ರಿಯಾಯತಿ | 397.55 | 266.29 | 0.2 | 0.2 | 7.9 | 8.7 |
| 5 | ರಾಜ್ಯ ಸರ್ಕಾರದ ಸಹಾಯಧನ | 21528.78 | 33120.31 | 11.7 | 25.8 | 425.1 | 1083.3 |
| 6 | ಇನ್ನಿತರ | 3982.77 | 3752.02 | 2.2 | 2.9 | 78.6 | 122.7 |
| 7 | ಹಿಂದಿನ ಅವಧಿಯ ಆದಾಯ | 0.00 | 0.00 | 0.0 | 0.0 | 0.0 | 0.0 |
| | **ಒಟ್ಟು (ಆ)** | **29768.25** | **39341.73** | **16.2** | **30.7** | **587.9** | **1286.8** |
| ಇ | **ಒಟ್ಟು ಆದಾಯ (ಅ+ಆ)** | **183719.11** | **128141.59** | **100.0** | **100.0** | **3627.9** | **4191.2** |

ವರದಿ ವರ್ಷದಲ್ಲಿ ರೂ.128141.59ಲಕ್ಷ ಒಟ್ಟು ಆದಾಯ ಸಂಗ್ರಹಿಸಲಾಗಿದೆ. ಇದರಲ್ಲಿ ಶೇ.69.3ರಷ್ಟು ಅಥವಾ ರೂ.88799.86ಲಕ್ಷ ಸಾರಿಗೆ ಆದಾಯವಾಗಿದ್ದು, ಇನ್ನುಳಿದ ಶೇ.30.7 ಅಥವಾ ರೂ.39341.73ಲಕ್ಷ ಇತರ ಆದಾಯವಾಗಿರುತ್ತದೆ. (ಸಂಸ್ಥೆಯು ವಿವಿಧ ವರ್ಗಗಳ ಪ್ರಯಾಣಿಕರಿಗೆ ನೀಡಿದ ರಿಯಾಯಿತಿ ಬಾಬ್ತು ರಾಜ್ಯ ಸರ್ಕಾರದಿಂದ ರೂ.30120.31ಲಕ್ಷ ಮರುಭರಿಕೆ ಮೊತ್ತ ಪಡೆದಿದೆ.) ಒಟ್ಟು ಆದಾಯ ಪ್ರತಿ ಕಿ.ಮೀ.ಗೆ 4191.2 ಪೈಸೆಯಾಗಿರುತ್ತದೆ.

## 7.5 ಕಾರ್ಯಾಚರಣೆ ವೆಚ್ಚ :

ವರದಿ ವರ್ಷದಲ್ಲಿ ಒಟ್ಟಾರೆ ರೂ. 146786.60ಲಕ್ಷ ಕಾರ್ಯಾಚರಣೆ ವೆಚ್ಚವಾಗಿದೆ. ವಿವಿಧ ಶೀರ್ಷಿಕೆಗಳಡಿಯಲ್ಲಿ ಭರಿಸಲಾದ ವೆಚ್ಚಗಳ ವಿವರವನ್ನು **ತಃಖ್ತೆ-30**ರಲ್ಲಿ ಕೊಡಲಾಗಿದೆ.

**ತಃಖ್ತೆ-30**

| ಕ್ರ. ಸಂ. | ವಿವರ | ಮೊಬಲಗು (ಲಕ್ಷ ರೂ.ಗಳಲ್ಲಿ) | | ಒಟ್ಟು ಮೊತ್ತದ ಶೇ. | | ಪ್ರತಿ ಪರಿಣಾಮಕಾರಿ ಕಿ.ಮೀ.ಗೆ ವೆಚ್ಚ(ಪೈಸೆ) | |
|---|---|---|---|---|---|---|---|
| | | **2019-20** | **2020-21** | **2019-20** | **2020-21** | **2019-20** | **2020-21** |
| ಅ<br>1 | ಕಾರ್ಯಾಚರಣೆ ವೆಚ್ಚ :<br>ಸಿಬ್ಬಂದಿ : | | | | | | |
| | ಅ) ಸಾರಿಗೆ | 52397.68 | 44579.06 | 27.2 | 30.2 | 1034.7 | 1458.1 |
| | ಆ) ತಾಂತ್ರಿಕ | 10650.64 | 11865.28 | 5.5 | 8.1 | 210.3 | 388.1 |
| | ಇ) ಇತರ | 10445.29 | 10349.24 | 5.4 | 7.1 | 206.3 | 338.5 |
| | ಈ) ಭವಿಷ್ಯ ನಿಧಿ, ಕಲ್ಯಾಣ ಇತರ | 20808.89 | 15269.43 | 10.8 | 10.4 | 410.9 | 499.4 |
| | **ಒಟ್ಟು (1)** | **94303.50** | **82063.01** | **48.9** | **56.0** | **1862.2** | **2684.1** |
| 2 | ಇಂಧನ | 62676.08 | 41258.56 | 32.5 | 28.1 | 1237.6 | 1349.4 |

| | | | | | | | |
|---|---|---|---|---|---|---|---|
| 3 | ಕೀಲೆಣ್ಣೆ | 577.25 | 312.83 | 0.3 | 0.2 | 11.4 | 10.2 |
| 4 | ಬಿಡಿಭಾಗಗಳು | 1865.57 | 840.54 | 1.0 | 0.6 | 36.8 | 27.5 |
| 5 | ಟಯರ್,ಟ್ಯೂಬ್ ಮತ್ತು ಫ್ಲ್ಯಾಪ್ | 3789.27 | 1555.47 | 2.0 | 1.1 | 74.8 | 50.9 |
| 6 | ಬ್ಯಾಟರಿ | 285.79 | 223.90 | 0.1 | 0.2 | 5.6 | 7.3 |
| 7 | ಇತರ ಬಳಕೆ ವಸ್ತುಗಳು | 468.37 | 521.45 | 0.2 | 0.4 | 9.2 | 17.1 |
| 8 | ಮರುಒಪ್ಪ | 190.28 | 95.67 | 0.1 | 0.1 | 3.8 | 3.1 |
| 9 | ಖಾಸಗಿ ಹೊರಗುತ್ತಿಗೆ | 0.00 | 0.00 | 0.0 | 0.0 | 0.0 | 0.0 |
| 10 | ತೆರಿಗೆಗಳು : | | | | | | |
| | ಅ) ಮೋಟಾರು ವಾಹನ ತೆರಿಗೆ | 7903.90 | 4677.21 | 4.1 | 3.2 | 156.1 | 153.0 |
| | ಆ) ಪ್ರಯಾಣಿಕ ತೆರಿಗೆ | 0.00 | 0.00 | 0.0 | 0.0 | 0.0 | 0.0 |
| | ಇ) ವಾಹನಗಳ ಮೇಲಿನ ಇತರ ತೆರಿಗೆಗಳು | 39.09 | 27.45 | 0.0 | 0.0 | 0.8 | 0.9 |
| | **ಒಟ್ಟು (10)** | **7942.99** | **4704.66** | **4.1** | **3.2** | **156.9** | **153.9** |
| 11 | ಬಡ್ಡಿ : | | | | | | |
| | ಅ) ಕೇಂದ್ರ ಸರ್ಕಾರಕ್ಕೆ | 0.00 | 0.00 | 0.0 | 0.0 | 0.0 | 0.0 |
| | ಬ) ರಾಜ್ಯ ಸರ್ಕಾರಕ್ಕೆ | 0.00 | 0.00 | 0.0 | 0.0 | 0.0 | 0.0 |
| | ಕ) ಇತರ ಸಾಲಗಳಿಗೆ | 970.88 | 736.56 | 0.5 | 0.5 | 19.2 | 24.1 |
| | **ಒಟ್ಟು (11)** | **970.88** | **736.56** | **0.5** | **0.5** | **19.2** | **24.1** |
| 12 | ಸವಕಳಿ : | | | | | | |
| | ಅ) ವಾಹನಗಳ ಮೇಲೆ | 10573.81 | 6478.12 | 5.5 | 4.4 | 208.8 | 211.9 |
| | ಆ) ಇತರ ಆಸ್ತಿಗಳ ಮೇಲೆ | 648.23 | 658.67 | 0.3 | 0.4 | 12.8 | 21.5 |
| | **ಒಟ್ಟು (12)** | **11222.04** | **7136.79** | **5.8** | **4.8** | **221.6** | **233.4** |
| 13 | ಇತರ ಬಾಬ್ತುಗಳು | 7844.79 | 5951.75 | 4.1 | 4.1 | 154.9 | 194.7 |
| 14 | ಹಿಂದಿನ ಅವಧಿಯ ವೆಚ್ಚಗಳು | 510.68 | 1385.41 | 0.3 | 0.9 | 10.1 | 45.3 |
| | **ಒಟ್ಟು ('ಅ')** | **192646.49** | **146786.60** | **100.0** | **100.0** | **3804.1** | **4801.0** |
| ಬ | ಪ್ರೀಮಿಯಂ ಮತ್ತು ವಿನಿಯೋಗ: | | | | | | |
| | 1. ಆದಾಯ ತೆರಿಗೆ | 0.00 | 0.00 | 0.0 | 0.0 | 0.0 | 0.0 |
| | 2. ನಿವ್ವಳ ಆದಾಯ | 0.00 | 0.00 | 0.0 | 0.0 | 0.0 | 0.0 |
| | **(ಒಟ್ಟು 'ಬ')** | **0.00** | **0.00** | **0.0** | **0.0** | **0.0** | **0.0** |
| ಕ | **ಒಟ್ಟು ('ಅ'+'ಬ')** | **192646.49** | **146786.60** | **100.0** | **100.0** | **3804.1** | **4801.0** |

ಕಾರ್ಯಾಚರಣೆ ವೆಚ್ಚವು ಆದಾಯ ವೆಚ್ಚದ ಎಲ್ಲಾ ಬಾಬ್ತುಗಳು ಮತ್ತು ಬಂಡವಾಳ ವೆಚ್ಚಗಳಾದ ಸವಕಳಿ, ಬಂಡವಾಳ ಮತ್ತು ಸಾಲದ ಮೇಲಿನ ಬಡ್ಡಿ ಇವುಗಳನ್ನು ಒಳಗೊಂಡಿರುತ್ತದೆ.

ಸಂಸ್ಥೆಯು ವೆಚ್ಚದ ಮೇಲೆ ಹತೋಟಿ ಸಾಧಿಸಲು ಮತ್ತು ಆದಾಯವನ್ನು ಹೆಚ್ಚಿಸಲು ತೆಗೆದುಕೊಂಡ ಹಲವು ಕ್ರಮಗಳನ್ನು ಈ ಕೆಳಗೆ ನೀಡಲಾಗಿದೆ.

1) ಸಾರಿಗೆ ಆದಾಯವನ್ನು ಹೆಚ್ಚಿಸಲು ಆಯ್ದ ಪರಿಣಾಮಕಾರಿ ತನಿಖಾ ವಿಧಾನಗಳನ್ನು ಅಳವಡಿಸಿಕೊಂಡು ಮಾರ್ಗತನಿಖೆಯನ್ನು ತೀವ್ರಗೊಳಿಸಲಾಗಿದೆ.

2) ವಾಹನಗಳ ನಿಯತಕಾಲಿಕ ನಿರ್ವಹಣೆ ಗುಣಮಟ್ಟವನ್ನು ಉತ್ತಮಪಡಿಸಿ, ಅವಘಡ ಮತ್ತು ಕಿ.ಮೀ ರದ್ದತಿಯನ್ನು ಕನಿಷ್ಠ ಮಟ್ಟದಲ್ಲಿರುವಂತೆ ನೋಡಿಕೊಳ್ಳಲಾಗಿದೆ.

3) ವಾಹನ ಬಳಕೆಯನ್ನು ಉತ್ತಮಪಡಿಸುವ ಮೂಲಕ ಪ್ರತಿ ಕಿ.ಮೀ. ಸ್ಥಿರ ವೆಚ್ಚವನ್ನು ತಗ್ಗಿಸಿ, ಪ್ರತಿ ಕಿ.ಮೀ.ನ ಒಟ್ಟು ವೆಚ್ಚವನ್ನು ತಗ್ಗಿಸಲಾಗಿದೆ.

4) ಕಾರ್ಯ ಯೋಜನೆಯಂತೆ ಕಾರ್ಯಾಚರಣೆ ಚಟುವಟಿಕೆಗಳ ಸತತ ಮೇಲುಸ್ತುವಾರಿ ಕ್ರಮಗಳನ್ನು ಕೈಗೊಂಡು ಮತ್ತು ಸಾಧಿತ ಫಲಿತಾಂಶಗಳನ್ನು ವಿಶ್ಲೇಷಿಸಿ ಕಾರ್ಯ ಯೋಜನೆಯ ನಿಗದಿತ ಗುರಿಯನ್ನು ಸಾಧಿಸಲು ಕ್ರಮ ಕೈಗೊಳ್ಳಲಾಗಿದೆ.

5) ಕಡಿಮೆ ಆದಾಯ ಗಳಿಸಿದ ಅನುಸೂಚಿಗಳ ವೇಳಾಪಟ್ಟಿಯನ್ನು ಪರಿಷ್ಕರಿಸಲಾಗಿದೆ.

6) ಕಾರ್ಯಾಚರಣೆ ವೆಚ್ಚವನ್ನು ತಗ್ಗಿಸಲು, ಕೆ.ಎಂ.ಪಿ.ಎಲ್. ಸುಧಾರಣೆಗಾಗಿ ವ್ಯಾಪಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

7) ಅನುಸೂಚಿವಾರು ಹಾಗೂ ನಿರ್ವಾಹಕವಾರು ದೈನಿಕ ಆದಾಯ ವಿವರವನ್ನು ಪ್ರತಿದಿನವೂ ಪರಿಶೀಲಿಸಿ ಉತ್ತಮಪಡಿಸುವ ಕ್ರಮ ಜರುಗಿಸಲಾಗಿದೆ.

8) ಇನ್ನಿತರ ವೆಚ್ಚ ನಿಯಂತ್ರಣ ಕ್ರಮಗಳನ್ನು ಜಾರಿಗೊಳಿಸುವ ಮೂಲಕ ಗುರುತಿಸಲಾದ ಅನಾವಶ್ಯಕ ವೆಚ್ಚಗಳನ್ನು ತಪ್ಪಿಸಲಾಗಿದೆ.

## 7.6 ಕಾರ್ಯನಿರ್ವಹಣಾ ಫಲಿತಾಂಶಗಳು :

ವರದಿ ವರ್ಷದ ಸಂಸ್ಥೆಯ ಆರ್ಥಿಕ ಫಲಿತಾಂಶಗಳು ಮತ್ತು ಬಂಡವಾಳದ ಮೇಲಿನ ಉತ್ಪಾದಕತೆ ಬಿಂಬಿಸುವ ಸೂಚ್ಯಂಕಗಳ ವಿವರವನ್ನು **ತಃಖ್ತೆ-31**ರಲ್ಲಿ ಕೊಡಲಾಗಿದೆ.

**ತಃಖ್ತೆ-31**

| ಕ್ರ. ಸಂ. | ವಿವರ | 2019-20 | 2020-21 |
|---|---|---|---|
| 1 | ಹೂಡಿದ ಬಂಡವಾಳ (ಮಧ್ಯಸ್ಥ-ಲಕ್ಷ ರೂ.ಗಳಲ್ಲಿ) | -44180.54 | -62608.98 |
| 2 | ಆದಾಯ ವಹಿವಾಟು (ಒಟ್ಟು) | | |
| | ಅ) ಲಕ್ಷ ರೂ.ಗಳಲ್ಲಿ | 183719.11 | 128141.59 |
| | ಆ) ಮಧ್ಯಸ್ಥ ಬಂಡವಾಳ ಅನುಪಾತ | -4.16 | -2.05 |
| 3 | ಒಟ್ಟು ವೆಚ್ಚ | | |
| | ಅ) ಲಕ್ಷ ರೂ.ಗಳಲ್ಲಿ | 192646.49 | 146786.60 |
| | ಆ) ಆದಾಯಕ್ಕೆ ಪ್ರಮಾಣ (ಶೇ.) | 104.86 | 114.55 |
| 4 | ನಿವ್ವಳ ಲಾಭ/ನಷ್ಟ (ಆದಾಯ ತೆರಿಗೆ ಮುನ್ನ) | | |
| | ಅ) ಲಕ್ಷ ರೂ.ಗಳಲ್ಲಿ | -8927.38 | -18645.01 |
| | ಆ) ಹೂಡಿದ ಬಂಡವಾಳಕ್ಕೆ ಶೇ.ಪ್ರಮಾಣ | -20.21 | -29.78 |

| | | | |
|---|---|---|---|
| 5 | ಬಂಡವಾಳ ಮೇಲಿನ ಪ್ರತಿಫಲ<br>(ನಿವ್ವಳ ಲಾಭ ಮತ್ತು ಬಡ್ಡಿ ಸೇರಿ) | | |
| | ಅ) ಲಕ್ಷ ರೂ.ಗಳಲ್ಲಿ | –7956.50 | –17908.45 |
| | ಆ) ಮಧ್ಯಸ್ಥ ಬಂಡವಾಳ ಮೇಲಿನ ಪ್ರತಿಫಲ (ಶೇ.) | –4.82 | –15.46 |

ಕಾಲದಿಂದ ಕಾಲಕ್ಕೆ ತೈಲ ಬೆಲೆಯಲ್ಲಿ ಉಂಟಾದ ಏರಿಕೆ ಮತ್ತು ತುಟ್ಟಿ ಭತ್ಯೆ ಹೆಚ್ಚಳದಿಂದ ಹೆಚ್ಚುವರಿ ವೆಚ್ಚ ಭರಿಸಲಾಗಿದೆ. ವರದಿ ವರ್ಷದಲ್ಲಿ ಸಂಸ್ಥೆಯು ಒಟ್ಟು ರೂ.186.45ಕೋಟಿ ನಷ್ಟ ಅನುಭವಿಸಿದೆ. ಕಳೆದ ವರ್ಷದಲ್ಲಿ ನಷ್ಟದ ಪ್ರಮಾಣವು ರೂ. 89.27ಕೋಟಿ ಆಗಿತ್ತು. ಶೇ. ಬಂಡವಾಳದ ಮೇಲಿನ ಪ್ರತಿಫಲ –15.46 ಆಗಿರುತ್ತದೆ.

### 7.7 ನಿಧಿ ಮತ್ತು ಬಂಡವಾಳ ಹೂಡಿಕೆ :

ವರದಿ ವರ್ಷದಲ್ಲಿ ಸಂಸ್ಥೆಯ ಆಂತರಿಕ ನಿಧಿ ಮತ್ತು ಬಂಡವಾಳ ಹೂಡಿಕೆ ಮೂಲಗಳ ಸ್ಥಿತಿಯ ವಿವರವನ್ನು **ತಃಖ್ತೆ–32**ರಲ್ಲಿ ನೀಡಲಾಗಿದೆ.

ದಿನಾಂಕ 01–04–2020ರಂದು ಸಂಸ್ಥೆಯಲ್ಲಿದ್ದ ಆಂತರಿಕ ಬಂಡವಾಳ ರೂ.68591.94ಲಕ್ಷ ಆಗಿದೆ. ವರದಿ ವರ್ಷದಲ್ಲಿ ರೂ.15935.06ಲಕ್ಷ ಸೇರ್ಪಡೆಯಾಗಿದ್ದು, ರೂ. 11812.37ಲಕ್ಷ ವ್ಯಯಿಸಲಾಗಿದೆ. ದಿನಾಂಕ 31–03–2021 ರಂದು ಉಳಿಕೆ ಇದ್ದ ಮೊತ್ತ ರೂ. 72714.61ಲಕ್ಷ ಆಗಿರುತ್ತದೆ. ವಿವಿಧ ಮಾದರಿಯ ಆಸ್ತಿಗಳ ಸವಕಳಿ ವೆಚ್ಚದ ವಿವರವನ್ನು **ಅನುಸೂಚಿ–'ಉ'**ನಲ್ಲಿ ನೀಡಲಾಗಿದೆ.

**ತಃಖ್ತೆ–32**

(ಲಕ್ಷ ರೂ.ಗಳಲ್ಲಿ)

| ಕ್ರ. ಸಂ. | ನಿಧಿ | 01–04–20ರಂದು ಪ್ರಾರಂಭಿಕ ಶಿಲ್ಕು | 2020–21ರಲ್ಲಿ ಸೇರ್ಪಡೆಯಾದದ್ದು | 2020–21ರಲ್ಲಿ ವ್ಯಯವಾದದ್ದು | 31–03–21ರಂದು ಅಂತಿಮ ಶಿಲ್ಕು |
|---|---|---|---|---|---|
| 1 | ಸವಕಳಿ ನಿಧಿ | 12302.34 | 9500.88 | 1514.83 | 20288.39 |
| 2 | ವಾಹನ ವಿಮಾ ನಿಧಿ (3ನೇ ಪಕ್ಷಗಾರರ ನಷ್ಟ ಭರ್ತಿಗೆ ಮಾತ್ರ) | 20.00 | 1100.68 | 1100.68 | 20.00 |
| 3 | ಇತರ ಸ್ವತ್ತುಗಳಿಗಾಗಿ ವಿಮಾ ನಿಧಿ (ವಾಹನಗಳು ಸೇರಿದಂತೆ) | 3565.25 | 337.41 | 134.29 | 3768.37 |
| 4 | ಈ.ಕ.ರ.ಸಾ.ಸಂಸ್ಥೆ ನೌಕರರ ಕಲ್ಯಾಣ ಮತ್ತು ಪ್ರಯಾಣಿಕರ ಸೌಲಭ್ಯಗಳ ನಿಧಿ | 733.84 | 214.49 | 159.18 | 789.15 |
| 5 | ರಾಜ್ಯ ಸರ್ಕಾರದ ಬಂಡವಾಳ ವೆಚ್ಚದ ಅನುದಾನ | 6145.69 | 0.00 | 993.29 | 5152.40 |
| 6 | ಸಂಸತ್ ಸದಸ್ಯರ ನಿಧಿಯಿಂದ ಅನುದಾನ | 332.56 | 2.10 | 0.51 | 334.15 |
| 7 | ಹೈ.ಕ.ಪ್ರ.ಅ.ಮಂಡಳಿಯಿಂದ ಅನುದಾನ | 2086.61 | 50.00 | 155.19 | 1981.42 |
| 8 | ಕೇಂದ್ರ ಸರ್ಕಾರದಿಂದ ಅನುದಾನ | 438.93 | 0.00 | 6.46 | 432.47 |

| | | | | | |
|---|---|---|---|---|---|
| 9 | ಎಚ್.ಪಿ.ಸಿ.ಆರ್.ಆರ್.ಐ.ನಿಂದ ಅನುದಾನ (ಕರ್ನಾಟಕ ಸರ್ಕಾರ) | 30271.26 | 0.00 | 857.22 | 29414.04 |
| 10 | ಡಿ.ಯು.ಎಲ್.ಟಿ.ಯಿಂದ ಅನುದಾನ (ಕರ್ನಾಟಕ ಸರ್ಕಾರ) | 1683.01 | 504.50 | 186.61 | 2000.90 |
| 11 | ಜೆಎನ್.ನರ್ಮ್ ಅನುದಾನ | 4598.90 | 0.00 | 161.58 | 4437.32 |
| 12 | ಎ.ಎಸ್.ಆರ್.ಟಿ.ಯು. ಅನುದಾನ | 29.70 | 0.00 | 3.23 | 26.47 |
| 13 | ಗ್ರ್ಯಾಚ್ಯುಟಿ ಅಂಡ್ ಲೀವ್ ಎನ್‌ಕ್ಯಾಷ್‌ಮೆಂಟ್ ಫಂಡ್ | 6383.85 | 4225.00 | 6539.30 | 4069.55 |
| | **ಒಟ್ಟು** | **68591.94** | **15935.06** | **11812.37** | **72714.61** |

**ತಃಖ್ತೆ-32**ರಲ್ಲಿ ತೋರಿಸಲಾದ ವಿವಿಧ ನಿಧಿಗಳ ಅಂತಿಮ ಶಿಲ್ಕು, ಬಂಡವಾಳ ಹೂಡಿಕೆಗಾಗಿ ಹಾಗೂ ಸಾಲಗಳ ಮರುಪಾವತಿಗಾಗಿ ಬಳಸಿಕೊಂಡ ಮೊಬಲಗಿನಿಂದ ಹೊರತಾಗಿದೆ. ದಿನಾಂಕ 31-03-2021ರವರೆಗೆ ವಿವಿಧ ನಿಧಿಗಳಿಂದ ಬಳಸಿಕೊಳ್ಳಲಾದ ಮೊಬಲಗಿನ ವಿವರವನ್ನು **ತಃಖ್ತೆ-33**ರಲ್ಲಿ ನೀಡಲಾಗಿದೆ.

**ತಃಖ್ತೆ-33**

(ಲಕ್ಷ ರೂ.ಗಳಲ್ಲಿ)

| ಕ್ರ. ಸಂ | ಬಳಕೆಯಾದ ನಿಧಿ | 01-4-2020 ರಂದು ಪ್ರಾರಂಭಿಕ ಶಿಲ್ಕು | 2020-21ರಲ್ಲಿ ಸೇರ್ಪಡೆಯಾದದ್ದು | 2020-21ರಲ್ಲಿ ವ್ಯಯವಾದದ್ದು | 31-3-2021 ರಂದು ಅಂತಿಮ ಶಿಲ್ಕು |
|---|---|---|---|---|---|
| 1 | ಬಂಡವಾಳ ವೆಚ್ಚ ಮತ್ತು ಸಾಲಗಳ ಮರುಪಾವತಿಗಾಗಿ ಸವಕಳಿ ನಿಧಿ | 72303.19 | 0.00 | 0.00 | 72303.19 |
| 2 | ಅಭಿವೃದ್ಧಿ ನಿಧಿ | 0.00 | 0.00 | 0.00 | 0.00 |
| 3 | ವಾಹನಗಳ ಬದಲಾವಣೆಗಾಗಿ ಬಂಡವಾಳ ಮೀಸಲು ನಿಧಿ | 0.00 | 0.00 | 0.00 | 0.00 |
| 4 | ಈ.ಕ.ರ.ಸಾ.ಸಂಸ್ಥೆಯ ನೌಕರರ ಕಲ್ಯಾಣ ಮತ್ತು ಪ್ರಯಾಣಿಕರ ಸೌಲಭ್ಯಗಳ ನಿಧಿ | 733.84 | 214.49 | 159.18 | 789.15 |
| **ಒಟ್ಟು** | | **73037.03** | **214.49** | **159.18** | **73092.34** |

*****

ಪರಿಚ್ಛೇದ 8

# ಕಾಮಗಾರಿ

## 8.1 ಭೂಮಿ ಮೌಲ್ಯ :

2020–21ನೇ ವರ್ಷಾಂತ್ಯಕ್ಕೆ ಸಂಸ್ಥೆಯು ರೂ. 738.81ಲಕ್ಷ ಮೌಲ್ಯದ ಭೂಮಿಯನ್ನು ಹೊಂದಿರುತ್ತದೆ.

## 8.2 ಕಾಮಗಾರಿ ಕೆಲಸಗಳ ಪ್ರಗತಿ :

ವರದಿ ವರ್ಷದಲ್ಲಿ ಸರ್ಕಾರದ ವಿಶೇಷ ಅಭಿವೃದ್ಧಿ ಯೋಜನೆ ಬಂಡವಾಳ ವೆಚ್ಚ ಯೋಜನೆಗಳಿಂದ ರೂ. 28.87 ಕೋಟಿ ಬಿಡುಗಡೆಯಾಗಿರುತ್ತದೆ. (ಬಿಡುಗಡೆಯಾದ ಸದರಿ ಮೊತ್ತವನ್ನು ಸರ್ಕಾರದ ಆದೇಶದಂತೆ ಸಂಸ್ಥೆಯ ಸಿಬ್ಬಂದಿಗಳ ವೇತನಕ್ಕಾಗಿ ವಿನಿಯೋಗಿಸಲಾಗಿದೆ) ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಯೋಜನೆ ಹಾಗೂ ಡಲ್ಟ್ ಯೋಜನೆಯಡಿಯಲ್ಲಿ ಕ್ರಮವಾಗಿ 5.00 ಕೋಟಿ ಹಾಗೂ 5.04 ಕೋಟಿ ಅನುದಾನ ಬಿಡುಗಡೆಯಾಗಿರುತ್ತದೆ.

ವರ್ಷಾಂತ್ಯದವರೆಗೆ ಕಾಮಗಾರಿ ಮತ್ತು ಕಾಮಗಾರಿ ಕೆಲಸಗಳಿಗಾಗಿ ತಗುಲಿದ ವೆಚ್ಚದ ವಿವರವನ್ನು **ತಃಖ್ತೆ–34**ರಲ್ಲಿ ತೋರಿಸಲಾಗಿದೆ.

**ತಃಖ್ತೆ–34**

| ಕ್ರ. ಸಂ. | ಕಾಮಗಾರಿಗಳ ವಿವರ | ಕಾಮಗಾರಿಗಳ ಸಂಖ್ಯೆ | | ಅಂದಾಜು ಮೊತ್ತ | | ವಾಸ್ತವಿಕ ವೆಚ್ಚ | |
|---|---|---|---|---|---|---|---|
| | | 2019–20 | 2020–21 | 2019–20 | 2020–21 | 2019–20 | 2020–21 |
| 1 | ಬಸ್ ನಿಲ್ದಾಣ | 18 | 10 | 7135.00 | 6400.00 | 1122.00 | 500.00 |
| 2 | ಘಟಕ | 5 | 3 | 2200.00 | 1800.00 | 461.00 | 0.00 |
| 3 | ಬಸ್ ನಿಲ್ದಾಣ ಮತ್ತು ಬಸ್ ಘಟಕಗಳ ಅಭಿವೃದ್ಧಿ ಹಾಗೂ ಇತರ ಕಾಮಗಾರಿಗಳು | 56 | 15 | 7184.00 | 2960.00 | 3887.00 | 0.00 |
| 4 | ಡಲ್ಟ್ (DULT) ಅನುದಾನದಡಿ ಯೋಜನೆಯಡಿಯ ಕಾಮಗಾರಿಗಳು | 1 | 7 | 400.00 | 4500.00 | 100.00 | 504.00 |
| **ಒಟ್ಟು** | | **80** | **35** | **16919.00** | **15660.00** | **5570.00** | **1004.00** |

*****

ಪರಿಚ್ಛೇದ 9

# ಕಾರ್ಮಿಕ ಕಲ್ಯಾಣ

**9.0 ಕಾರ್ಮಿಕ ಕಲ್ಯಾಣ ಇಲಾಖೆ :**

ಸಂಸ್ಥೆಯ ಕಾರ್ಮಿಕ ಕಲ್ಯಾಣ ಇಲಾಖೆಯು ನೌಕರರ ದೈನಿಕ ಕುಂದು ಕೊರತೆಗಳನ್ನು ನಿವಾರಿಸುವುದಲ್ಲದೆ, ವಿವಿಧ ಕಾರ್ಮಿಕ ಕಲ್ಯಾಣ ಕಾರ್ಯಕ್ರಮಗಳನ್ನು ನೋಡಿಕೊಳ್ಳುತ್ತಿದೆ. ಅಲ್ಲದೆ, ಕಾರ್ಮಿಕ ಸಂಘಟನೆಗಳೊಂದಿಗೆ ಸಮನ್ವಯತೆಯನ್ನು ತಂದು ಆಡಳಿತ ವರ್ಗ ಮತ್ತು ಕಾರ್ಮಿಕರ ನಡುವೆ ಉತ್ತಮ ಔದ್ಯಮಿಕ ಸಂಬಂಧ ಕಾಪಾಡಿಕೊಂಡು ಬರುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ.

**9.1 ಸಾರ್ವಜನಿಕ ಅವಶ್ಯಕ ಸೇವೆ :**

ಕರ್ನಾಟಕ ಸರ್ಕಾರ ಔದ್ಯಮಿಕ ವಿವಾದ ಅಧಿನಿಯಮ 1947ರ ಅಡಿಯಲ್ಲಿ ಸಾರಿಗೆ ಸಂಸ್ಥೆಯನ್ನು ಒಂದು ಸಾರ್ವಜನಿಕ ಅವಶ್ಯಕ ಸೇವೆಯೆಂದು ಪರಿಗಣಿಸಿ, ಕಾಲದಿಂದ ಕಾಲಕ್ಕೆ ಅಧಿಸೂಚನೆಯನ್ನು ಹೊರಡಿಸುತ್ತಿದೆ.

**9.2 ಆಡಳಿತದಲ್ಲಿ ಕಾರ್ಮಿಕರ ಪಾತ್ರ :**

ಸರ್ಕಾರದ ನೀತಿಯನುಸಾರ, ಆಡಳಿತದಲ್ಲಿ ಕಾರ್ಮಿಕರ ಪಾಲ್ಗೊಳ್ಳುವಿಕೆಯನ್ನು ಎಲ್ಲಾ ಹಂತಗಳಲ್ಲಿ ಜಾರಿಗೆ ತರಲಾಗಿದೆ. ಘಟಕಗಳಲ್ಲಿ, ವಿಭಾಗೀಯ ಮಟ್ಟದಲ್ಲಿ ಮತ್ತು ವಿಭಾಗೀಯ ಕಾರ್ಯಾಗಾರಗಳಲ್ಲಿ ಉತ್ಪಾದನೆ ಹಾಗೂ ಕುಂದುಕೊರತೆ ನಿವಾರಣಾ ಸಮಿತಿಗಳನ್ನು ರಚಿಸಲಾಗಿದೆ. ಈ ಸಮಿತಿಗಳು ಘಟಕ ಮಟ್ಟದಲ್ಲಿ ಮತ್ತು ವಿಭಾಗೀಯ ಮಟ್ಟದಲ್ಲಿ ಪ್ರತಿ ತಿಂಗಳು ಸಭೆ ನಡೆಸಿ ಕಾರ್ಮಿಕ ಸಮಸ್ಯೆಗಳನ್ನು ಚರ್ಚಿಸಿ ಅವುಗಳನ್ನು ಬಗೆಹರಿಸುತ್ತಿವೆ. ಅಲ್ಲದೆ, ವಿಭಾಗ ಮಟ್ಟದಲ್ಲಿ ಕಾರ್ಮಿಕ ಸಂಘಟನೆಗಳೊಂದಿಗೆ ಜರುಗಿಸಲಾಗುತ್ತಿದೆ. (ಇದಲ್ಲದೆ ದ್ವಿಪಕ್ಷೀಯ ವಿದ್ಯಾಭ್ಯಾಸ ಧನ ಸಹಾಯ ನಿಧಿಯನ್ನು ಸ್ಥಾಪಿಸಲಾಗಿದ್ದು, ನೌಕರರ ಮಕ್ಕಳ ಉನ್ನತ ವಿದ್ಯಾಭ್ಯಾಸಕ್ಕಾಗಿ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ)

**9.3 ಔದ್ಯಮಿಕ ವಿವಾದಗಳು :**

ಸಂಸ್ಥೆಯಲ್ಲಿ ಹಳೇಯ 2366 ಔಧ್ಯಮಿಕ ವಿವಾದಗಳು ಇತ್ಯರ್ಥವಾಗದೇ ಉಳಿದಿದ್ದು, ವರದಿ ವರ್ಷದಲ್ಲಿ ನೌಕರರಿಂದ ಒಟ್ಟು 101 ವಿವಾದಗಳು ದಾಖಲಾಗಿರುತ್ತವೆ. ಅವುಗಳಲ್ಲಿ 165 ವಿವಾದಗಳು ಇತ್ಯರ್ಥಗೊಂಡಿರುತ್ತವೆ. ಪ್ರಸ್ತುತ 2302 ಔಧ್ಯಮಿಕ ವಿವಾದಗಳು ಬಾಕಿ ಉಳಿದಿರುತ್ತವೆ.

**9.4 ವೇತನಸಹಿತ ರಜೆಗಳು :**

ಕಾರ್ಖಾನೆ ಅಧಿನಿಯಮ ಮತ್ತು ಮೋಟಾರ್ ವಾಹನ ಅಧಿನಿಯಮ ಇವುಗಳ ವ್ಯಾಪ್ತಿಗೊಳಪಡುವ ಕಾರ್ಮಿಕರು ಕ್ಯಾಲೆಂಡರ್ ವರ್ಷದಲ್ಲಿ 10 ದಿನಗಳ ವೇತನ ಸಹಿತ ರಜೆಗೆ ಅರ್ಹರಿದ್ದು, ಅದರಂತೆ ಮಂಜೂರು ಮಾಡಲಾಗಿರುತ್ತದೆ.

**9.5 ಉಪದಾನ :**

ಸಂಸ್ಥೆಯ, ನೌಕರರಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಉಪದಾನ ನಿಯಮಗಳು ಅಥವಾ ಉಪದಾನ ಪಾವತಿ ಅಧಿನಿಯಮ 1972 ಇವುಗಳಲ್ಲಿ ಯಾವುದು ಲಾಭದಾಯಕವೋ ಅದರಂತೆ ಉಪದಾನವನ್ನು ನೀಡಲಾಗುತ್ತಿದೆ. ಸದರಿ ನಿಯಮಾವಳಿಗಳಂತೆ ನೌಕರನಿಗೆ ಉಪದಾನ ಮೊತ್ತವನ್ನು ಪೂರ್ಣಗೊಂಡ ಪ್ರತಿ ಒಂದು ವರ್ಷದ ಸೇವೆಗೆ ಒಂದು ತಿಂಗಳ ಮೂಲ ವೇತನದಂತೆ ನೀಡಲಾಗುತ್ತಿದೆ. ಸದರಿ ಅಧಿನಿಯಮದಂತೆ ನೌಕರನಿಗೆ ಉಪದಾನ ಮೊತ್ತವನ್ನು ಪೂರ್ಣಗೊಂಡ ಪ್ರತಿ ಒಂದು ವರ್ಷದ ಸೇವೆಗೆ ಅರ್ಧ ತಿಂಗಳ ಮೂಲವೇತನದಂತೆ(ತುಟ್ಟಿ ಭತ್ಯೆ ಸೇರಿ) ನೀಡಲಾಗುತ್ತಿದೆ. ವರದಿ ವರ್ಷದಲ್ಲಿ ನಿವೃತ್ತಗೊಂಡ/ರಾಜಿನಾಮೆ ನೀಡಿದ, ಮೃತಪಟ್ಟ/ವಜಾಗೊಂಡ/ ಸ್ವಯಂನಿವೃತ್ತಿಗೊಂಡ ನೌಕರರಿಗೆ ಒಟ್ಟು ರೂ. 54,76,00,000ರಷ್ಟು ಉಪದಾನದ ಮೊತ್ತವನ್ನು ಪಾವತಿಸಲಾಗಿರುತ್ತದೆ.

**9.6 ಕಾರ್ಮಿಕರ ಭವಿಷ್ಯ ನಿಧಿ ಯೋಜನೆ :**

ಸಂಸ್ಥೆಯು ಕಾರ್ಮಿಕರ ಭವಿಷ್ಯ ನಿಧಿ ಕಾಯ್ದೆ, 1952 ಇಂದ ವಿನಾಯಿತಿ ಪಡೆದ ಸಂಸ್ಥೆಯಾಗಿದ್ದು, ತನ್ನ ಆಡಳಿತ ವರ್ಗ ಮತ್ತು ನೌಕರರ ಪ್ರತಿನಿಧಿಗಳನ್ನೊಳಗೊಂಡ ಭವಿಷ್ಯ ನಿಧಿ ಟ್ರಸ್ಟನ್ನು ಪ್ರತ್ಯೇಕವಾಗಿ ರಚಿಸಿ ಅದರ ಉಸ್ತುವಾರಿಯನ್ನು ನಿರ್ವಹಿಸುತ್ತಿದೆ. ವರದಿ ವರ್ಷದಲ್ಲಿ ನೌಕರರಿಗೆ ರೂ. 42,69,00,000 ಮೊತ್ತದ ಭವಿಷ್ಯ ನಿಧಿ ಮುಂಗಡ ಹಣವನ್ನು ನೀಡಲಾಗಿದೆ.

**9.7 ವೈದ್ಯಕೀಯ ಸಹಾಯ :**

ನೌಕರರ ಮೆಡಿಕಲ್ ಅಟೆಂಡೆನ್ಸ್ ನಿಯಮಾವಳಿಗಳು 1970ರ ಪ್ರಕಾರ ನೌಕರರು ವೈದ್ಯಕೀಯ ಮರುಪಾವತಿಗೆ ಅರ್ಹರಿದ್ದು, ದಿನಾಂಕ:24-09-2016 ರಿಂದ ಜಾರಿಗೆ ಬರುವಂತೆ ಸಿ.ಜಿ.ಎಚ್.ಎಸ್.-2014 (Non NABH) ದರಗಳನ್ನು ಅಳವಡಿಸಿಕೊಳ್ಳಲಾಗಿದೆ.

ನಿಗಮವು ತನ್ನ ನೌಕರರು ಮತ್ತು ಅವರ ಅವಲಂಬಿತರರಿಗೆ ಉತ್ತಮ ರೀತಿಯ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವ ದೃಷ್ಟಿಯಿಂದ ಈವರೆಗೆ ಕ.ರಾ.ರ.ಸಾ.ನಿಗಮದ 156, ವಾಕ.ರ.ಸಾ.ಸಂಸ್ಥೆಯ 77 ಅಳವಡಿಸಿಕೊಂಡು ಈ.ಕ.ರ.ಸಾ.ಸಂಸ್ಥೆಯಲ್ಲಿ 49 (15 ಅಂತರ ರಾಜ್ಯದ ಆಸ್ಪತ್ರೆಗಳು ಒಳಗೊಂಡಂತೆ) ಹೀಗೆ ಒಟ್ಟು 282 ಸುಸಜ್ಜಿತ ಖಾಸಗಿ ಆಸ್ಪತ್ರೆಗಳು ಮತ್ತು 7 ರೋಗ ಪತ್ತೆ ಹಚ್ಚುವ ಕೇಂದ್ರಗಳಿಗೆ ಮಾನ್ಯತೆ ನೀಡಲಾಗಿದೆ. ನೌಕರರು ಮತ್ತು ಅವರ ಅವಲಂಬಿತ ಸದಸ್ಯರು ಸಹ ವೈದ್ಯಕೀಯ ವೆಚ್ಚದ ಮರುಪಾವತಿಗೆ ಅರ್ಹರಾಗಿರುತ್ತಾರೆ. ವರದಿ ವರ್ಷದಲ್ಲಿ ವೈದ್ಯಕೀಯ ವೆಚ್ಚ ಮರುಪಾವತಿಗಾಗಿ ನೌಕರರಿಗೆ ರೂ. 5,57,00,000/- ಪಾವತಿಸಲಾಗಿದೆ.

**9.8 ನೌಕರರ ಪರಿಹಾರ ಕಾಯ್ದೆ-1923ರ ಅಡಿಯಲ್ಲಿ ಪರಿಹಾರ :**

ವರದಿ ವರ್ಷದಲ್ಲಿ ನೌಕರರುಗಳಿಗೆ ಕಾರ್ಮಿಕರ ಪರಿಹಾರ ಕಾಯ್ದೆಯ ಅಧಿನಿಯಮದ ಅಡಿಯಲ್ಲಿ ಪರಿಹಾರ ಮೊತ್ತ ನೀಡುವ ಸೌಲಭ್ಯವಿರುತ್ತದೆ.

**9.9 ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು :**

ಪ್ರಸ್ತುತ ವರ್ಷ ಕೋವಿಡ್-19ರ ನಿಮಿತ್ಯ ರಾಜ್ಯದಲ್ಲಿ ಲಾಕ್‌ಡೌನ್ ಇರುವುದರಿಂದ, ನಿಗಮದಲ್ಲಿ ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಜರುಗಿಸಿರುವುದಿಲ್ಲ.

**9.10 ಮರಣ-ವ-ನಿವೃತ್ತಿ ಸಹಾಯ ನಿಧಿ :**

ಸಂಸ್ಥೆಯ ಎಲ್ಲಾ ನೌಕರರು ಈ ನಿಧಿಯ ಸದಸ್ಯರಾಗಿರುತ್ತಾರೆ. ಪ್ರತಿ ಮಾಹೆ ಪ್ರತಿ ಸದಸ್ಯನಿಂದ ರೂ.100 ವಂತಿಕೆ ಕಡಿತಗೊಳಿಸಲಾಗುತ್ತಿದೆ. ಅದರಲ್ಲಿ ರೂ. 35/- ಅನ್ನು ಮರಣ ನಿಧಿಗೆ ಮತ್ತು ಉಳಿದ ರೂ. 65/- ಅನ್ನು ಕಾರ್ಮಿಕರ ಖಾತೆಗೆ ಜಮಾ ಮಾಡಲಾಗುತ್ತಿದೆ. ಸದಸ್ಯ ನೌಕರನು ಸೇವೆಯಲ್ಲಿರುವಾಗ ನಿಧನರಾದಲ್ಲಿ, ಸಂಸ್ಥೆಯು ಶವ ಸಂಸ್ಕಾರಕ್ಕಾಗಿ ಕೂಡಲೇ ರೂ. 5,000 ಮತ್ತು ಉಳಿಕೆ ಅಂತಿಮ ಅಭ್ಯರ್ಥನವನ್ನು ರೂ. 1,25,000 ನೀಡಲಾಗುತ್ತಿದೆ. ಸೇವೆಯಿಂದ ನಿವೃತ್ತಿ ಹೊಂದಿದ/ರಾಜಿನಾಮೆ ನೀಡಿದ ನೌಕರರು ಅವರ ವಂತಿಕೆ ಹಣವನ್ನು ಶೇ.8ರ ಬಡ್ಡಿಯೊಂದಿಗೆ ಪಡೆಯಲು ನಿಧಿಯ ನಿಯಮಾನುಸಾರ ಅರ್ಹರಾಗಿರುತ್ತಾರೆ.

**9.11 ಕಾರ್ಮಿಕ ಬಾಂಧವ್ಯ :**

ಸಂಸ್ಥೆಯ ವಿಭಾಗ ಮತ್ತು ಘಟಕ ಮಟ್ಟದಲ್ಲಿ ಉತ್ಪಾದನೆ ಮತ್ತು ಕುಂದುಕೊರತೆಗಳ ನಿವಾರಣೆ ಸಭೆಯನ್ನು ಕಾಲಕಾಲಕ್ಕೆ/ ಅವಶ್ಯಕತೆ ಅನುಗುಣವಾಗಿ ನಡೆಸುತ್ತಿದ್ದು, ನೌಕರರ ಪ್ರತಿನಿಧಿಗಳು ನೀಡುವ ಸಲಹೆಗಳನ್ನು ಪರಿಶೀಲಿಸಿ ಗಣನೆಗೆ ತೆಗೆದುಕೊಳ್ಳಲಾಗುತ್ತಿದೆ. ಜೊತೆಗೆ ವಿಭಾಗದ ಅಧಿಕಾರಿಗಳ ತಂಡ ಘಟಕಗಳಿಗೆ ಭೇಟಿ ನೀಡಿ ನೌಕರರ ಕುಂದುಕೊರತೆಗಳನ್ನು ಆಲಿಸಿ ಬಗೆಹರಿಸುವ ಪದ್ದತಿ ಸಹ ಜಾರಿಯಲ್ಲಿದೆ.

**9.12 ಶಿಕ್ಷಣ ಸಹಾಯ ನಿಧಿ :**

ಕಲಬುರಗಿಯಲ್ಲಿ ನೌಕರರ ಮಕ್ಕಳ ಅನುಕೂಲಕ್ಕಾಗಿ ಕಾರ್ಯನಿರ್ವಹಿಸುತ್ತಿದ್ದ, ಕೈಗಾರಿಕಾ ತರಬೇತಿ ಕೇಂದ್ರ ವನ್ನು ಪೂರ್ಣ ಪ್ರಮಾಣದ ಬಳಕೆಯಾಗುತ್ತಿಲ್ಲವೆಂಬ ಕಾರಣಕ್ಕೆ ಸ್ಥಗಿತಗೊಳಿಸಲಾಯಿತು. (ನಿರ್ದೇಶಕರ ಠರಾವು ಸಂಖ್ಯೆ 877/52ನೇ ಮಂಡಳಿ ಸಭೆ ದಿನಾಂಕ 16.05.2016) ಅನ್ನು ಹೊರಡಿಸಿದೆ.

ಶೈಕ್ಷಣಿಕ ಸಹಾಯಕ ನಿಧಿಯಡಿಯಲ್ಲಿ ಈ ಕೆಳಕಂಡ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಸಹಾಯವಾಗಿ ಈ ಕೆಳಗೆ ನಮೂದಿಸಲಾದ ಮೊತ್ತವನ್ನು ನೀಡಲಾಗುತ್ತಿದೆ.

| | | | |
|---|---|---|---|
| 1. | ಐ.ಟಿ.ಐ. | : | ವರ್ಷಕ್ಕೆ ರೂ. 2000 |
| 2. | ಡಿಪ್ಲೊಮಾ | : | ವರ್ಷಕ್ಕೆ ರೂ. 2500 |
| 3. | ಪದವಿ/ಬಿ.ಇ. | : | ವರ್ಷಕ್ಕೆ ರೂ. 4000 |
| 4. | ಎಂಬಿಬಿಎಸ್/ಬಿಎಚ್‌ಎಂಎಸ್/ಬಿಎಎಂಎಸ್ | : | ವರ್ಷಕ್ಕೆ ರೂ. 5000 |
| 5. | ಸ್ನಾತಕೊತ್ತರ ಪದವಿ | : | ವರ್ಷಕ್ಕೆ ರೂ. 4000 |
| | | : | ವರ್ಷಕ್ಕೆ ರೂ. 5400 |

ವರದಿ ವರ್ಷದಲ್ಲಿ 416 ನೌಕರರ ಮಕ್ಕಳಿಗೆ ಈ ನಿಧಿಯಿಂದ ರೂ. 15,80,500 ಶಿಷ್ಯ ವೇತನ ನೀಡಲಾಗಿದೆ.

**9.13 ಶೈಕ್ಷಣಿಕ ಸಾಲ :**

ಶೈಕ್ಷಣಿಕ ಸಾಲದ ಯೋಜನೆಯಡಿಯಲ್ಲಿ ಬಿ.ಇ., ಎಂ.ಬಿ.ಬಿ.ಎಸ್., ಬಿ.ಎ.ಎಂ.ಎಸ್. ಇತ್ಯಾದಿ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಪಡೆದ ಅಧಿಕಾರಿ/ನೌಕರರ ಮಕ್ಕಳಿಗೆ ವ್ಯಾಸಂಗದ ಬೋಧನಾ ಶುಲ್ಕದ ಪಾವತಿಗಾಗಿ ರೂ.2.00 ಲಕ್ಷದವರೆಗೆ ಶೈಕ್ಷಣಿಕ ಸಾಲ ಮಂಜೂರು ಮಾಡಲಾಗುತ್ತಿದೆ.

**9.14 ನಿವೃತ್ತ ಸಿಬ್ಬಂದಿಯನ್ನು ಗೌರವಿಸುವುದು :**

ಸಂಸ್ಥೆಯ ಸೇವೆಯಿಂದ ನಿವೃತ್ತರಾಗುವ ಸಿಬ್ಬಂದಿಗಳಿಗೆ ನಿವೃತ್ತಿ ಸಮಾರಂಭವನ್ನು ಏರ್ಪಡಿಸಿ, ಸಿಬ್ಬಂದಿಗಳಿಗೆ ಗೌರವಿಸಲು ಈ ಕೆಳಗಿನಂತೆ ಖರ್ಚು ಮಾಡಲಾಗುತ್ತಿದೆ.

| ವರ್ಗ | ಮೊತ್ತ |
|---|---|
| ದರ್ಜೆ-3 & ದರ್ಜೆ-4 ಸಿಬ್ಬಂದಿಗಳು | ರೂ.2,000/- ಪ್ರತಿ ಸಿಬ್ಬಂದಿಗೆ |
| ದರ್ಜೆ-2 & ದರ್ಜೆ-1 ಕಿರಿಯ ಅಧಿಕಾರಿಗಳು | ರೂ.4,000/- ಪ್ರತಿ ಅಧಿಕಾರಿಗೆ |
| ದರ್ಜೆ-1 ಹಿರಿಯ/ ಇಲಾಖಾ ಮುಖ್ಯಸ್ಥರು | ರೂ.5,000/- ಪ್ರತಿ ಅಧಿಕಾರಿಗೆ |

**9.15 ಪ್ರಶಸ್ತಿ ಯೋಜನೆ :**

ಪ್ರಸ್ತುತ ವರ್ಷ ಕೋವಿಡ್-19ರ ನಿಮಿತ್ಯ ರಾಜ್ಯದಲ್ಲಿ ಲಾಕ್‌ಡೌನ್ ಇರುವುದರಿಂದ, 2020-21ನೇ ಸಾಲಿನಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ನೌಕರರನ್ನು ನಿಯತಕಾಲಿಕವಾಗಿ ಗುರುತಿಸಿ ಅವರಿಗೆ ಪ್ರಶಸ್ತಿ ಪತ್ರ ಹಾಗೂ ನಗದು ಬಹುಮಾನ ನೀಡಲಾಗಿರುವುದಿಲ್ಲ.

**9.16 ಮನೆ ಕಟ್ಟಲು/ಕೊಳ್ಳಲು ಸಾಲದ ಸೌಲಭ್ಯ :**

ನೌಕರರು ಮನೆ ಕಟ್ಟಲು/ ಖರೀದಿಸಲು ಪಡೆದ ಸಾಲದ 5 ಲಕ್ಷದ ವರೆಗಿನ ಮೊತ್ತಕ್ಕೆ ಶೇ 4 ರ ಬಡ್ಡಿ ದರದಲ್ಲಿ ಸಬ್ಸಿಡಿ ಮೊತ್ತ 1 ಲಕ್ಷಕ್ಕೆ ಸೀಮಿತಗೊಳಿಸಿ ನೀಡಲಾಗುತ್ತಿತ್ತು. ಈ ಸೌಲಭ್ಯ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಪಡೆದ ಸಾಲಗಳಿಗೂ ಅನ್ವಯಿಸುತ್ತದೆ. ಪ್ರಸ್ತುತ ವರ್ಷ ಕೋವಿಡ್-19 ನಿಮಿತ್ಯ ರಾಜ್ಯದಲ್ಲಿ ಲಾಕ್‌ಡೌನ್ ಇರುವುದರಿಂದ, ನಿಗಮವು ಆರ್ಥಿಕ ಸಂಕಷ್ಟದಲ್ಲಿರುವುದರಿಂದ ಸಿಬ್ಬಂದಿ/ಅಧಿಕಾರಿಗಳ ಮನೆ ಕಟ್ಟಲು/ಖರೀದಿಸಿದ ಸಾಲದ ಮೇಲೆ ಸಬ್ಸಿಡಿ ಮೊತ್ತ ನೀಡಲಾಗಿರುವುದಿಲ್ಲ.

**9.17 ಆಂತರಿಕ ಗುಂಪು ವಿಮಾ ಯೋಜನೆ :**

ಠರಾವು ಸಂಖ್ಯೆ. 664, 39ನೇ ಮಂಡಳಿ ಸಭೆ ದಿನಾಂಕ: 12-10-2011 ರನ್ವಯ ಈ ಯೋಜನೆಯನ್ನು ಮಂಡಳಿಯ ಅನುಮೋದನೆ ಪಡೆದು, ಸಂಸ್ಥೆಯ ಸೇವಾವಧಿಯಲ್ಲಿ ಮೃತಪಟ್ಟ ನೌಕರರ ಅವಲಂಬಿತರಿಗೆ ಆರ್ಥಿಕ ಸೌಲತ್ತನ್ನು ನೀಡುವ ದೃಷ್ಟಿಯಿಂದ ನಿಗಮದಲ್ಲಿ "ಆಂತರಿಕ ಗುಂಪು ವಿಮಾ ಯೋಜನೆ" ಯನ್ನು ದಿನಾಂಕ: 01-09-2011ರಿಂದ ಜಾರಿಗೆ ತರಲಾಗಿದೆ. ಈ ಯೋಜನೆ ಅಡಿಯಲ್ಲಿ ಪ್ರತಿ ನೌಕರನಿಂದ ಪ್ರತಿ ತಿಂಗಳು ಸಂಗ್ರಹಿಸಿದ ರೂ. 100 ಮತ್ತು ಸಂಸ್ಥೆಯ ವತಿಯಿಂದ ಪ್ರತಿ ತಿಂಗಳು ಪ್ರತಿ ನೌಕರನಿಗೆ ನೀಡಲಾದ ಕೊಡುಗೆ ರೂ. 50 ಸಹಾಯದಿಂದ ಸ್ವಯಂಆಧಾರಿತ ನಿಧಿಯನ್ನು ಸ್ಥಾಪಿಸಿ ನಿರ್ವಹಿಸಲಾಗುತ್ತಿದೆ. ಒಂದು ವೇಳೆ ನೌಕರನು ಸೇವಾವಧಿಯಲ್ಲಿ ಮೃತಪಟ್ಟಲ್ಲಿ, ಅವನ ಅವಲಂಬಿತರಿಗೆ ರೂ.3.00 ಲಕ್ಷ ಹಣವನ್ನು ಪಾವತಿಸಲಾಗುತ್ತಿದೆ. ವರದಿ ವರ್ಷದಲ್ಲಿ ಸದರಿ ಯೋಜನೆಯಲ್ಲಿ 122 ಮೃತರ ಅವಲಂಬಿತರಿಗೆ ರೂ. 3,66,00,000/- ಗಳನ್ನು ಪರಿಹಾರ ಮೊತ್ತವಾಗಿ ನೀಡಲಾಗಿರುತ್ತದೆ.

*****

ಪರಿಚ್ಛೇದ 10

# ಭದ್ರತಾ ಮತ್ತು ಜಾಗೃತಾ ವ್ಯವಸ್ಥೆ

## 10.1 ಚಟುವಟಿಕೆಗಳು :

ಸಂಸ್ಥೆಯ ಆಸ್ತಿಯನ್ನು ಕಳ್ಳತನ, ಬೆಂಕಿ, ಹಣ ಸೋರಿಕೆ, ದುರುಪಯೋಗ ಮುಂತಾದವುಗಳಿಂದ ಸಂಸ್ಥೆಯ ಸಿಬ್ಬಂದಿಯಿಂದಾಗಲಿ ಅಥವಾ ಹೊರಗಿನವರಾಗಲಿ ಹಾನಿಗೊಳಿಸದಂತೆ ತಡೆಯಲು ಭೌತಿಕ ಭದ್ರತೆಯನ್ನು ಭದ್ರತಾ ಮತ್ತು ಜಾಗೃತಾ ಇಲಾಖೆ ಒದಗಿಸುತ್ತಿದೆ.

ವಿಭಾಗಗಳಲ್ಲಿನ ಭದ್ರತಾ ಮತ್ತು ಜಾಗೃತಾ ಸಿಬ್ಬಂದಿ ಸಂಸ್ಥೆಯ ಆಸ್ತಿಪಾಸ್ತಿಯ ಕಳ್ಳತನ, ಹಣ ಸೋರಿಕೆ ಮತ್ತು ದುರುಪಯೋಗ ಪ್ರಕರಣಗಳ ಬಗ್ಗೆ ವರದಿ ಮಾಡಿರುತ್ತಾರೆ. ವರದಿ ವರ್ಷದ ಮಾಹಿತಿಯನ್ನು ಕಳೆದ ವರ್ಷದ ಮಾಹಿತಿಯೊಂದಿಗೆ ಹೋಲಿಸಿ **ತಃಖ್ತೆ-35**ರಲ್ಲಿ ತೋರಿಸಲಾಗಿದೆ.

**ತಃಖ್ತೆ-35**

| ಕ್ರಮ ಸಂಖ್ಯೆ | ಪ್ರಕರಣದ ಸ್ವರೂಪ | ಪ್ರಕರಣಗಳ ಸಂಖ್ಯೆ | |
|---|---|---|---|
| | | **2019-20** | **2020-21** |
| 1 | ಸಂಸ್ಥೆಯ ಸ್ವತ್ತು ಕಳ್ಳತನ | 4 | 2 |
| 2 | ಕಳವಾದ ಸ್ವತ್ತಿನ ಮೌಲ್ಯ (ರೂ.) | 533698 | 129813 |
| 3 | ಕಳ್ಳತನದಲ್ಲಿ ಭಾಗಿಯಾದ ನೌಕರರು | 1 | 0 |
| 4 | ಕಳ್ಳತನದಲ್ಲಿ ಭಾಗಿಯಾದ ಹೊರ ವ್ಯಕ್ತಿಗಳು | 0 | 0 |

ವರದಿ ವರ್ಷದಲ್ಲಿ ಪತ್ತೆ ಹಚ್ಚಿದ ಇತರ ಪ್ರಕರಣಗಳ ವಿವರವನ್ನು ತಃಖ್ತೆ-36ರಲ್ಲಿ ನೀಡಲಾಗಿದೆ.

**ತಃಖ್ತೆ-36**

| ಕ್ರಮ ಸಂಖ್ಯೆ | ಪ್ರಕರಣದ ಸ್ವರೂಪ | ಪ್ರಕರಣಗಳ ಸಂಖ್ಯೆ | |
|---|---|---|---|
| | | **2019-20** | **2020-21** |
| 1 | ಹಲ್ಲೆ | 11 | 8 |
| 2 | ಅಸಭ್ಯ ವರ್ತನೆ | 10 | 3 |
| 3 | ಇತರ ಪ್ರಕರಣಗಳು | 9 | 11 |
| **ಒಟ್ಟು** | | **30** | **22** |

ಪತ್ತೆ ಹಚ್ಚಿದ ಪ್ರಕರಣಗಳಲ್ಲಿ ಶಿಸ್ತುಪಾಲನಾಧಿಕಾರಿಗಳು ತಪ್ಪಿತಸ್ಥ ನೌಕರರ ವಿರುದ್ಧ ಸಮಂಜಸ ಶಿಸ್ತಿನ ಕ್ರಮ ಕೈಗೊಂಡಿದ್ದಾರೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಪ್ರಕರಣದ ವಿಲೇವಾರಿಯ ಪ್ರಗತಿಯನ್ನು ಇಲಾಖೆಯು ಸತತವಾಗಿ ಗಮನಿಸುತ್ತದೆ.

## 10.2 ಹಣ ದುರುಪಯೋಗ :

ಇಲಾಖೆಯು ಕಂಡು ಹಿಡಿದ ನೌಕರರಿಂದ ಹಣ ದುರುಪಯೋಗ ಪ್ರಕರಣಗಳ ವಿವರವನ್ನು **ತಃಖ್ತೆ-37**ರಲ್ಲಿ ನೀಡಲಾಗಿದೆ.

ತಃಖ್ತೆ-37

| ವರ್ಷ | ಸಿಬ್ಬಂದಿ ವರ್ಗ | ಒಟ್ಟು ಪ್ರಕರಣಗಳು | ದುರುಪಯೋಗವಾದ ಹಣ (ರೂ.ಗಳಲ್ಲಿ) |
|---|---|---|---|
| 2019-20 | ನಿರ್ವಾಹಕರು<br>ಇತರೆ | 2<br>5 | 416<br>59,90,806 |
| 2020-21 | ನಿರ್ವಾಹಕರು<br>ಇತರೆ | 1<br>2 | 705<br>2812 |

**10.3 ಸಂಸ್ಥೆಯ ಸ್ವತ್ತಿನ ಹಾನಿ/ನಷ್ಟ :**

ವರದಿ ವರ್ಷದಲ್ಲಿ ಸಂಸ್ಥೆಯ ಸ್ವತ್ತಿಗೆ ಹಾನಿಯಾದಂತಹ ಸಾರ್ವಜನಿಕ ಬಂದ್/ಮುಷ್ಕರದಿಂದ ಒಟ್ಟು 48.77ಲಕ್ಷ ಕಿ.ಮೀ.ಗಳು ರದ್ಧಾಗಿದ್ದರಿಂದ ರೂ. 1357.97ಲಕ್ಷ ಸಾರಿಗೆ ಆದಾಯ ನಷ್ಟವಾಗಿರುತ್ತದೆ.

ಅದರಂತೆ ವರದಿ ವರ್ಷದಲ್ಲಿ ಸಂಸ್ಥೆಯ ವಾಹನಗಳಿಗೆ ಜಖಂ ಆದಂತಹ 120 ಪ್ರಕರಣಗಳು ದಾಖಲಾಗಿದ್ದು ಇದರಿಂದ ಸಂಸ್ಥೆಗೆ ರೂ. 4.80 ಲಕ್ಷ ನಷ್ಟವಾಗಿರುತ್ತದೆ.

**10.4 ಬೆಂಕಿ ಅನಾಹುತ ಮತ್ತು ದರೋಡೆ ಪ್ರಕರಣಗಳು :**

ವರದಿ ವರ್ಷದಲ್ಲಿ 3 ಪ್ರಕರಣಗಳು ದಾಖಾಲಾಗಿದ್ದು, ಸಂಸ್ಥೆಗೆ ರೂ. 0.85 ಲಕ್ಷ ಆರ್ಥಿಕ ನಷ್ಟ ಉಂಟಾಗಿರುತ್ತದೆ. ಕಳೆದ ವರ್ಷದಲ್ಲಿ ಯಾವುದೇ ಬೆಂಕಿ ಅನಾಹುತ ಪ್ರಕರಣಗಳು ಸಂಭವಿಸಿರುವುದಿಲ್ಲ.

**10.5 ಜಾಗೃತಾ ಚಟುವಟಿಕೆಗಳು :**

ಇಲಾಖೆಯು ಸ್ವೀಕರಿಸಿದ ದೂರುಗಳನ್ನು ಗಣನೆಗೆ ತೆಗೆದುಕೊಂಡು ಹಾಗೂ ಅಧಿಕಾರಿಗಳ/ನೌಕರರ ಭ್ರಷ್ಟಾಚಾರ ಸೇರಿದಂತೆ, ಅವರ ಕರ್ತವ್ಯ ನಿರ್ವಹಣೆಯಲ್ಲಿ ಕಂಡು ಬರುವ ತಪ್ಪುಒಪ್ಪುಗಳ ಬಗ್ಗೆ ಸಂಗ್ರಹಿಸಿದ ಮಾಹಿತಿಯನ್ನು ಆಧರಿಸಿ ವಿಚಾರಣೆ ನಡೆಸುತ್ತದೆ.

ವರದಿ ವರ್ಷದಲ್ಲಿ ಒಟ್ಟು 73 ದೂರುಗಳನ್ನು ಸ್ವೀಕರಿಸಲಾಗಿದೆ. ವರ್ಷದ ಪ್ರಾರಂಭದಲ್ಲಿ 45 ದೂರುಗಳು ಬಾಕಿ ಉಳಿದಿದ್ದವು. ಇವುಗಳಲ್ಲಿ 108 ದೂರುಗಳ ಬಗ್ಗೆ ವಿಚಾರಣೆ ನಡೆಸಿ ವರದಿಗಳನ್ನು ವಿವಿಧ ಶಿಸ್ತುಪಾಲನಾಧಿಕಾರಿಗಳಿಗೆ ಮುಂದಿನ ಕ್ರಮ ಜರುಗಿಸಲು ಕಳುಹಿಸಲಾಗಿದೆ. 79 ದೂರುಗಳನ್ನು ಸಂಬಂಧಿಸಿದ ಶಿಸ್ತುಪಾಲನಾಧಿಕಾರಿಗಳು ಆಪಾದಿತರ ವಿರುದ್ಧ ಕ್ರಮ ಜರುಗಿಸಿದ್ದರಿಂದ ಮುಕ್ತಾಯಗೊಳಿಸಲಾಗಿದೆ. ವರದಿ ವರ್ಷದ ಅಂತ್ಯಕ್ಕೆ 39 ದೂರುಗಳು ಶಿಸ್ತು ಕ್ರಮಕ್ಕಾಗಿ ಹಾಗೂ ವಿಚಾರಣೆಗಾಗಿ ಮುಖ್ಯ ಭದ್ರತಾ ಮತ್ತು ಜಾಗೃತಾಧಿಕಾರಿ/ಉಪ ಮುಖ್ಯ ಭದ್ರತಾ ಮತ್ತು ಜಾಗೃತಾಧಿಕಾರಿ/ಭದ್ರತಾ ಮತ್ತು ಜಾಗೃತಾಧಿಕಾರಿಯವರಲ್ಲಿ ಬಾಕಿ ಇರುತ್ತವೆ. ಇದಲ್ಲದೆ, ಸದರಿ ವರ್ಷದಲ್ಲಿ ಭದ್ರತಾ ಸಿಬ್ಬಂದಿಯವರು 03 ದೂರುಗಳನ್ನು ಸ್ವತ: ತಾವೇ ವಿಚಾರಣೆಯನ್ನು ಕೈಗೊಂಡು ತಪ್ಪಿತಸ್ಥ ಅಧಿಕಾರಿಗಳ/ನೌಕರರ ಮೇಲೆ ಸವಿಸ್ತರ ವರದಿಯನ್ನು ಸಲ್ಲಿಸಿದ್ದಾರೆ.

**10.6 ಮಾರ್ಗತನಿಖೆ :**

ಸಂಸ್ಥೆಯ ವಿಭಾಗಗಳ ಭದ್ರತಾ ಮತ್ತು ಜಾಗೃತಾ ಇಲಾಖೆಯ ಸಿಬ್ಬಂದಿ ನಿರ್ವಾಹಕ ಮತ್ತು ಚಾಲಕರ ವಿರುದ್ಧ ಆದಾಯ ಸೋರಿಕೆ ಪ್ರಕರಣಗಳನ್ನು ಪತ್ತೆ ಹಚ್ಚಿ ವರದಿ ಮಾಡಿರುತ್ತಾರೆ. ಅವುಗಳ ವಿವರ **ತಖ್ತೆ-38**ರಲ್ಲಿ ನೀಡಲಾಗಿದೆ.

**ತಃಖ್ತೆ-38**

| ವರ್ಷ | ಮಾನವ ತನಿಖಾ ದಿನಗಳು | ತನಿಖೆ ಮಾಡಿದ ಬಸ್‌ಗಳು | ಪತ್ತೆ ಹಚ್ಚಲಾದ ಪ್ರಕರಣಗಳು | ಸೋರಿಕೆ ಹಣ (ರೂ.ಗಳಲ್ಲಿ) | ವಿಧಿಸಿದ ದಂಡ (ರೂ.ಗಳಲ್ಲಿ) | ದಂಡತೆತ್ತ ಪ್ರಯಾಣಿಕರ ಸಂಖ್ಯೆ |
|---|---|---|---|---|---|---|
| 2019-20 | 862 | 1771 | 12,740 | 34,983 | 2,15,959 | 1243 |
| 2020-21 | 567 | 7960 | 410 | 12,083 | 91,436 | 488 |

## 10.7 ಭದ್ರತಾ ಮತ್ತು ಜಾಗೃತಾ ಸಿಬ್ಬಂದಿಯ ವರದಿಗಳ ಮೇಲೆ ತೆಗೆದುಕೊಂಡ ಕ್ರಮ :

ಭದ್ರತಾ ಮತ್ತು ಜಾಗೃತಾ ಸಿಬ್ಬಂದಿಯಿಂದ ಬಂದ ವರದಿಗಳನ್ನು ತಪ್ಪಿತಸ್ಥರ ವಿರುದ್ಧ ಶಿಸ್ತಿನ ಕ್ರಮ ಜರುಗಿಸುವ ಸಲುವಾಗಿ ಸಂಬಂಧಿಸಿದ ಶಿಸ್ತುಪಾಲನಾಧಿಕಾರಿಗಳಿಗೆ ಕಳುಹಿಸಲಾಗಿದೆ. ಸದರಿ ವರ್ಷದಲ್ಲಿ ವಿವಿಧ ಶಿಸ್ತುಪಾಲನಾಧಿಕಾರಿಗಳಿಂದ ವಿಲೇವಾರಿಯಾದ ಪ್ರಕರಣಗಳ ವಿವರವನ್ನು **ತಃಖ್ತೆ-39**ರಲ್ಲಿ ನೀಡಲಾಗಿದೆ.

**ತಖ್ತೆ-39**

| ವಿಧಿಸಿದ ಶಿಕ್ಷೆ | 2019-20 | 2020-21 |
|---|---|---|
| ಸೇವೆಯಿಂದ ವಜಾ/ತೆಗೆದು ಹಾಕಿದ್ದು | 3 | 2 |
| ವಾರ್ಷಿಕ ವೇತನ ಬಡ್ತಿ ಮುಂದೂಡಿಕೆ | 43 | 36 |
| ವೇತನದಿಂದ ವಸೂಲಾತಿ | 484 | 153 |
| ಜುಲ್ಮಾನೆ/ದಂಡ | 90 | 282 |

## 10.8 ಪ್ರಶಸ್ತಿಗಳು :

ವರದಿ ವರ್ಷದಲ್ಲಿ ಇಲಾಖೆಯ 1 ಸಿಬ್ಬಂದಿಗೆ ಅವರು ತೋರಿದ ಉತ್ತಮ ಕಾರ್ಯನಿರ್ವಹಣೆಯನ್ನು ಗುರುತಿಸಿ, ನಗದು ಬಹುಮಾನವನ್ನು ನೀಡಲಾಗಿದ್ದು, ಅದಕ್ಕಾಗಿ ರೂ. 500 ಮಂಜೂರು ಮಾಡಲಾಗಿದೆ.

*****

ಪರಿಚ್ಛೇದ 11

# ಮಾಹಿತಿ ತಂತ್ರಜ್ಞಾನ

## 11.1 ಪೀಠಿಕೆ :

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು, ಮೂರು ಹಂತದ ವ್ಯವಸ್ಥೆ ಅಂದರೆ ಕೇಂದ್ರ ಕಛೇರಿ, ವಿಭಾಗ ಮತ್ತು ಡಿಪೋ ಆಡಳಿತ ವ್ಯವಸ್ಥೆ ಹೊಂದಿದ್ದು, ತನ್ನ ದಿನನಿತ್ಯದ ಕಾರ್ಯ ಮತ್ತು ನಿರ್ವಹಣೆ ಚಟುವಟಿಕೆಗಳಲ್ಲಿ ಮಾಹಿತಿ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ಸಂಸ್ಥೆಯ ಎಲ್ಲಾ ಘಟಕಗಳು ಅಗತ್ಯವಾದ ಐಟಿ ಅಪ್ಲಿಕೇಶನ್‌ಗಳೊಂದಿಗೆ ಗಣಕೀಕೃತವಾಗಿವೆ.

## 11.2 ಡಿಪೋ ಗಣಕೀಕರಣ ವ್ಯವಸ್ಥೆ :

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಎಲ್ಲಾ 52 ಘಟಕಗಳಲ್ಲಿ ಡಿಪೋ ಗಣಕೀಕರಣ ವ್ಯವಸ್ಥೆಯನ್ನು ಅಳವಡಿಸಲಾಗಿದ್ದು, ಸದರಿ ತಂತ್ರಾಂಶದ ಮೂಲಕ ಘಟಕಗಳ ಚಟುವಟಿಕೆಗಳನ್ನು ಗಣಕೀಕರಿಸಲಾಗುತ್ತದೆ. ಇದಲ್ಲದೇ ಹೆಚ್ಚಿನ ಭದ್ರತಾ ವೈಶಿಷ್ಟೆಗಳನ್ನು ಹೊಂದಿರುವ ಉನ್ನತೀಕರಿಸಿದ ಡಿಸಿಎಸ್ ತಂತ್ರಾಂಶವನ್ನು (ಕ.ರಾ.ರ.ಸಾ.ನಿಗಮದ ವರ್ಷನ್) ಎಲ್ಲಾ ಘಟಕಗಳಲ್ಲಿ ಅಳವಡಿಸಲು ಪ್ರಾರಂಭಿಸಿದೆ. ಡಿಸಿಎಸ್ ತಂತ್ರಾಂಶವು ಸುಗಮವಾಗಿ ಕಾರ್ಯನಿರ್ವಹಿಸಲು ಮಾಹಿತಿ ತಂತ್ರಜ್ಞಾನ ಇಲಾಖೆಯಿಂದ ಘಟಕಗಳಿಗೆ ಅಗತ್ಯವಾದ ತಾಂತ್ರಿಕ ಸಹಕಾರ ನೀಡುತ್ತಿದೆ.

## 11.3 ವಿದ್ಯುನ್ಮಾನ್ ಟಿಕೇಟ್ ಯಂತ್ರ (ಇಟಿಎಂ) :

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು, ಪ್ರಯಾಣಿಕರಿಗೆ ಟಿಕೇಟ್ ನೀಡುವ ಸಲುವಾಗಿ ಎಲ್ಲಾ ಮಾರ್ಗಗಳಲ್ಲಿ ಸುಮಾರು 4360 ವಿದ್ಯುನ್ಮಾನ ಜಿಪಿಆರ್‌ಎಸ್ ಇಟಿಎಂ ಯಂತ್ರಗಳನ್ನು ಕಾರ್ಯಾಚರಣೆಯಲ್ಲಿ ಅಳವಡಿಸಿಕೊಂಡಿದೆ. ಈ ಇಟಿಎಂಗಳನ್ನು ಲೆಕ್ಕ ಪತ್ರ ಮತ್ತು ಇತರೇ ಅಗತ್ಯ ಮಾಹಿತಿಯನ್ನು ಪಡೆಯಲು ಡಿಸಿಎಸ್‌ನೊಂದಿಗೆ ಸಂಯೋಜಿಸಲಾಗಿದೆ. ಹಾಗೂ ಅವುಗಳು ಸುಗಮವಾಗಿ ಕಾರ್ಯನಿರ್ವಹಿಸಲು ಮಾಹಿತಿ ತಂತ್ರಜ್ಞಾನ ಇಲಾಖೆಯಿಂದ ಅಗತ್ಯ ಸಹಕಾರ ನೀಡಲಾಗುತ್ತಿದೆ.

## 11.4 ಆನ್‌ಲೈನ್ ವರ್ಗಾವಣೆ ಅಪ್ಲಿಕೇಶನ್ :

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು, ದರ್ಜೆ–3ರ ಮೇಲ್ವಿಚಾರಕೇತರ ಮತ್ತು ದರ್ಜೆ–4ರ ನೌಕರರಿಗೆ ವರ್ಗಾವಣೆ ಅರ್ಜಿಗಳನ್ನು ಅನ್ ಲೈನ್ ಮೂಲಕ ಅಹ್ವಾನಿಸಲು ತಂತ್ರಾಂಶವನ್ನು ರೂಪಿಸಲಾಗಿದೆ. ಸದರಿ ತಂತ್ರಾಂಶವನ್ನು ಮಾಹಿತಿ ತಂತ್ರಜ್ಞಾನ ಇಲಾಖೆಯಿಂದ ಅಭಿವೃದ್ಧಿ ಪಡಿಸಿದೆ.

## 11.5 ಸರಳ್ ಪೇ ಪ್ಯಾಕೇಜ್ ಮತ್ತು ಪ್ರಾಫಿಟ್ ಪ್ಲಸ್ :

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ, ನೌಕರರ ವೇತನ ಪಟ್ಟಿ ಮತ್ತು ಇತರೆ ವೇತನಕ್ಕೆ ಸಂಬಂಧಿತ ವರದಿಗಳನ್ನು ತಯಾರಿಸಲು ಸರಳ್ ಪೇ ಪ್ಯಾಕೇಜ್ ಅನ್ನು ಬಳಸಲಾಗುತ್ತಿದೆ. ಎಲ್ಲಾ ವಿಭಾಗೀಯ ಕಛೇರಿಗಳು ಮತ್ತು ಕೇಂದ್ರ ಕಛೇರಿಯಲ್ಲಿ ಟ್ರಯಲ್ ಬ್ಯಾಲೆನ್ಸ್, ಲಾಭ ಮತ್ತು ನಷ್ಟ, ಬ್ಯಾಲೆನ್ಸ್ ಶೀಟ್ ಇತ್ಯಾದಿ ಹಾಗೂ ಖಾತೆಗಳಿಗೆ ಸಂಬಂಧಿಸಿದ

ವರದಿಗಳನ್ನು ತಯಾರಿಸಲು ಪ್ರಾಫಿಟ್ ಪ್ಲಸ್ ಅನ್ನು ಬಳಸಲಾಗುತ್ತಿದೆ. ಇವೆರಡೂ ಖಾಸಗಿಯವರ ಮುಖಾಂತರ ನಿರ್ವಹಿಸಲಾಗುತ್ತಿದೆ.

**11.6 ಜಾಲತಾಣ :**

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು, ಸರ್ಕಾರದ ಮಾರ್ಗಸೂಚಿಗಳ ಪ್ರಕಾರ ವೆಬ್ ಪೋರ್ಟಲ್, ಸೆಂಟರ್ ಫಾರ್ ಇ-ಗವರ್ನೆನ್ಸ್ ರವರ ಸಹಯೋಗದೊಂದಿಗೆ ಹೊಸ ಜಾಲತಾಣ https://nekrtc.karnataka.gov.in ವನ್ನು ಅಳವಡಿಸಿಕೊಳ್ಳಲಾಗಿದೆ. ಸಂಸ್ಥೆಯ ಮಾಹಿತಿ ತಂತ್ರಜ್ಞಾನ ಇಲಾಖೆ ವತಿಯಿಂದ ಕಾಲಕಾಲಕ್ಕೆ ಅಗತ್ಯವಿರುವ ಮಾಹಿತಿಯನ್ನು ಇಂದೀಕರಿಸಲಾಗುತ್ತಿದೆ.

**11.7 ಎಸ್.ಟಿ-1 ಮತ್ತು ಎಸ್.ಟಿ-2 ಡ್ಯಾಶ್ ಬೋರ್ಡ್ :**

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ವ್ಯಾಪ್ತಿಯ ಘಟಕ/ವಿಭಾಗಗಳ ದೈನಂದಿನ ಸಾರಿಗೆಗಳ ಕಾರ್ಯಾಚರಣೆಗೆ ಸಂಬಂಧಿಸಿದ ಅಂಕಿಅಂಶಗಳನ್ನು ಕೇಂದ್ರ ಕಛೇರಿ ಮತ್ತು ವಿಭಾಗ/ಘಟಕಗಳನ್ನು ವೀಕ್ಷಿಸಲು ಅನುಕೂಲವಾಗುವಂತೆ ಎಸ್.ಟಿ-1 ಹಾಗೂ ಎಸ್.ಟಿ-2 ಗಣಕೀಕೃತ ಡ್ಯಾಶ್‌ಬೋರ್ಡ್ (www.nekrtc.org) ತಂತ್ರಾಂಶವನ್ನು ಮಾಹಿತಿ ತಂತ್ರಜ್ಞಾನ ಇಲಾಖೆಯ ವತಿಯಿಂದ ಆಂತರಿಕವಾಗಿ ಅಭಿವೃದ್ಧಿಪಡಿಸಲಾಗಿರುತ್ತದೆ.

*****

ಪರಿಚ್ಛೇದ 12

# ಇತರ ವಿಷಯಗಳು

## 12.1 2020-21ರ ವಾರ್ಷಿಕ ಯೋಜನೆ :

2020-21ನೇ ವರ್ಷದಲ್ಲಿ ಸಂಸ್ಥೆಯು, ರೂ. 9.25ಕೋಟಿ ವೆಚ್ಚದ ಕಾರ್ಯಕ್ರಮವನ್ನು ರೂಪಿಸಿಕೊಂಡಿತ್ತು. ವಾಸ್ತವವಾಗಿ ಅಭಿವೃದ್ಧಿ ಕಾರ್ಯಗಳಿಗಾಗಿ ರೂ. 65.90ಕೋಟಿ ವೆಚ್ಚವಾಗಿದೆ.

ವರದಿ ವರ್ಷದ ಪ್ರಸ್ತಾವಿಕ ವೆಚ್ಚ ಕಾರ್ಯಕ್ರಮ ಮತ್ತು ವಾಸ್ತವಿಕ ವೆಚ್ಚ ವಿವರವನ್ನು **ತ:ಖ್ತೆ-40**ರಲ್ಲಿ ಕೊಡಲಾಗಿದೆ.

**ತ:ಖ್ತೆ-40**

| ಕ್ರ. ಸಂ. | ಕಾರ್ಯಕ್ರಮ | 2019-20 (ಲಕ್ಷ ರೂ.ಗಳಲ್ಲಿ) | | 2020-21 (ಲಕ್ಷ ರೂ.ಗಳಲ್ಲಿ) | |
|---|---|---|---|---|---|
| | | ಪ್ರಸ್ತಾವಿಕ | ವಾಸ್ತವಿಕ | ಪ್ರಸ್ತಾವಿಕ | ವಾಸ್ತವಿಕ |
| 1 | ಭೂಮಿ ಮತ್ತು ಕಟ್ಟಡಗಳು | 8200.00 | 11230.46 | 725.00 | 6512.90 |
| 2 | ಪ್ರಯಾಣಿಕ ವಾಹನಗಳು ಮತ್ತು ಇಲಾಖಾ ವಾಹನಗಳು | 12650.00 | 3186.58 | 20.00 | 25.84 |
| 3 | ಸ್ಥಾವರ, ಯಂತ್ರೋಪಕರಣಗಳು ಮತ್ತು ಇತರ | 1260.00 | 501.22 | 180.00 | 51.41 |
| **ಒಟ್ಟು** | | **22110.00** | **14918.26** | **925.00** | **6590.15** |

## 12.2 ಕೇಂದ್ರ ಮತ್ತು ರಾಜ್ಯ ಶಾಸಕಾಂಗಗಳಿಂದ ಬಂದ ಪ್ರಶ್ನೆಗಳು :

ವರದಿ ವರ್ಷದಲ್ಲಿ ರಾಜ್ಯ ವಿಧಾನಸಭೆಯ 112, ವಿಧಾನಪರಿಷತ್ತಿನ 94 ಚುಕ್ಕೆ ಗುರುತಿನ/ಗುರುತಿಲ್ಲದ ಪ್ರಶ್ನೆಗಳು ಸ್ವೀಕೃತಗೊಂಡಿದ್ದು, ಅವುಗಳನ್ನು ನಿಗದಿತ ಸಮಯದೊಳಗೆ ಉತ್ತರಿಸಲಾಗಿದೆ.

## 12.3 ಪರಿಸರ :

ವರದಿ ವರ್ಷದಲ್ಲಿಯೂ ಸಹ ಸಂಸ್ಥೆಯು ಪರಿಸರವನ್ನು ಕಾಪಾಡಲು ತನ್ನ ಆವರಣವನ್ನು ಸ್ವಚ್ಛ ಹಾಗೂ ಮಾಲಿನ್ಯರಹಿತವಾಗಿಟ್ಟುಕೊಳ್ಳಲು ಸಿಬ್ಬಂದಿ ಮತ್ತು ಸಾರ್ವಜನಿಕ ಪ್ರಯಾಣಿಕರಲ್ಲಿ ಅರಿವು ಮೂಡಿಸಲು ಪ್ರಸಾರ ಕಾರ್ಯಕ್ರಮಗಳನ್ನು ಮುಂದುವರೆಸಿದೆ. ಪರಿಸರ ರಕ್ಷಣೆ ವಿಷಯದ ಬಗ್ಗೆ ರೂಪಿಸಿರುವ ಘೋಷಣೆಗಳನ್ನು ಪ್ರದರ್ಶಿಸಲಾಗಿದೆ ಹಾಗೂ ಕರಪತ್ರಗಳನ್ನು ಹಂಚಲಾಗಿದೆ. ವಿಭಾಗೀಯ ಕಛೇರಿಗಳ, ಘಟಕಗಳ, ಬಸ್‌ನಿಲ್ದಾಣಗಳ, ಕಾರ್ಯಗಾರಗಳ ಮತ್ತು ಸಿಬ್ಬಂದಿ ವಸತಿ ಗೃಹಗಳ ಖಾಲಿ ಜಾಗಗಳಲ್ಲಿ ಸಸಿಗಳನ್ನು ನೆಡಲಾಗಿದೆ ಹಾಗೂ ಅವುಗಳನ್ನು ಪೋಷಿಸಲಾಗಿದೆ. ವಾಹನಗಳ ಸ್ಮೋಕ್ ಎಮಿಷನ್ ಟೆಸ್ಟ್ ಅನ್ನು ನಿಯತಕಾಲಿಕವಾಗಿ ಕೈಗೊಂಡು ವಾಹನ ಸಮೂಹದ ಎಲ್ಲಾ ವಾಹನಗಳು ವರ್ಷಾಂತ್ಯದೊಳಗೆ ಪರೀಕ್ಷೆಗೊಳಪಡುವಂತೆ ನೋಡಿಕೊಳ್ಳಲಾಗುತ್ತಿದೆ.

## 12.4 ಕಾನೂನು :

ದಿನಾಂಕ 31-03-2021ರಂದು ಸಂಸ್ಥೆಗೆ ಸಂಬಂಧಿಸಿದಂತೆ ವಿವಿಧ ನ್ಯಾಯಾಲಯಗಳಲ್ಲಿ (ಉಚ್ಚ ನ್ಯಾಯಾಲಯಗಳು ಮತ್ತು ಸರ್ವೋಚ್ಚ ನ್ಯಾಯಾಲಯ ಸೇರಿದಂತೆ) 5395 ಪ್ರಕರಣಗಳು ಬಾಕಿ ಇರುತ್ತವೆ. ವಿಭಾಗ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಕಾನೂನು ಅಧಿಕಾರಿಗಳು/ಕಾನೂನು ಅಧಿಕಾರಿಗಳು ಸಂಸ್ಥೆಯ ವಕೀಲರ ಸಮನ್ವಯದೊಂದಿಗೆ ಟ್ರಯಲ್ ನ್ಯಾಯಾಲಯಗಳಲ್ಲಿ ಸಂಸ್ಥೆಯ ಬಾಕಿ ಇರುವ ಪ್ರಕರಣಗಳನ್ನು ನಿರ್ವಹಿಸುತ್ತಿದ್ದಾರೆ. ಉಚ್ಚ ನ್ಯಾಯಾಲಯಗಳ ಮತ್ತು ಸರ್ವೋಚ್ಚ ನ್ಯಾಯಾಲಯದಲ್ಲಿರುವ ಸಂಸ್ಥೆಗೆ ಸಂಬಂಧಿಸಿದ

ಮೇಲ್ಮನವಿಗಳನ್ನು, ರಿಟ್ ಅರ್ಜಿಗಳನ್ನು ಮತ್ತು ಇನ್ನುಳಿದ ಪ್ರಕರಣಗಳನ್ನು ಕೇಂದ್ರ ಕಛೇರಿಯ ಕಾನೂನು ಇಲಾಖೆಯು ನಿರ್ವಹಿಸುತ್ತಿದೆ.

**12.4.1 ಎಂ.ಎ.ಸಿ.ಟಿ.ಗಳಲ್ಲಿ ಬಾಕಿ ಇರುವ ಎಂ.ವಿ.ಸಿ. ಪ್ರಕರಣಗಳು :**

ದಿನಾಂಕ 01–04–2020ರಂದು 1356 ಎಂ.ವಿ.ಸಿ. ಪ್ರಕರಣಗಳು ಬಾಕಿ ಇದ್ದು, ವರದಿ ವರ್ಷದಲ್ಲಿ 252 ಪ್ರಕರಣಗಳು ದಾಖಲಾಗಿ ಒಟ್ಟು 348 ಪ್ರಕರಣಗಳು ವಿಲೇವಾರಿಯಾಗಿರುತ್ತವೆ. ಅವುಗಳ ಪೈಕಿ 59 ಪ್ರಕರಣಗಳು ಸಂಸ್ಥೆಯ ಪರವಾಗಿ ತೀರ್ಪು ಬಂದಿದ್ದು, ವರ್ಷಾಂತ್ಯಕ್ಕೆ 1260 ಪ್ರಕರಣಗಳು ಬಾಕಿ ಉಳಿದಿರುತ್ತವೆ. ವಿಭಾಗವಾರು ವಿವರವನ್ನು **ತ:ಖ್ತೆ–41**ರಲ್ಲಿ ನೀಡಲಾಗಿದೆ.

**ತ:ಖ್ತೆ–41**

| ಕ್ರ. ಸಂ. | ವಿಭಾಗ | 1–4–20ರಂದು ಇದ್ದ ಬಾಕಿ | ವರದಿ ವರ್ಷದಲ್ಲಿ ದಾಖಲಾದವು | ವರದಿ ವರ್ಷದಲ್ಲಿ ಇತ್ಯರ್ಥಗೊಂಡವು | | | 31–3–21ರಂದು ಉಳಿದ ಬಾಕಿ |
|---|---|---|---|---|---|---|---|
| | | | | ಪರವಾಗಿ | ವಿರುದ್ಧ | ಒಟ್ಟು | |
| 1 | ಕಲಬುರಗಿ–1 | 119 | 50 | 0 | 39 | 39 | 130 |
| 2 | ಕಲಬುರಗಿ–2 | 78 | 20 | 0 | 24 | 24 | 74 |
| 3 | ಯಾದಗಿರಿ | 71 | 36 | 4 | 18 | 22 | 85 |
| 4 | ರಾಯಚೂರು | 133 | 08 | 6 | 19 | 25 | 116 |
| 5 | ಬೀದರ್ | 95 | 23 | 0 | 21 | 21 | 97 |
| 6 | ಕೊಪ್ಪಳ | 111 | 34 | 0 | 25 | 25 | 120 |
| 7 | ಬಳ್ಳಾರಿ | 123 | 22 | 6 | 25 | 31 | 114 |
| 8 | ವಿಜಯಪುರ | 446 | 27 | 24 | 48 | 72 | 401 |
| 9 | ಹೊಸಪೇಟೆ | 180 | 32 | 19 | 70 | 89 | 123 |
| **ಒಟ್ಟು** | | **1356** | **252** | **59** | **289** | **348** | **1260** |

**12.4.2 ಕಾರ್ಮಿಕ ನ್ಯಾಯಾಲಯಗಳಲ್ಲಿ/ಔದ್ಯಮಿಕ ನ್ಯಾಯಾಧೀಕರಣಗಳಲ್ಲಿ ಬಾಕಿಯಿರುವ ಪ್ರಕರಣಗಳು :**

ದಿನಾಂಕ 01–04–2020ರಂದು ಸಂಸ್ಥೆಯ 2,660 ಪ್ರಕರಣಗಳು ಕಾರ್ಮಿಕ ನ್ಯಾಯಾಲಯಗಳಲ್ಲಿ/ಔದ್ಯಮಿಕ ನ್ಯಾಯಾಧೀಕರಣಗಳಲ್ಲಿ ಬಾಕಿ ಇದ್ದು, ವರದಿ ವರ್ಷದಲ್ಲಿ 201 ಪ್ರಕರಣಗಳು ದಾಖಲಾಗಿವೆ. ಒಟ್ಟು 281 ಪ್ರಕರಣಗಳು ವಿಲೇವಾರಿಯಾಗಿದ್ದು, ಈ ಪೈಕಿ 185 ಪ್ರಕರಣಗಳಲ್ಲಿ ಸಂಸ್ಥೆಯ ಪರವಾಗಿ ತೀರ್ಪು ಬಂದಿರುತ್ತದೆ. ವರ್ಷದ ಕೊನೆಯಲ್ಲಿ ಒಟ್ಟು 2580 ಪ್ರಕರಣಗಳು ಬಾಕಿ ಉಳಿದಿರುತ್ತವೆ. ವಿಭಾಗವಾರು ವಿವರವನ್ನು **ತ:ಖ್ತೆ–42**ರಲ್ಲಿ ನೀಡಲಾಗಿದೆ.

**ತ:ಖ್ತೆ–42**

| ಕ್ರ. ಸಂ. | ವಿಭಾಗ | 1–4–20ರಂದು ಇದ್ದ ಬಾಕಿ | ವರದಿ ವರ್ಷದಲ್ಲಿ ದಾಖಲಾದವು | ವರದಿ ವರ್ಷದಲ್ಲಿ ಇತ್ಯರ್ಥಗೊಂಡವು | | | 31–3–21ರಂದು ಉಳಿದ ಬಾಕಿ |
|---|---|---|---|---|---|---|---|
| | | | | ಪರವಾಗಿ | ವಿರುದ್ಧ | ಒಟ್ಟು | |
| 1 | ಕಲಬುರಗಿ–1 | 309 | 22 | 5 | 19 | 24 | 307 |
| 2 | ಕಲಬುರಗಿ–2 | 98 | 45 | 13 | 5 | 18 | 125 |
| 3 | ಯಾದಗಿರಿ | 182 | 13 | 27 | 5 | 32 | 163 |

| | | | | | | | |
|---|---|---|---|---|---|---|---|
| 4 | ರಾಯಚೂರು | 167 | 21 | 14 | 3 | 17 | 171 |
| 5 | ಬೀದರ್ | 177 | 5 | 0 | 5 | 5 | 177 |
| 6 | ಕೊಪ್ಪಳ | 161 | 11 | 17 | 4 | 21 | 151 |
| 7 | ಬಳ್ಳಾರಿ | 308 | 38 | 27 | 4 | 31 | 315 |
| 8 | ವಿಜಯಪುರ | 800 | 27 | 60 | 15 | 75 | 752 |
| 9 | ಹೊಸಪೇಟೆ | 458 | 19 | 22 | 36 | 58 | 419 |
| **ಒಟ್ಟು** | | **2660** | **201** | **185** | **96** | **281** | **2580** |

**12.4.3 ಉಚ್ಚ ನ್ಯಾಯಾಲಯಗಳಲ್ಲಿ/ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿಯಿರುವ ಪ್ರಕರಣಗಳು :**

ವರದಿ ವರ್ಷದಲ್ಲಿ ಅಪಘಾತ, ಸೇವಾ, ಕಾರ್ಮಿಕ ಮತ್ತು ವಾಣಿಜ್ಯ ವಿಷಯಗಳಿಗೆ ಸಂಬಂಧಿಸಿದಂತೆ, ಉಚ್ಚ ನ್ಯಾಯಾಲಯ ಹಾಗೂ ಸರ್ವೋಚ್ಚ ನ್ಯಾಯಾಲಯಗಳಲ್ಲಿ ದಾಖಲಾದ ಮತ್ತು ವಿಲೇವಾರಿಯಾದ ಪ್ರಕರಣಗಳು, ದಿನಾಂಕ 31-03-2021ರಂದು ಬಾಕಿ ಉಳಿದಿರುವ ಪ್ರಕರಣಗಳು ಇವುಗಳ ವಿವರವನ್ನು **ತ:ಖ್ತೆ-43**ರಲ್ಲಿ ನೀಡಲಾಗಿದೆ.

**ತ:ಖ್ತೆ-43**

| ಕ್ರ. ಸಂ. | ಅರ್ಜಿ/ ಮೇಲ್ಮನವಿ | 1-4-2020ರಂದು ಇದ್ದ ಬಾಕಿ | ವರದಿ ವರ್ಷದಲ್ಲಿ ದಾಖಲಾದವು | ವರದಿ ವರ್ಷದಲ್ಲಿ ಇತ್ಯರ್ಥಗೊಂಡವು | | | 31-3-2021ರಂದು ಉಳಿದ ಬಾಕಿ |
|---|---|---|---|---|---|---|---|
| | | | | ಪರವಾಗಿ | ವಿರುದ್ಧ | ಒಟ್ಟು | |
| 1 | ಎಂ.ಎಫ್.ಎ. | 942 | 74 | 21 | 105 | 126 | 890 |
| 2 | ಡಬ್ಲ್ಯೂ.ಪಿ/ ಡಬ್ಲ್ಯೂ.ಎ | 637 | 35 | 21 | 11 | 32 | 640 |
| 3 | ಎಸ್.ಎಲ್.ಪಿ. | 16 | 9 | 0 | 0 | 0 | 25 |
| **ಒಟ್ಟು** | | **1595** | **118** | **42** | **116** | **158** | **1555** |

**12.5 ಅಪಘಾತ ಪರಿಹಾರ ನಿಧಿ :**

ಅಪಘಾತ ಪರಿಹಾರ ನಿಧಿ ಅನ್ನು ದಿನಾಂಕ 8-1-2004ರಿಂದ ಜಾರಿಗೆ ಬರುವಂತೆ ಸ್ಥಾಪಿಸಲಾಗಿದೆ. ಸಂಸ್ಥೆಯ ಬಸ್‌ನಲ್ಲಿ ಪ್ರಯಾಣಿಸುತ್ತಿರುವಾಗ ರಸ್ತೆ ಅಪಘಾತದಲ್ಲಿ ಮರಣಹೊಂದಿದ ಪ್ರಯಾಣಿಕನ ವಾರಸುದಾರರಿಗೆ ಹಣಕಾಸಿನ ಪರಿಹಾರವನ್ನು ನೀಡಲಾಗುತ್ತಿದೆ.

ಎಂ.ಎ.ಸಿ.ಟಿ. ಕ್ಲೈಮ್ ಪಾವತಿಸುವುದರ ಜೊತೆಗೆ, ದಿನಾಂಕ 1-3-2017ರಿಂದ ಜಾರಿಗೆ ಬರುವಂತೆ, ಈ ಮೊದಲು ನೀಡಲಾಗುತ್ತಿದ್ದ ಅಪಘಾತ ಪರಿಹಾರ ಮೊತ್ತವನ್ನು ರೂ. 3.00 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಪ್ರಯಾಣಿಕರಿಂದ ಅಪಘಾತ ಪರಿಹಾರ ನಿಧಿಗಾಗಿ ರೂ. 100.00 ಹಾಗೂ ಅದಕ್ಕಿಂತ ಹೆಚ್ಚಿನ ಟಿಕೆಟ್ ಮೊತ್ತಕ್ಕೆ ತಲಾ ರೂ. 1ರಂತೆ ದಿನಾಂಕ 14-02-2014ರಿಂದ ಹಾಗೂ ಪ್ರತಿ ವಿದ್ಯಾರ್ಥಿಯಿಂದ ಮಾಸಿಕ ರೂ.5/-ರಂತೆ ವಂತಿಕೆ ಸಂಗ್ರಹ ದಿನಾಂಕ 24.05.2016 ಹಾಗೂ ಪ್ರತಿ ಸಾಂದರ್ಭಿಕ ಒಪ್ಪಂದಕ್ಕೆ ರೂ.50/-ರಂತೆ ವಂತಿಕೆಯನ್ನು ಒಪ್ಪಂದದಾರರಿಂದ ದಿನಾಂಕ 31.05.2014ರಿಂದ ಪಡೆಯಲಾಗುತ್ತಿದೆ.

ವರದಿ ವರ್ಷದಲ್ಲಿ ಇತ್ಯರ್ಥವಾದ ಕ್ಲೈಮ್ ಮತ್ತು ಪಾವತಿಸಿದ ಪರಿಹಾರ ಮೊತ್ತದ ವಿವರವನ್ನು ಕೆಳಗಿನ ಪಟ್ಟಿಯಲ್ಲಿ ನೀಡಲಾಗಿದೆ.

| ವಿವರ | 2019–20 | | | 2020–21 | | |
|---|---|---|---|---|---|---|
| | ಕ್ಲೈಮ್‌ವೊಂದಕ್ಕೆ ನೀಡಲಾದ ಪರಿಹಾರ ಮೊತ್ತ | | | ಕ್ಲೈಮ್‌ವೊಂದಕ್ಕೆ ನೀಡಲಾದ ಪರಿಹಾರ ಮೊತ್ತ | | |
| | ರೂ.2.5 ಲಕ್ಷ | ರೂ.3.0 ಲಕ್ಷ | ಒಟ್ಟು | ರೂ.2.5 ಲಕ್ಷ | ರೂ.3.00ಲಕ್ಷ | ಒಟ್ಟು |
| ಕ್ಲೈಮ್‌ಗಳ ಸಂಖ್ಯೆ | 1 | 0 | 1 | 0 | 3 | 3 |
| ಪರಿಹಾರ ಮೊತ್ತ (ಲಕ್ಷ ರೂ.ಗಳಲ್ಲಿ) | 2.50 | 0 | 2.50 | 0 | 9.00 | 9.00 |

### 12.6 ಮಾಹಿತಿ ಹಕ್ಕು ಅಧಿನಿಯಮ :

ಮಾಹಿತಿ ಹಕ್ಕು ಅಧಿನಿಯಮ 2005 ಅನ್ನು ಅಕ್ಟೋಬರ್ 2005ರಿಂದ ಸಂಸ್ಥೆಯಲ್ಲಿ ಅನುಷ್ಠಾನಗೊಳಿಸಲಾಗಿದೆ. ಸದರಿ ಅಧಿನಿಯಮದಂತೆ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಾರ್ವಜನಿಕ ಮಾಹಿತಿ ಅಧಿಕಾರಿಗಳ/ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳ/ಮೊದಲನೇ ಮೇಲ್ಮನವಿ ಪ್ರಾಧಿಕಾರದ ಪಟ್ಟಿಯನ್ನು ಈಗಾಗಲೇ ಸಂಸ್ಥೆಯ ವೆಬ್ ಸೈಟ್(www.nekrtc.com)ನಲ್ಲಿ ಪ್ರಕಟಿಸಲಾಗಿದೆ.

(ಮಾಹಿತಿ ಹಕ್ಕು ಅಧಿನಿಯಮ 2005ರ ಸೆಕ್ಷನ್ 4(1)(ಬಿ) ಅನ್ವಯ ಸಂಸ್ಥೆಯ ಕೈಪಿಡಿಯನ್ನು ಮುದ್ರಿಸಿ, ಪ್ರಕಟಿಸಲಾಗಿದೆ.)

ವರದಿ ವರ್ಷದಲ್ಲಿ ಸ್ವೀಕೃತವಾದ ಅರ್ಜಿಗಳು ಹಾಗೂ ಅವುಗಳ ವಿಲೇವಾರಿ ವಿವರವನ್ನು **ತಃಖ್ತೆ–44**ರಲ್ಲಿ ಕೊಡಲಾಗಿದೆ.

**ತ:ಖ್ತೆ–44**

| ವಿಭಾಗ/ಕಛೇರಿ | ಸಾರ್ವಜನಿಕ ಪ್ರಾಧಿಕಾರದ ಕೆಳಗಿರುವ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಸಂಖ್ಯೆ | ವಿಲೇವಾರಿಗಾಗಿ ಇದ್ದ ಒಟ್ಟು ಅರ್ಜಿಗಳು * | ವರದಿ ವರ್ಷದಲ್ಲಿ ವಿಲೇವಾರಿಯಾದ ಅರ್ಜಿಗಳು | | | ವರ್ಷಾಂತ್ಯಕ್ಕೆ ಬಾಕಿ ಇರುವ ಅರ್ಜಿಗಳ ಸಂಖ್ಯೆ | ಅರ್ಜಿದಾರರಿಂದ ಸ್ವೀಕರಿಸಲಾದ ಒಟ್ಟು ಮೊತ್ತ (ರೂ.ಗಳಲ್ಲಿ) |
|---|---|---|---|---|---|---|---|
| | | | ನಿಗದಿತ ಸಮಯ ದೊಳಗೆ | ನಿಗದಿತ ಸಮಯದ ನಂತರ | ಒಟ್ಟು | | |
| ಕೇಂದ್ರ ಕಛೇರಿ | 22 | 116 | 116 | 0 | 116 | 0 | 1190 |
| ಕಲಬುರಗಿ–1 | 17 | 34 | 34 | 0 | 34 | 0 | 290 |
| ಕಲಬುರಗಿ–2 | 15 | 43 | 42 | 1 | 43 | 0 | 1380 |
| ಯಾದಗಿರಿ | 15 | 47 | 41 | 5 | 46 | 1 | 420 |
| ರಾಯಚೂರು | 19 | 235 | 230 | 0 | 230 | 5 | 2270 |
| ಬೀದರ್ | 16 | 113 | 101 | 0 | 101 | 12 | 730 |
| ಕೊಪ್ಪಳ | 17 | 113 | 113 | 0 | 113 | 0 | 800 |
| ಬಳ್ಳಾರಿ | 16 | 108 | 83 | 20 | 103 | 5 | 798 |
| ವಿಜಯಪುರ | 20 | 195 | 184 | 5 | 189 | 6 | 3460 |
| ಹೊಸಪೇಟೆ | 15 | 75 | 75 | 0 | 75 | 0 | 730 |
| ತ.ಕೇ., ಹುಮನಾಬಾದ | 1 | 0 | 0 | 0 | 0 | 0 | 0 |
| ತ.ಕೇ., ಹೆಚ್.ಬಿ.ಹಳ್ಳಿ | 1 | 0 | 0 | 0 | 0 | 0 | 0 |
| ಕಲಬುರಗಿ ಕಾಮಗಾರಿ ವಿಭಾಗ | 1 | 7 | 7 | 0 | 7 | 0 | 70 |

| | | | | | | | |
|---|---|---|---|---|---|---|---|
| ಬಳ್ಳಾರಿ ಕಾಮಗಾರಿ ವಿಭಾಗ | 1 | 16 | 16 | 0 | 16 | 0 | 150 |
| ಪ್ರಾದೇಶಿಕ ಕಾರ್ಯಾಗಾರ, ಯಾದಗಿರಿ | 1 | 5 | 5 | 0 | 5 | 0 | 110 |
| **ಒಟ್ಟು** | 177 | 1107 | 1047 | 31 | 1078 | 29 | 12398 |

* ಹಿಂದಿನ ವರ್ಷದ ಕೊನೆ ದಿನದಂದು ಇದ್ದ ಅರ್ಜಿಗಳು + ವರದಿ ವರ್ಷದಲ್ಲಿ ಬಂದ ಅರ್ಜಿಗಳು.

*****

# ಅನುಸೂಚಿಗಳು

ಅನುಸೂಚಿ-ಅ

## 2020-21ನೇ ಸಾಲಿನ ಮಂಡಳಿ ನಿರ್ದೇಶಕರು ಭಾಗವಹಿಸಿದ ಸಭೆಯ ವಿವರಗಳು.

| ಕ್ರ. ಸಂ. | ಮಂಡಳಿ ನಿರ್ದೇಶಕರ ಹೆಸರು (ಶ್ರೀಯುತ/ಶ್ರೀಮತಿ) | ಅಧಿಕಾರ ಅವಧಿ | | ಭಾಗವಹಿಸಿದ ಮಂಡಳಿ ಸಭೆಗಳು |
|---|---|---|---|---|
| | | ಇಂದ | ವರೆಗೆ | |
| 1 | ಶ್ರೀ ಲಕ್ಷ್ಮಣ ಸಂಗಪ್ಪ ಸವದಿ, ಉಪಮುಖ್ಯ ಮಂತ್ರಿಗಳು ಹಾಗೂ ಸಾರಿಗೆ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು, ಈ.ಕ.ರ.ಸಾ.ಸಂಸ್ಥೆ, ಕಲಬುರಗಿ-585 102. | 01.04.20 | 07.09.20 | 1 |
| 2 | ಶ್ರೀ ರಾಜ್‌ಕುಮಾರ್ ಪಾಟೀಲ್ ತೇಲ್ಕೂರ, ಸನ್ಮಾನ್ಯ ಶಾಸಕರು ಸೇಡಂ, ಅಧ್ಯಕ್ಷರು, ಈ.ಕ.ರ.ಸಾ.ಸಂಸ್ಥೆ, ಕಲಬುರಗಿ-585 102. | 07.09.20 | 31.03.21 | 2 |
| 3 | ಶ್ರೀ ಗೌರವ ಗುಪ್ತ, ಭಾ.ಆ.ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560 001. | 01.04.20 | 21.05.20 | - |
| 4 | ಶ್ರೀ ಅಂಜುಮ್ ಪರ್ವೇಜ್ಭಾ.ಆ.ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560 001. | 15.06.20 | 31.03.21 | 3 |
| 5 | ಶ್ರೀ ಶಿವಯೋಗಿ ಸಿ. ಕಳಸದ, ಭಾ.ಆ.ಸೇ., ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ರ.ಸಾ.ಸಂಸ್ಥೆ, ಕೇಂದ್ರ ಕಛೇರಿ, ಬೆಂಗಳೂರು-560 027. | 01.04.20 | 31.03.21 | 3 |
| 6 | ಶ್ರೀಮತಿ ಸಿ. ಶಿಖಾ, ಭಾ.ಆ.ಸೇ., ವ್ಯವಸ್ಥಾಪಕ ನಿರ್ದೇಶಕರು, ಬೆಂ.ಮ.ಸಾ.ಸಂಸ್ಥೆ, ಕೇಂದ್ರ ಕಛೇರಿ, ಬೆಂಗಳೂರು-560027 | 01.04.20 | 31.03.21 | 3 |
| 7 | ಶ್ರೀ ಪಿ. ರಾಜೇಂದ್ರ ಚೋಳನ್, ಭಾ.ಆ.ಸೇ., ವ್ಯವಸ್ಥಾಪಕ ನಿರ್ದೇಶಕರು, ವಾ.ಕ.ರ.ಸಾ.ಸಂಸ್ಥೆ, ಕೇಂದ್ರ ಕಛೇರಿ, ಹುಬ್ಬಳ್ಳಿ-580030. | 01.04.20 | 30.07.20 | - |
| 8 | ಶ್ರೀ ಕೃಷ್ಣ ಬಾಜಪೇಯಿ, ಭಾ.ಆ.ಸೇ., ವ್ಯವಸ್ಥಾಪಕ ನಿರ್ದೇಶಕರು, ವಾ.ಕ.ರ.ಸಾ.ಸಂಸ್ಥೆ, ಕೇಂದ್ರ ಕಛೇರಿ, ಹುಬ್ಬಳ್ಳಿ-580030. | 30.07.20 | 31.03.21 | 2 |

| | | | | |
|---|---|---|---|---|
| 9 | ಶ್ರೀಮತಿ ಜಹೀರಾ ನಸೀಮ್, ಕ.ಆ.ಸೇ. (ಆ.ಶ್ರೇ)<br>ವ್ಯವಸ್ಥಾಪಕ ನಿರ್ದೇಶಕರು,<br>ಈ.ಕ.ರ.ಸಾ.ಸಂಸ್ಥೆ, ಕೇಂದ್ರ ಕಛೇರಿ,<br>ಕಲಬುರಗಿ-585102. | 01.04.20 | 31.08.20 | 1 |
| 10 | ಶ್ರೀ ಕೂರ್ಮಾರಾವ್ ಎಂ, ಭಾ.ಆ.ಸೇ.<br>ವ್ಯವಸ್ಥಾಪಕ ನಿರ್ದೇಶಕರು,<br>ಈ.ಕ.ರ.ಸಾ.ಸಂಸ್ಥೆ, ಕೇಂದ್ರ ಕಛೇರಿ,<br>ಕಲಬುರಗಿ-585102. | 31.08.20 | 31.03.21 | 2 |
| 11 | ಶ್ರೀ ವಾಯ್ ಕೆ. ಪ್ರಕಾಶ,<br>ಸರ್ಕಾರದ ಉಪಕಾರ್ಯದರ್ಶಿ (ಪಿಂಚಣಿ),<br>ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ, ವಿಧಾನಸೌಧ,<br>ಬೆಂಗಳೂರು- 560 001. | 01.04.20 | 13.04.20 | - |
| 12 | ಶ್ರೀಮತಿ ಕಲಾವತಿ ಎಸ್.ವಿ.<br>ಸರ್ಕಾರದ ಉಪಕಾರ್ಯದರ್ಶಿ, (ಪಿಂಚಣಿ)<br>ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ, ವಿಧಾನಸೌಧ,<br>ಬೆಂಗಳೂರು- 560 001. | 13.04.20 | 14.09.20 | 1 |
| 13 | ಶ್ರೀ ಪುರುಷೋತ್ತಮ ಸಿಂಗ್,<br>ವಿಶೇಷಾಧಿಕಾರಿ (ಜಿ.ಪಂ) ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ<br>ಬೆಂಗಳೂರು- 560 001 | 14.09.20 | 31.03.21 | 2 |
| 14 | ಶ್ರೀ ಪರೇಶಕುಮಾರ್ ಗೋಯೆಲ್,<br>ನಿರ್ದೇಶಕರು (ಸಾರಿಗೆ),<br>ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ,<br>ಸಾರಿಗೆ ಭವನ, ನಂ.1, ಸಂಸದ್ ಮಾರ್ಗ,<br>ನವದೆಹಲಿ-110 001. | 01.04.20 | 31.03.21 | - |
| 15 | ಶ್ರೀ ಮಲ್ಲಿಕಾರ್ಜುನ ಬಿನ್ ಗುರುಲಿಂಗಪ್ಪ ತಡಕಲ್ಲ,<br>ಮನೆ ನಂ.ಇ/2/25, ಕಡಗಂಚಿ ಅಂಚೆ,<br>ಆಳಂದ ತಾಲ್ಲೂಕು,<br>ಕಲಬುರಗಿ ಜಿಲ್ಲೆ, | 25.11.20 | 31.3.21 | 1 |

2020-21ನೇ ಸಾಲಿನಲ್ಲಿ 3 (ಮೂರು) ನಿರ್ದೇಶಕರ ಮಂಡಳಿ ಸಭೆಗಳನ್ನು ನಡೆಸಲಾಗಿದೆ. ಒಟ್ಟು 63 (ಅರವತ್ ಮೂರು) ವಿಷಯಗಳನ್ನು ಮಂಡಿಸಿದ್ದು, 63 (ಅರವತ್ಮೂರು) ಠರಾವುಗಳು ಅಂಗೀಕಾರವಾಗಿರುತ್ತವೆ. ಒಂದು ವಿಷಯವು ಪ್ರಸರಣ ಮೂಲಕ ಅಂಗೀಕಾರವಾಗಿರುತ್ತದೆ.

**ಅನುಸೂಚಿ-ಆ**

## 31ನೇ ಮಾರ್ಚ್ 2021ರಂದು ಜಾರಿಯಲ್ಲಿದ್ದ ಹುದ್ದೆವಾರು ವೇತನ ಶ್ರೇಣಿ.

| ಹುದ್ದೆ | ವೇತನ ಶ್ರೇಣಿ |
|---|---|
| ಅಧ್ಯಕ್ಷ<br>ವ್ಯವಸ್ಥಾಪಕ ನಿರ್ದೇಶಕ | ಸರ್ಕಾರ ನೇಮಿಸುತ್ತದೆ.<br>ಸರ್ಕಾರ ನೇಮಿಸುತ್ತದೆ. |
| **ದರ್ಜೆ-1 (ಆಯ್ಕೆ ಶ್ರೇಣಿ)** | |
| ಮುಖ್ಯ ಲೆಕ್ಕಾಧಿಕಾರಿ ಹಾಗೂ ಆ.ಸ.<br>ಮುಖ್ಯ ತಾಂತ್ರಿಕ ಶಿಲ್ಪಿ,<br>ಮುಖ್ಯ ಯೋಜನಾ ಮತ್ತು ಸಂಖ್ಯಾಧಿಕಾರಿ<br>ಮುಖ್ಯ ಸಂಚಾರ ವ್ಯವಸ್ಥಾಪಕ<br>ಮುಖ್ಯ ಸಿಬ್ಬಂದಿ ವ್ಯವಸ್ಥಾಪಕ<br>ಮುಖ್ಯ ಅಭಿಯಂತರ (ಕಾಮಗಾರಿ)<br>ಮುಖ್ಯ ಕಾನೂನು ಅಧಿಕಾರಿ<br>ಉಗ್ರಾಣ ಮತ್ತು ಖರೀದಿ ನಿಯಂತ್ರಕ<br>ಮುಖ್ಯ ಭದ್ರತಾ ಮತ್ತು ಜಾಗೃತಾಧಿಕಾರಿ<br>ಹಿ.ವಿಭಾಗೀಯ ನಿಯಂತ್ರಣಾಧಿಕಾರಿ<br>ಮುಖ್ಯ ಕಾರ್ಮಿಕ ಮತ್ತು ಕಲ್ಯಾಣಾಧಿಕಾರಿ<br>ಮುಖ್ಯ ಗಣಕ ವ್ಯವಸ್ಥಾಪಕ | 43100-1220-49200-1410-59070-1590-65430 |
| ಉಪ ಮುಖ್ಯ ಭದ್ರತಾ ಮತ್ತು ಜಾಗೃತಾಧಿಕಾರಿ<br>ಪ್ರಾಂಶುಪಾಲ<br>ಮಂಡಳಿ ಕಾರ್ಯದರ್ಶಿ<br>ತಾಂತ್ರಿಕ ಶಿಲ್ಪಿ(ನಿ)/ಉಪಮುಖ್ಯ ತಾಂತ್ರಿಕ ಶಿಲ್ಪಿ<br>ಉಪಮುಖ್ಯ ಉಗ್ರಾಣ ಮತ್ತು ಖರೀದಿ ನಿಯಂತ್ರಕ<br>ಉಪಮುಖ್ಯ ಸಿಬ್ಬಂದಿ ವ್ಯವಸ್ಥಾಪಕ<br>ಉಪಮುಖ್ಯ ಸಂಚಾರ ವ್ಯವಸ್ಥಾಪಕ<br>ಉಪಮುಖ್ಯ ಲೆಕ್ಕಾಧಿಕಾರಿ<br>ಉಪಮುಖ್ಯ ಕಾನೂನು ಅಧಿಕಾರಿ<br>ಉಪಮುಖ್ಯ ಕಾರ್ಮಿಕ ಮತ್ತು ಕಲ್ಯಾಣಾಧಿಕಾರಿ<br>ಕಾರ್ಯ ವ್ಯವಸ್ಥಾಪಕ<br>ಉಪ ಮುಖ್ಯ ಸಂಖ್ಯಾಶಾಸ್ತ್ರಜ್ಞ<br>ಕಾರ್ಯನಿರ್ವಾಹಕ ಅಭಿಯಂತರ<br>ವಿಭಾಗೀಯ ನಿಯಂತ್ರಣಾಧಿಕಾರಿ | 37560-940-39440-1090-42710-1220-50030-1410-61310 |
| **ದರ್ಜೆ-1 (ಕಿರಿಯ)** | |
| ಆಡಳಿತ ಅಧಿಕಾರಿ<br>ಲೆಕ್ಕಾಧಿಕಾರಿ<br>ವಿಭಾಗೀಯ ಸಂಚಾರ ಅಧಿಕಾರಿ<br>ವಿಭಾಗೀಯ ತಾಂತ್ರಿಕ ಶಿಲ್ಪಿ<br>ಉಗ್ರಾಣ ಅಧಿಕಾರಿ<br>ಭದ್ರತಾ ಮತ್ತು ಜಾಗೃತಾಧಿಕಾರಿ<br>ಕಾನೂನು ಅಧಿಕಾರಿ<br>ಕಾರ್ಮಿಕ ಮತ್ತು ಕಲ್ಯಾಣಾಧಿಕಾರಿ<br>ಅಂಕಿಸಂಖ್ಯಾಧಿಕಾರಿ<br>ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ<br>ಘಟಕ ವ್ಯವಸ್ಥಾಪಕ (ಹಿರಿಯ) | 35180-940-37060-1090-40330-1220-48870-1410-55920 |

| | |
|---|---|
| ಸರ್ಜನ್<br>ವೈದ್ಯಾಧಿಕಾರಿ<br>ವೈದ್ಯಾಧಿಕಾರಿ (ಮಹಿಳಾ)<br>ಫಿಸಿಷಿಯನ್<br>ವೈದ್ಯಾಧಿಕಾರಿ (ಮಹಿಳಾ) (ಓ ಮತ್ತು ಜಿ) | |
| **ದರ್ಜೆ-2** | |
| ಸಹಾಯಕ ಆಡಳಿತಾಧಿಕಾರಿ<br>ಸಹಾಯಕ ಲೆಕ್ಕಾಧಿಕಾರಿ<br>ಸಹಾಯಕ ಕಾರ್ಮಿಕ ಮತ್ತು ಕಲ್ಯಾಣಾಧಿಕಾರಿ<br>ಸಹಾಯಕ ಅಂಕಿಸಂಖ್ಯಾಧಿಕಾರಿ<br>ಸಹಾಯಕ ಸಂಚಾರ ವ್ಯವಸ್ಥಾಪಕ<br>ಸಹಾಯಕ ತಾಂತ್ರಿಕ ಶಿಲ್ಪಿ<br>ಅಭಿಯಂತರ (ಪರಿಸರ)<br>ಸಹಾಯಕ ಉಗ್ರಾಣ ಅಧಿಕಾರಿ<br>ಸಹಾಯಕ ಕಾನೂನು ಅಧಿಕಾರಿ<br>ಸಹಾಯಕ ಭದ್ರತಾ ಮತ್ತು ಜಾಗೃತಾಧಿಕಾರಿ<br>ಸಹಾಯಕ ಗಣಕ ವ್ಯವಸ್ಥಾಪಕ<br>ಆಪ್ತ ಕಾರ್ಯದರ್ಶಿ<br>ಘಟಕ ವ್ಯವಸ್ಥಾಪಕ<br>ಸಹಾಯಕ ಅಭಿಯಂತರ<br>ಸಹಾಯಕ ವೈದ್ಯಾಧಿಕಾರಿ<br>ಸಹಾಯಕ ವೈದ್ಯಾಧಿಕಾರಿ (ಮಹಿಳಾ) | 26580-810-29820-940-32640-1090-37000-1220-46760 |
| **ದರ್ಜೆ-3** | |
| ಸಹಾಯಕ ಸಂಚಾರ ಅಧೀಕ್ಷಕ<br>ಸಹಾಯಕ ಕಾರ್ಯ ಅಧೀಕ್ಷಕ<br>ಅಧೀಕ್ಷಕ (ಸಿಬ್ಬಂದಿ)<br>ಅಧೀಕ್ಷಕ (ಉಗ್ರಾಣ)<br>ಅಧೀಕ್ಷಕ (ಲೆಕ್ಕ ಪತ್ರ)<br>ಅಧೀಕ್ಷಕ (ಅಂಕಿಸಂಖ್ಯೆ)<br>ಅಧೀಕ್ಷಕ (ಗಣಕ)<br>ಆಪ್ತ ಸಹಾಯಕ<br>ಕಿರಿಯ ಅಭಿಯಂತರರು (ವಿದ್ಯುತ್/ಕಾಮಗಾರಿ) ವಿಶೇಷ ಶ್ರೇಣಿ<br>ಹಿರಿಯ ಚಾಲಕ<br>ವಿಭಾಗೀಯ ಭದ್ರತಾ ಅಧೀಕ್ಷಕ | 18000-640-19920-730-25030-830-30010 |
| ಸಂಚಾರ ನಿರೀಕ್ಷಕ<br>ಪಾರುಪತ್ತೆಗಾರ<br>ವಿಭಾಗೀಯ ಭದ್ರತಾ ನಿರೀಕ್ಷಕ<br>ಕಿರಿಯ ಅಭಿಯಂತರ (ಕಾಮಗಾರಿ)<br>ಕಿರಿಯ ಅಭಿಯಂತರ (ವಿದ್ಯುತ್)<br>ನಕ್ಷೆಗಾರ<br>ಹಿರಿಯ ಶೀಘ್ರಲಿಪಿಗಾರ<br>ಉಗ್ರಾಣ ರಕ್ಷಕ<br>ಮೇಲ್ವಿಚಾರಕ(ಆಡಳಿತ)<br>ಮೇಲ್ವಿಚಾರಕ(ಲೆಕ್ಕಪತ್ರ)<br>ಮೇಲ್ವಿಚಾರಕ(ಅಂಕಿಸಂಖ್ಯೆ)<br>ಮೇಲ್ವಿಚಾರಕ(ಗಣಕ) | 16730-420-17570-530-19160-640-22360-730-26010-830-28500 |

| ದರ್ಜೆ–3 (ಮುಂದುವರೆದಿದೆ).. | |
|---|---|
| ಮುಖ್ಯ ಕುಶಲಕರ್ಮಿ<br>ಸಹಾಯಕ<br>ಕಿರಿಯ ಶೀಘ್ರಲಿಪಿಗಾರ<br>ಸಹಾಯಕ ಲೆಕ್ಕಿಗ<br>ಅಂಕಿಸಂಖ್ಯಾ ಸಹಾಯಕ<br>ಸಹಾಯಕ ಉಗ್ರಾಣ ರಕ್ಷಕ<br>ಸಹಾಯಕ ಭದ್ರತಾ ನೀರಿಕ್ಷಕ<br>ಸ್ಟಾಫ್ ನರ್ಸ್ | 14970–320–15930–420–16770–530–18360–640–21560–730–26670 |
| ಸಹಾಯಕ ಸಂಚಾರ ನಿರೀಕ್ಷಕ<br>ಸಹಾಯಕ ನಕ್ಷೆಗಾರ<br>ಕುಶಲಕರ್ಮಿ | 13970–250–14470–320–15750–420–16590–530–18180–640–20740 |
| ಸಂಚಾರ ನಿಯಂತ್ರಕ<br>ಕಿರಿಯ ಸಹಾಯಕ–ಕಂ–ಡಾಟಾ ಎಂಟ್ರಿ ಆಪರೇಟರ್<br>ಸ್ವಾಗತಗಾರ<br>ಫಾರ್ಮಸಿಸ್ಟ್<br>ಕರಾಸಾ ಹವಾಲ್ದಾರ<br>ಕ್ಷ–ಕಿರಣ ತಂತ್ರಜ್ಞ<br>ಕಿರಿಯ ಪ್ರಯೋಗಶಾಲಾ ತಂತ್ರಜ್ಞ | 12590–170–12930–250–14180–320–15780–420–16620–530–18210–640–19490 |
| ಚಾಲಕ<br>ಚಾಲಕ–ಕಂ–ನಿರ್ವಾಹಕ | 12400–170–12740–250–14240–320–15840–420–16680–530–18270–640–19550 |
| ಸಹಾಯಕ ಕುಶಲಕರ್ಮಿ<br>ಕೇರ್ ಟೇಕರ್–ಕಮ್–ಕುಕ್ | 12400–170–12740–250–14240–320–15840–420–17520 |
| ನಿರ್ವಾಹಕ<br>ತಾಂತ್ರಿಕ ಸಹಾಯಕ<br>ಕರಾಸಾ ಪೇದೆ | 11640–140–11920–170–12600–250–14100–320–15700 |
| **ದರ್ಜೆ–4** | |
| ಹವಿಲ್ದಾರ್<br>ಮಾಲಿ | 11480–140–11900–170–12750–250–14250–320–15530 |
| ರೂಮ್ ಬಾಯ್<br>ಕಛೇರಿ ಸಹಾಯಕ<br>ಕಛೇರಿ ಸಹಾಯಕ (ಸ್ವಚ್ಛತೆ)<br>ಕಛೇರಿ ಸಹಾಯಕ (ತೋಟಗಾರಿಕೆ) | 11320–140–12020–170–12870–250–14370–320–15010 |

ಅನುಸೂಚಿ-ಇ

## ಪ್ರಯಾಣ ದರಗಳು (25/26.02.2020ರಿಂದ ಜಾರಿಯಲ್ಲಿದ್ದಂತೆ)

| ಕ್ರ. ಸಂ. | ಸೇವಾ ಮಾದರಿ | ಪ್ರಯಾಣ ದರ |
|---|---|---|
| 1 | ಸಾಮಾನ್ಯ | ಪ್ರತಿ ಪ್ರಯಾಣಿಕ ಕಿ.ಮೀ.ಗೆ 71.23 ಪೈಸೆ, 3.5 ಕಿ.ಮೀ. ಉಪಹಂತಕ್ಕೆ ಕನಿಷ್ಠ ರೂ.5ರ ಪ್ರಯಾಣ ದರ ಮತ್ತು 6.5 ಕಿ.ಮೀ. ಹಂತಕ್ಕೆ ಅಥವಾ ಅದರ ಭಾಗಾಂಶಕ್ಕೆ ಕನಿಷ್ಠ ರೂ. 10.00ರ ಪ್ರಯಾಣ ದರ ಷರತ್ತಿಗೆ ಒಳಪಟ್ಟು |
| 2 | ವೇಗದೂತ | ಪ್ರತಿ ಪ್ರಯಾಣಿಕ ಕಿ.ಮೀ.ಗೆ 100.75 ಪೈಸೆ, 6.5 ಕಿ.ಮೀ. ಹಂತಕ್ಕೆ ಅಥವಾ ಅದರ ಭಾಗಾಂಶಕ್ಕೆ ಕನಿಷ್ಠ ರೂ. 10.00ರ ದರ ಷರತ್ತಿಗೆ ಒಳಪಟ್ಟು |
| 3 | ಅಲ್ಟ್ರಾಡೀಲಕ್ಸ್/ರಾಜಹಂಸ | ಪ್ರತಿ ಪ್ರಯಾಣಿಕ ಕಿ.ಮೀ.ಗೆ 145.00 ಪೈಸೆ, ಪ್ರಯಾಣ ದರ ವಿಧಿಸುವ ಒಂದು ಹಂತಕ್ಕೆ ಅಥವಾ ಅದರ ಭಾಗಾಂಶಕ್ಕೆ ಕನಿಷ್ಠ ರೂ. 20.00 ದರ ಷರತ್ತಿಗೆ ಒಳಪಟ್ಟು |
| 4 | ಎ.ಸಿ.ರಹಿತ ಸ್ಲೀಪರ್ | ಪ್ರತಿ ಪ್ರಯಾಣಿಕ ಕಿ.ಮೀ.ಗೆ 163.00 ಪೈಸೆ |
| 5 | ಎ.ಸಿ.ಕರೋನಾ ಸ್ಲೀಪರ್ | ಪ್ರತಿ ಪ್ರಯಾಣಿಕ ಕಿ.ಮೀ.ಗೆ 240.00 ಪೈಸೆ |
| 6 | ನಗರಸಾರಿಗೆ | ಪ್ರತಿ ಪ್ರಯಾಣಿಕ ಕಿ.ಮೀ.ಗೆ 78.23 ಪೈಸೆ (ಹಂತ ದೂರ 2 ಕಿ.ಮೀ.) |
| 7 | ಗ್ರಾಮಾಂತರ/ಹೊರವಲಯ | ಪ್ರತಿ ಪ್ರಯಾಣಿಕ ಕಿ.ಮೀ.ಗೆ 78.23 ಪೈಸೆ (ಹಂತ ದೂರ 2 ಕಿ.ಮೀ.) |

ಅನುಸೂಚಿ-ಇ(ಮುಂದುವರೆದಿದೆ.)

## ನಗರ, ನಗರ ಹೊರವಲಯ, ಸಾಮಾನ್ಯ ಮತ್ತು ವೇಗದೂತ ಸಾರಿಗೆ ಸೇವೆಗಳ ದರ ಪಟ್ಟಿ

| ದರ ವಿಧಿಸಲ್ಪಡುವ ಹಂತ | ನಗರಸಾರಿಗೆ/ನಗರ ಹೊರವಲಯ ಸಾರಿಗೆ ದರ(ರೂ.ಗಳಲ್ಲಿ) |
|---|---|
| 1 | 5.00 |
| 2 | 10.00 |
| 3 | 12.00 |
| 4 | 14.00 |
| 5 | 15.00 |
| 6 | 16.00 |
| 7 | 17.00 |
| 8 | 18.00 |
| 9 | 18.00 |
| 10 | 18.00 |
| 11 | 19.00 |
| 12 | 19.00 |
| 13 | 19.00 |
| 14 | 20.00 |
| 15 | 20.00 |
| 16 | 20.00 |
| 17 | 20.00 |
| 18 | 20.00 |
| 19 | 21.00 |
| 20 | 21.00 |

| ಸಾಮಾನ್ಯ ಸೇವೆಗಳು | | ವೇಗದೂತ ಸೇವೆಗಳು | |
|---|---|---|---|
| ದರ ವಿಧಿಸಲ್ಪಡುವ ಹಂತ | ಗ್ರಾಮಾಂತರ ಸಾರಿಗೆ ದರ (ರೂ.ಗಳಲ್ಲಿ) | ದರ ವಿಧಿಸಲ್ಪಡುವ ಹಂತ | ಗ್ರಾಮಾಂತರ ಸಾರಿಗೆ ದರ(ರೂ.ಗಳಲ್ಲಿ) |
| 1S | 5.00 | 1 | 10.00 |
| 1 | 10.00 | 2 | 17.00 |
| 2S | 12.00 | 3 | 28.00 |
| 2 | 15.00 | 4 | 34.00 |
| 3S | 20.00 | 5 | 37.00 |
| 3 | 25.00 | 6 | 45.00 |
| 4S | 26.00 | 7 | 50.00 |
| 4 | 28.00 | 8 | 56.00 |
| 5 | 30.00 | 9 | 60.00 |
| 6 | 34.00 | 10 | 65.00 |
| 7 | 37.00 | 11 | 70.00 |
| 8 | 42.00 | 12 | 80.00 |
| 9 | 47.00 | 13 | 90.00 |
| 10 | 50.00 | 14 | 95.00 |
| 11 | 52.00 | 15 | 100.00 |
| 12 | 55.00 | 16 | 107.00 |
| 13 | 58.00 | 17 | 112.00 |
| 14 | 60.00 | 18 | 120.00 |
| 15 | 63.00 | 19 | 125.00 |
| 16 | 65.00 | 20 | 132.00 |
| 17 | 70.00 | 21 | 139.00 |
| 18 | 71.00 | 22 | 145.00 |
| 19 | 72.00 | 23 | 152.00 |
| 20 | 73.00 | 24 | 157.00 |

ಅನುಸೂಚಿ–ಈ

## 'ಸಾಂದರ್ಭಿಕ ಕರಾರಿನ ಮೇಲೆ' ಬಸ್ ಬಾಡಿಗೆ ದರಗಳು (31–03–2021ರಂದು ಇದ್ದಂತೆ)

### ಅ) ಕಿ.ಮೀ. ಆಧಾರದ ಮೇಲೆ ದರಗಳು

1) 'ಈಶಾನ್ಯ ಕರ್ನಾಟಕ ಸಾರಿಗೆ ಬಸ್' ಆಗಿದ್ದಲ್ಲಿ, ಪ್ರತಿ ಬಸ್ಸ್‌ಗೆ ಪ್ರತಿ ದಿನಕ್ಕೆ 11,700 ರೂ.ಗಳ ಕನಿಷ್ಠ ದರಕ್ಕೊಳಪಟ್ಟು ಓಡಿದ ಪ್ರತಿ ಕಿ.ಮೀ.ಗೆ 39 ರೂ.ಗಳು, ಅಂತರರಾಜ್ಯ ಆಗಿದ್ದಲ್ಲಿ, ಓಡಿದ ಪ್ರತಿ ಕಿ.ಮೀ.ಗೆ 41 ರೂ.ಗಳು
2) 'ಸುಹಾಸ/ರಾಜಹಂಸ ಬಸ್' ಆಗಿದ್ದಲ್ಲಿ, ಪ್ರತಿ ಬಸ್ಸ್‌ಗೆ ಪ್ರತಿ ದಿನಕ್ಕೆ 12,000 ರೂ.ಗಳ ಕನಿಷ್ಠ ದರಕ್ಕೊಳಪಟ್ಟು ಓಡಿದ ಪ್ರತಿ ಕಿ.ಮೀ.ಗೆ 40 ರೂ.ಗಳು, ಅಂತರರಾಜ್ಯ ಆಗಿದ್ದಲ್ಲಿ, ಓಡಿದ ಪ್ರತಿ ಕಿ.ಮೀ.ಗೆ 45 ರೂ.ಗಳು
3) 'ಹವಾನಿಯಂತ್ರಣರಹಿತ ಬಸ್' ಆಗಿದ್ದಲ್ಲಿ, ಪ್ರತಿ ಬಸ್ಸ್‌ಗೆ ಪ್ರತಿ ದಿನಕ್ಕೆ 21,200 ರೂ.ಗಳ ಕನಿಷ್ಠ ದರಕ್ಕೊಳಪಟ್ಟು ಓಡಿದ ಪ್ರತಿ ಕಿ.ಮೀ.ಗೆ 53 ರೂ.ಗಳು, ಅಂತರರಾಜ್ಯ ಆಗಿದ್ದಲ್ಲಿ, ಓಡಿದ ಪ್ರತಿ ಕಿ.ಮೀ.ಗೆ 58 ರೂ.ಗಳು
4) 'ಹವಾನಿಯಂತ್ರಿತ ಬಸ್' ಆಗಿದ್ದಲ್ಲಿ, ಪ್ರತಿ ಬಸ್ಸ್‌ಗೆ ಪ್ರತಿ ದಿನಕ್ಕೆ 30,000 ರೂ.ಗಳ ಕನಿಷ್ಠ ದರಕ್ಕೊಳಪಟ್ಟು ಓಡಿದ ಪ್ರತಿ ಕಿ.ಮೀ.ಗೆ 75 ರೂ.ಗಳು, ಅಂತರರಾಜ್ಯ ಆಗಿದ್ದಲ್ಲಿ, ಓಡಿದ ಪ್ರತಿ ಕಿ.ಮೀ.ಗೆ 81 ರೂ.ಗಳು
5) ಪ್ರತಿ ಸಾಂದರ್ಭಿಕ ಒಪ್ಪಂದದ ಅನುಸಾರ ಪ್ರತಿ ದಿನ ಕಾರ್ಯಾಚರಣೆ ಮಾಡಬೇಕಾದ ಕನಿಷ್ಠ ದೂರ ಸಾಮಾನ್ಯ ಹಾಗೂ ವೇಗದೂತ, ರಾಜಹಂಸ/ಸುಹಾಸ್ ಸಾರಿಗೆ ಸೇವೆಗಳಿಗೆ 300 ಕಿ.ಮೀ.ಗಳು, ಮತ್ತು ಪ್ರತಿಷ್ಠಿತ ಸಾರಿಗೆ ಸೇವೆಗಳಿಗೆ 400 ಕಿ.ಮೀ.ಗಳು (ಎ/ಸಿ ಮತ್ತು ನಾನ್–ಎ/ಸಿ ಸ್ಲೀಪರ್) (ಪ್ರತಿ ಬಸ್ಸ್‌ಗೆ ರೂ. 50 ಅಪಘಾತ ಪರಿಹಾರ ನಿಧಿಗಾಗಿ ಶುಲ್ಕ ವಿಧಿಸಲಾಗುತ್ತಿದೆ)

### ಆ) ಗಂಟೆಗಳ ಆಧಾರದ ಮೇಲೆ ದರಗಳು

1) 'ಈಶಾನ್ಯ ಕರ್ನಾಟಕ ಸಾರಿಗೆ' ಬಸ್ಸ್‌ಗೆ ಪ್ರತಿ ಗಂಟೆಗೆ ಕನಿಷ್ಠ 40 ಕಿ.ಮೀ.ಗಳಿಗೆ 1560 ರೂ.ಗಳು; 40 ಕಿ.ಮೀ. ಮೀರಿದ ಪ್ರತಿ ಕಿ.ಮೀ.ಗೆ 39 ರೂ.ಗಳು
2) ಡೀಲಕ್ಸ್ / ರಾಜಹಂಸ ಬಸ್ಸ್‌ಗೆ ಪ್ರತಿ ಗಂಟೆಗೆ ಕನಿಷ್ಠ 40 ಕಿ.ಮೀ.ಗಳಿಗೆ 1600 ರೂ.ಗಳು; ಇದಕ್ಕಿಂತ ಹೆಚ್ಚಿನ ದೂರಕ್ಕೆ ಪ್ರತಿ ಕಿ.ಮೀ.ಗೆ 40 ರೂ.ಗಳು.
3) ಎ/ಸಿ ಸ್ಲೀಪರ್ ಸೇವೆಗಳಿಗೆ (01.07.2017ರಿಂದ ಅನ್ವಯಿಸುವಂತೆ) 5% ಜಿ.ಎಸ್.ಟಿ. ತೆರಿಗೆ ಶುಲ್ಕ ವಿಧಿಸಲಾಗುತ್ತಿದೆ.

### ಇ) ಶಾಲಾ / ಕಾಲೇಜು ವಿದ್ಯಾರ್ಥಿಗಳ ಪ್ರವಾಸಕ್ಕಾಗಿ ರಿಯಾಯತಿ ದರಗಳು :

ಶಾಲಾ/ಕಾಲೇಜು ವಿದ್ಯಾರ್ಥಿಗಳಿಗೆ ಪ್ರವಾಸ, ಶೈಕ್ಷಣಿಕ ಪ್ರವಾಸ ಇತ್ಯಾದಿ ಸಂದರ್ಭಗಳಲ್ಲಿ 'ಈಶಾನ್ಯ ಕರ್ನಾಟಕ ಸಾರಿಗೆ' ಬಸ್ಸ್‌ಗೆ ಪ್ರತಿ ಕಿ.ಮೀ.ಗೆ ರೂ.2/–ರಷ್ಟು ರಿಯಾಯತಿಯನ್ನು ಅಂತರರಾಜ್ಯ ಒಳಗೊಂಡಂತೆ ಒದಗಿಸಲಾಗಿದೆ.

**ಅನುಸೂಚಿ-ಉ**

**ಸವಕಳಿ**

| ಕ್ರ. ಸಂ. | ಆಸ್ತಿಯ ವರ್ಗ | ಭಾವಿಸಿಕೊಂಡ ಜೀವಮಾನ | | ವಾರ್ಷಿಕ ಅಂಶ ದರ | 2020-21ರಲ್ಲಿ ವೆಚ್ಚ (ರೂ.ಲಕ್ಷದಲ್ಲಿ) | ಪ್ರತಿ ಕಿ.ಮೀ.ಗೆ ಹೊರೆ (ಪೈಸೆಯಲ್ಲಿ) |
|---|---|---|---|---|---|---|
| | | ವರ್ಷ | ಕಿ.ಮೀ. | | | |
| ಅ | **ವಾಹನಗಳು :** | | | | | |
| | ಲೈಲ್ಯಾಂಡ್, ಟಾಟಾ ಮುಂತಾದ ವಾಹನಗಳು | 10 | 560000 | ಕಿ.ಮೀ.ಗಳ ಆಧಾರದ ಮೇಲೆ | 7832.85 | 256.19 |
| | **ಇಲಾಖಾ ವಾಹನಗಳು :** | | | | | |
| 1 | ಆಂತರಿಕ ಬಳಕೆ ಟ್ರಕ್‌ಗಳು | 6 | | ಕಿ.ಮೀ.ಗಳ ಆಧಾರದ ಮೇಲೆ | | |
| 2 | ಕಾರ್, ಸ್ಟೇಷನ್ ವ್ಯಾಗನ್, ಜೀಪ್, ಮೋಟಾರ್ ಸೈಕಲ್, ಮುಂತಾದ ಇಲಾಖಾ ವಾಹನಗಳು | | | ಮೂಲ ಬೆಲೆಯ 1/6ರಷ್ಟು | 19.17 | 0.63 |
| ಇ | **ಕಟ್ಟಡಗಳು ಮತ್ತು ಸಂಬಂಧಪಟ್ಟ ವಸ್ತುಗಳು :** | | | | | |
| 1 | ಪಕ್ಕಾ ಕಟ್ಟಡಗಳು | 40 | | ಮೂಲ ಬೆಲೆಯ ಶೇ.2.5ರಷ್ಟು | 1290.62 | 42.21 |
| 2 | ತಾತ್ಕಾಲಿಕ ಕಟ್ಟಡಗಳು ಮತ್ತು ಶೆಡ್‌ಗಳು | | | ಮೂಲ ಬೆಲೆಯ ಶೇ.2.5ರಷ್ಟು | | |
| ಈ | ಸ್ಥಾವರ ಮತ್ತು ಯಂತ್ರೋಪಕರಣಗಳು : | | | | | |
| 1 | ಹಗುರ ಮೆಕ್ಯಾನಿಕಲ್/ ಎಲೆಕ್ಟ್ರಿಕಲ್ ಉಪಕರಣಗಳು | | | ಮೂಲ ಬೆಲೆಯ ಶೇ. 20ರಷ್ಟು | 46.90 | 1.53 |
| 2 | ಭಾರಿ ಮೆಕ್ಯಾನಿಕಲ್/ ಎಲೆಕ್ಟ್ರಿಕಲ್ ಉಪಕರಣಗಳು | | | ಮೂಲ ಬೆಲೆಯ ಶೇ. 10ರಷ್ಟು | 81.26 | 2.66 |
| 3 | ಕಂಪ್ಯೂಟರ್ ಹಾರ್ಡ್‌ವೇರ್ ಮತ್ತು ಇನ್ನಿತರ ಉಪಕರಣಗಳು | | | ಮೂಲ ಬೆಲೆಯ ಶೇ. 20ರಷ್ಟು | 86.46 | 2.83 |
| ಉ | **ಇತರ ಉಪಕರಣಗಳು :** | | | | | |
| 1 | ಕಛೇರಿ ಪೀಠೋಪಕರಣಗಳು | | | ಮೂಲ ಬೆಲೆಯ ಶೇ. 10ರಷ್ಟು | 14.65 | 0.48 |
| 2 | ಟಿಕೆಟ್ ಯಂತ್ರಗಳು | | | ಮೂಲ ಬೆಲೆಯ ಶೇ. 20ರಷ್ಟು | 110.77 | 3.62 |
| 3 | ಅಗ್ನಿಶಾಮಕ ಉಪಕರಣಗಳು | | | ಮೂಲ ಬೆಲೆಯ ಶೇ. 10ರಷ್ಟು | 0.66 | 0.02 |
| 4 | ವೈದ್ಯಕೀಯ ಉಪಕರಣಗಳು | | | ಮೂಲ ಬೆಲೆಯ ಶೇ.20ರಷ್ಟು | 0.05 | 0.00 |
| 5 | ಸೌಕರ್ಯ ಉಪಕರಣಗಳು | | | ಮೂಲ ಬೆಲೆಯ ಶೇ. 10ರಷ್ಟು | 10.03 | 0.33 |
| 6 | ಛಾಯಾಚಿತ್ರ ಉಪಕರಣಗಳು | | | ಮೂಲ ಬೆಲೆಯ ಶೇ. 10ರಷ್ಟು | 2.18 | 0.07 |
| 7 | ಜರಾಕ್ಸ್ ಮತ್ತು ಫ್ಯಾಕ್ಸ್ ಯಂತ್ರಗಳು | | | ಮೂಲ ಬೆಲೆಯ ಶೇ. 10ರಷ್ಟು | 2.23 | 0.07 |
| 8 | ಇತರ ಆಸ್ತಿಗಳು | | | ಮೂಲ ಬೆಲೆಯ ಶೇ. 10ರಷ್ಟು | 3.05 | 0.10 |
| | **ಒಟ್ಟು ಸವಕಳಿ** | | | | **9500.88** | **310.75** |

# ಅನುಬಂಧಗಳು

ಅನುಬಂಧ–1

## ಅನುಸೂಚಿಗಳು ಮತ್ತು ಸಿಬ್ಬಂದಿ (31–03–2021ರಂದು ಇದ್ದಂತೆ)

| ಕ್ರ. ಸಂ. | ವಿಭಾಗ | ಅನುಸೂಚಿಗಳ ಸಂಖ್ಯೆ | | ಸಿಬ್ಬಂದಿ | | ಪ್ರತಿ ಅನುಸೂಚಿಗೆ ಸಿಬ್ಬಂದಿ ಪ್ರಮಾಣ | | ಪ್ರತಿ ವಾಹನಕ್ಕೆ ಸಿಬ್ಬಂದಿ ಪ್ರಮಾಣ | | ಪ್ರತಿ ಸಿಬ್ಬಂದಿಗೆ ದೈನಿಕ ಪರಿಣಾಮಕಾರಿ ಕಿ.ಮೀ.ಗಳು | |
|---|---|---|---|---|---|---|---|---|---|---|---|
| | | **2019-20** | **2020-21** | **2019-20** | **2020-21** | **2019-20** | **2020-21** | **2019-20** | **2020-21** | **2019-20** | **2020-21** |
| 1 | ಕಲಬುರಗಿ–1 | 417 | 397 | 1960 | 1881 | 4.70 | 4.74 | 4.07 | 3.99 | 66.95 | 41.85 |
| 2 | ಕಲಬುರಗಿ–2 | 437 | 408 | 2152 | 2084 | 4.92 | 5.11 | 4.61 | 4.58 | 66.20 | 42.09 |
| 3 | ಯಾದಗಿರಿ | 334 | 315 | 1556 | 1499 | 4.66 | 4.76 | 4.21 | 4.08 | 71.26 | 47.96 |
| 4 | ರಾಯಚೂರು | 590 | 557 | 2852 | 2733 | 4.83 | 4.91 | 4.30 | 4.36 | 69.34 | 42.01 |
| 5 | ಬೀದರ್ | 548 | 501 | 2619 | 2538 | 4.78 | 5.07 | 4.45 | 4.31 | 68.34 | 37.41 |
| 6 | ಕೊಪ್ಪಳ | 410 | 403 | 1942 | 1913 | 4.74 | 4.75 | 4.41 | 4.31 | 72.72 | 43.72 |
| 7 | ಬಳ್ಳಾರಿ | 364 | 341 | 1721 | 1614 | 4.73 | 4.73 | 4.19 | 4.07 | 65.10 | 43.29 |
| 8 | ವಿಜಯಪುರ | 701 | 670 | 3264 | 3141 | 4.66 | 4.69 | 4.19 | 4.08 | 69.88 | 46.07 |
| 9 | ಹೊಸಪೇಟೆ | 451 | 445 | 2021 | 1943 | 4.48 | 4.37 | 4.05 | 3.93 | 69.78 | 47.01 |
| | ಒಟ್ಟು /ಸರಾಸರಿ | **4252** | **4037** | **20087** | **19346** | **4.72** | **4.79** | **4.25** | **4.19** | **68.88** | **43.30** |
| 9 | ಕೇಂದ್ರ ಕಛೇರಿ ಮತ್ತು ಇತರ | | | 289 | 283 | 0.07 | 0.07 | 0.06 | 0.06 | - | - |
| | ಸಂಸ್ಥೆ | **4252** | **4037** | **20376** | **19629** | **4.79** | **4.86** | **4.31** | **4.25** | **67.91** | **42.67** |

ಅನುಬಂಧ–2

## ಘಟಕಗಳು, ಮಾರ್ಗಗಳು ಮತ್ತು ಮಾರ್ಗ ಕಿ.ಮೀ.ಗಳು (31–03–2021ರಂದು ಇದ್ದಂತೆ)

| ಕ್ರ. ಸಂ. | ವಿಭಾಗ | ಘಟಕಗಳ ಸಂಖ್ಯೆ | | ಮಾರ್ಗಗಳ ಸಂಖ್ಯೆ | | ಒಟ್ಟು ಮಾರ್ಗ ದೂರ | | ಸರಾಸರಿ ಮಾರ್ಗ ದೂರ | |
|---|---|---|---|---|---|---|---|---|---|
| | | **2019-20** | **2020-21** | **2019-20** | **2020-21** | **2019-20** | **2020-21** | **2019-20** | **2020-21** |
| 1 | ಕಲಬುರಗಿ–1 | 6 | 6 | 402 | 354 | 34162 | 32164 | 85.0 | 90.9 |
| 2 | ಕಲಬುರಗಿ–2 | 5 | 5 | 480 | 445 | 45144 | 40565 | 94.1 | 91.2 |
| 3 | ಯಾದಗಿರಿ | 4 | 4 | 413 | 359 | 35060 | 32458 | 84.9 | 90.4 |
| 4 | ರಾಯಚೂರು | 7 | 7 | 460 | 481 | 50843 | 51576 | 110.5 | 107.2 |
| 5 | ಬೀದರ್ | 6 | 6 | 333 | 315 | 32682 | 30344 | 98.1 | 96.3 |
| 6 | ಕೊಪ್ಪಳ | 5 | 5 | 519 | 549 | 39820 | 44892 | 76.7 | 81.8 |
| 7 | ಬಳ್ಳಾರಿ | 5 | 5 | 294 | 295 | 29712 | 29719 | 101.1 | 100.7 |
| 8 | ವಿಜಯಪುರ | 8 | 8 | 477 | 436 | 54262 | 49788 | 113.8 | 114.2 |
| 9 | ಹೊಸಪೇಟೆ | 6 | 6 | 412 | 407 | 44258 | 43258 | 107.4 | 106.3 |
| | ಸಂಸ್ಥೆ | **52** | **52** | **3790** | **3641** | **365943** | **354764** | **96.6** | **97.4** |

ಅನುಬಂಧ–3

## ಕಾರ್ಯಾಚರಣೆಯಾದ ಕಿ.ಮೀ.ಗಳು (ಲಕ್ಷದಲ್ಲಿ)

| ಕ್ರ. ಸಂ. | ವಿಭಾಗ | ಅನುಸೂಚಿ ಕಿ. ಮೀ.ಗಳು | | ರದ್ದು ಪಡಿಸಿದ ಕಿ.ಮೀ. ಗಳು (ಅನುಸೂಚಿ ಕಿ.ಮೀ. ಗಳಿಗೆ ಶೇ. ಪ್ರಮಾಣ) | | ಹೆಚ್ಚುವರಿ ಕಿ.ಮೀ. ಗಳು (ಶೇ. ಪ್ರಮಾಣ) | | ಪರಿಣಾಮಕಾರಿ ಕಿ.ಮೀ.ಗಳು | | ಆದಾಯರಹಿತ ಕಿ.ಮೀ.ಗಳು (ಶೇ. ಪ್ರಮಾಣ) | | ಒಟ್ಟು ಕ್ರಮಿಸಿದ ಕಿ.ಮೀ.ಗಳು | |
|---|---|---|---|---|---|---|---|---|---|---|---|---|---|
| | | 2019–20 | 2020–21 | 2019–20 | 2020–21 | 2019–20 | 2020–21 | 2019–20 | 2020–21 | 2019–20 | 2020–21 | 2019–20 | 2020–21 |
| 1 | ಕಲಬುರಗಿ–1 | 503.12 | 288.95 | 32.61<br>6.5 | 23.04<br>8.0 | 9.74<br>1.9 | 21.43<br>7.4 | 480.25 | 287.34 | 9.12<br>1.9 | 4.44<br>1.5 | 489.37 | 291.77 |
| 2 | ಕಲಬುರಗಿ–2 | 548.72 | 338.98 | 37.93<br>6.9 | 36.19<br>10.7 | 10.58<br>1.9 | 17.40<br>5.1 | 521.38 | 320.19 | 13.17<br>2.5 | 5.91<br>1.8 | 534.55 | 326.10 |
| 3 | ಯಾದಗಿರಿ | 426.31 | 265.01 | 32.40<br>7.6 | 22.75<br>8.6 | 11.92<br>2.8 | 20.17<br>7.6 | 405.83 | 262.43 | 8.18<br>2.0 | 3.74<br>1.4 | 414.01 | 266.17 |
| 4 | ರಾಯಚೂರು | 743.97 | 427.00 | 47.47<br>6.4 | 26.18<br>6.1 | 27.32<br>3.7 | 18.24<br>4.3 | 723.82 | 419.07 | 12.92<br>1.8 | 6.36<br>1.5 | 736.74 | 425.43 |
| 5 | ಬೀದರ್ | 692.98 | 370.98 | 52.80<br>7.6 | 38.02<br>10.2 | 14.90<br>2.2 | 13.57<br>3.7 | 655.08 | 346.53 | 16.70<br>2.5 | 6.00<br>1.7 | 671.78 | 352.53 |
| 6 | ಕೊಪ್ಪಳ | 533.38 | 326.47 | 26.00<br>4.9 | 27.54<br>8.4 | 9.47<br>1.8 | 6.35<br>1.9 | 516.85 | 305.28 | 6.17<br>1.2 | 4.21<br>1.4 | 523.02 | 309.49 |
| 7 | ಬಳ್ಳಾರಿ | 431.31 | 271.31 | 28.34<br>6.6 | 24.19<br>8.9 | 7.06<br>1.6 | 7.93<br>2.9 | 410.03 | 255.05 | 11.84<br>2.9 | 5.42<br>2.1 | 421.87 | 260.47 |
| 8 | ವಿಜಯಪುರ | 859.33 | 543.86 | 53.67<br>6.2 | 37.11<br>6.8 | 29.15<br>3.4 | 21.39<br>3.9 | 834.81 | 528.14 | 18.37<br>2.2 | 14.23<br>2.7 | 853.18 | 542.37 |
| 9 | ಹೊಸಪೇಟೆ | 523.94 | 347.42 | 17.34<br>3.3 | 21.14<br>6.1 | 9.52<br>1.8 | 7.14<br>2.1 | 516.12 | 333.42 | 8.77<br>1.7 | 4.90<br>1.5 | 524.89 | 338.32 |
| | **ಸಂಸ್ಥೆ** | **5263.06** | **3179.98** | **328.56<br>6.2** | **256.16<br>8.1** | **129.66<br>2.5** | **133.62<br>4.2** | **5064.17** | **3057.44** | **105.24<br>2.1** | **55.21<br>1.8** | **5169.41** | **3112.65** |

ಅನುಬಂಧ–4

## ಸರಾಸರಿ ವಾಹನ ಬಳಕೆ (ಕಿ.ಮೀ.ಗಳು)
## (ಪರಿಣಾಮಕಾರಿ ಕಿ.ಮೀ. ಮೇಲೆ)

| ಕ್ರ ಸಂ. | ವಿಭಾಗ | ವಾಹನ ಬಳಕೆ ಸರಾಸರಿ ಓಡಾಡಿದ ವಾಹನಗಳ ಮೇಲೆ | | ವಾಹನ ಬಳಕೆ ಸರಾಸರಿ ವಾಹನ ಬಲದ ಮೇಲೆ | |
|---|---|---|---|---|---|
| | | **2019-20** | **2020-21** | **2019-20** | **2020-21** |
| 1 | ಕಲಬುರಗಿ–1 | 330 | 313 | 270 | 165 |
| 2 | ಕಲಬುರಗಿ–2 | 342 | 316 | 301 | 189 |
| 3 | ಯಾದಗಿರಿ | 345 | 326 | 298 | 195 |
| 4 | ರಾಯಚೂರು | 349 | 327 | 299 | 179 |
| 5 | ಬೀದರ್ | 346 | 307 | 294 | 160 |
| 6 | ಕೊಪ್ಪಳ | 349 | 320 | 313 | 188 |
| 7 | ಬಳ್ಳಾರಿ | 328 | 303 | 273 | 171 |
| 8 | ವಿಜಯಪುರ | 348 | 310 | 289 | 187 |
| 9 | ಹೊಸಪೇಟೆ | 344 | 309 | 300 | 183 |
| | ಸಂಸ್ಥೆ | **343** | **314** | **293** | **180** |

ಅನುಬಂಧ–5

## ಸೇವೆಯ ಗುಣಮಟ್ಟ

| ಕ್ರ. ಸಂ. | ವಿಭಾಗ | ಅವಘಡ ಪ್ರಮಾಣ (ಪ್ರತಿ 10,000 ಕಿ.ಮೀ. ಗಳಿಗೆ) | | ಅಪಘಾತ ಪ್ರಮಾಣ (ಪ್ರತಿ ಲಕ್ಷ ಕಿ.ಮೀ. ಗಳಿಗೆ) | | ಸಮಯ ಪಾಲನೆ (ಶೇ.) | | | | ಪ್ರತಿದಿನ ಸಂಚರಿಸಿದ ಒಟ್ಟು ಪ್ರಯಾಣಿಕರ ಸಂಖ್ಯೆ (ಲಕ್ಷದಲ್ಲಿ) | | ಸಾರ್ವಜನಿಕ ದೂರು ಪ್ರಮಾಣ (ಒಂದು ಲಕ್ಷ ಪ್ರಯಾಣಿಕರಿಗೆ) | |
|---|---|---|---|---|---|---|---|---|---|---|---|---|---|
| | | | | | | ನಿರ್ಗಮನ | | ಆಗಮನ | | | | | |
| | | **19-20** | **20-21** | **19-20** | **20-21** | **19-20** | **20-21** | **19-20** | **20-21** | **19-20** | **20-21** | **19-20** | **20-21** |
| 1 | ಕಲಬುರಗಿ–1 | 0.07 | 0.07 | 0.09 | 0.06 | 89.8 | 90.1 | 90.1 | 90.1 | 1.04 | 0.59 | 0.07 | 0.24 |
| 2 | ಕಲಬುರಗಿ–2 | 0.07 | 0.03 | 0.06 | 0.06 | 85.3 | 96.0 | 90.1 | 95.9 | 1.06 | 0.54 | 0.05 | 0.01 |
| 3 | ಯಾದಗಿರಿ | 0.08 | 0.03 | 0.06 | 0.06 | 90.3 | 96.8 | 96.1 | 97.0 | 0.94 | 0.39 | 0.24 | 0.70 |
| 4 | ರಾಯಚೂರು | 0.05 | 0.02 | 0.06 | 0.05 | 96.2 | 96.8 | 97.3 | 98.6 | 1.90 | 0.65 | 0.07 | 0.05 |
| 5 | ಬೀದರ್ | 0.08 | 0.04 | 0.05 | 0.05 | 88.8 | 92.7 | 95.8 | 94.8 | 1.99 | 0.62 | 0.03 | 0.13 |
| 6 | ಕೊಪ್ಪಳ | 0.04 | 0.01 | 0.06 | 0.06 | 96.0 | 92.9 | 97.4 | 98.8 | 1.25 | 0.52 | 0.11 | 0.14 |
| 7 | ಬಳ್ಳಾರಿ | 0.05 | 0.04 | 0.08 | 0.08 | 88.8 | 91.4 | 90.7 | 92.4 | 1.33 | 0.42 | 0.04 | 0.05 |
| 8 | ವಿಜಯಪುರ | 0.03 | 0.02 | 0.05 | 0.06 | 85.5 | 89.0 | 91.0 | 91.7 | 2.76 | 0.89 | 0.05 | 0.08 |
| 9 | ಹೊಸಪೇಟೆ | 0.05 | 0.02 | 0.09 | 0.05 | 97.9 | 96.8 | 97.8 | 96.9 | 1.31 | 0.62 | 0.11 | 0.15 |
| | ಸಂಸ್ಥೆ | **0.06** | **0.03** | **0.06** | **0.06** | **91.0** | **93.6** | **94.0** | **95.1** | **13.58** | **5.24** | **0.08** | **0.15** |

ಅನುಬಂಧ-6

# ವಾಹನಗಳ ಸಂಖ್ಯೆ ಮತ್ತು ಸಮೂಹ ಬಳಕೆ(ಶೇ.)

| ಕ್ರ. ಸಂ. | ವಿಭಾಗ | ವಾಹನಗಳ ಸಂಖ್ಯೆ (31 ಮಾರ್ಚ್‌ರಂದು ಇದ್ದಂತೆ) | | | | | | | | | | | | | | ಸರಾಸರಿ ಹೊಂದಿದ ವಾಹನಗಳು | | ಪ್ರತಿ ದಿನ ಸರಾಸರಿ ಕಾರ್ಯಾಚರಿಸಿದ ವಾಹನಗಳು | | ದುರಸ್ತಿಗಾಗಿ ನಿಂತ ವಾಹನಗಳು | | ಸರಾಸರಿ ಹೆಚ್ಚುವರಿ ವಾಹನಗಳು | | ದುರಸ್ತಿಗಾಗಿ ನಿಂತ ವಾಹನಗಳ ಶೇ. ಪ್ರಮಾಣ | | ವಾಹನ ಸಮೂಹ ಬಳಕೆ (ಶೇ.) | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | 2020 | | | | | | | 2021 | | | | | | | | | | | | | | | | | | |
| | | ಲೇ. | ಟಾ. | ಐ | ಕ | ಮಿ | ಮಿ.ಜೆ | ಒಟ್ಟು | ಲೇ. | ಟಾ. | ಐ | ಕ | ಮಿ | ಮಿ.ಜೆ | ಒಟ್ಟು | 19-20 | 20-21 | 19-20 | 20-21 | 19-20 | 20-21 | 19-20 | 20-21 | 19-20 | 20-21 | 19-20 | 20-21 |
| 1 | ಕಲಬುರಗಿ-1 | 281 | 88 | 47 | 8 | 0 | 57 | **481** | 273 | 87 | 47 | 8 | 57 | 0 | **472** | 485.2 | 476.2 | 398.2 | 251.5 | 26.8 | 25.9 | 60.2 | 198.8 | 5.5 | 5.4 | 82.1 | 52.8 |
| 2 | ಕಲಬುರಗಿ-2 | 293 | 95 | 79 | 0 | 0 | 0 | **467** | 291 | 85 | 79 | 0 | 0 | 0 | **455** | 473.4 | 462.1 | 417.1 | 277.2 | 17.5 | 13.1 | 38.8 | 171.9 | 3.7 | 2.8 | 88.1 | 60.0 |
| 3 | ಯಾದಗಿರಿ | 227 | 84 | 48 | 0 | 0 | 11 | **370** | 224 | 84 | 48 | 0 | 11 | 0 | **367** | 372.6 | 366.9 | 321.8 | 220.8 | 25.4 | 24.7 | 25.4 | 121.4 | 6.8 | 6.7 | 86.4 | 60.2 |
| 4 | ರಾಯಚೂರು | 352 | 172 | 90 | 4 | 0 | 45 | **663** | 344 | 144 | 90 | 4 | 45 | 0 | **627** | 661.2 | 638.7 | 566.0 | 351.0 | 32.7 | 24.7 | 62.5 | 263.0 | 5.0 | 3.9 | 85.6 | 55.0 |
| 5 | ಬೀದರ್ | 311 | 146 | 106 | 0 | 4 | 21 | **588** | 311 | 147 | 106 | 0 | 21 | 4 | **589** | 609.4 | 590.4 | 517.5 | 309.3 | 27.9 | 17.7 | 63.9 | 263.4 | 4.6 | 3.0 | 84.9 | 52.4 |
| 6 | ಕೊಪ್ಪಳ | 274 | 48 | 84 | 4 | 0 | 30 | **440** | 274 | 52 | 84 | 4 | 30 | 0 | **444** | 450.7 | 442.6 | 404.3 | 261.1 | 14.2 | 12.1 | 32.2 | 169.4 | 3.2 | 2.7 | 89.7 | 59.0 |
| 7 | ಬಳ್ಳಾರಿ | 190 | 110 | 68 | 7 | 0 | 36 | **411** | 185 | 102 | 68 | 6 | 36 | 0 | **397** | 409.7 | 406.9 | 341.7 | 230.7 | 23.5 | 31.4 | 44.6 | 144.8 | 5.7 | 7.7 | 83.4 | 56.7 |
| 8 | ವಿಜಯಪುರ | 499 | 137 | 108 | 0 | 0 | 35 | **779** | 499 | 128 | 108 | 0 | 35 | 0 | **770** | 790.4 | 771.9 | 654.7 | 467.2 | 17.0 | 17.9 | 118.7 | 286.7 | 2.1 | 2.3 | 82.8 | 60.5 |
| 9 | ಹೊಸಪೇಟೆ | 261 | 131 | 74 | 3 | 0 | 30 | **499** | 261 | 128 | 74 | 2 | 30 | 0 | **495** | 470.0 | 498.2 | 410.4 | 295.4 | 20.2 | 21.3 | 39.4 | 181.5 | 4.3 | 4.3 | 87.3 | 59.3 |
| 10 | ಪ್ರಾ.ಕಾ.ಯಾದಗಿರಿ | | 31 | | | | | **31** | | | | | | | **0** | | | | | | | | | | | | |
| | **ಸಂಸ್ಥೆ** | **2688** | **1042** | **704** | **26** | **4** | **265** | **4729** | **2662** | **957** | **704** | **24** | **265** | **4** | **4616** | **4722.5** | **4653.7** | **4031.6** | **2664.3** | **205.3** | **188.8** | **485.6** | **1800.7** | **4.3** | **4.1** | **85.4** | **57.2** |

ವಿ.ಸೂ : ಲೇ.: ಲೈಲ್ಯಾಂಡ್ ಟಾ.: ಟಾಟಾ ಐ : ಐಶರ್ ಕ. : ಕರೋನಾ ಮಿ : ಮಿಡಿ ಮಿ.ಜೆ : ಮಿನಿ ಜೆಎನ್.ನರ್ಮ್

ಅನುಬಂಧ–7

## ನಿರ್ವಹಣೆ–ಇಂಧನ ಮತ್ತು ಟಯರ್

| ಕ್ರ ಸಂ. | ವಿಭಾಗ | ಕೆ.ಎಂ.ಪಿ.ಎಲ್. | | | | ಸರಾಸರಿ ಟಯರ್ ಜೀವಮಾನ (ಕಿ.ಮೀ.ಗಳಲ್ಲಿ) | | | | ಒಟ್ಟು ಟಯರ್ ಜೀವಮಾನ (ಕಿ.ಮೀ.ಗಳಲ್ಲಿ) | | ಟಯರ್ ಸಂಸ್ಕರಣಾ ಪ್ರಮಾಣ | | ಸರಾಸರಿ ವಾಹನ ವಯೋಮಾನ (ಕಿ.ಮೀ.ಗಳಲ್ಲಿ) | |
|---|---|---|---|---|---|---|---|---|---|---|---|---|---|---|---|
| | | ಇಂಧನ | | ಇಂಜಿನ್ ಎಣ್ಣೆ (ಟಾಪ್ಅಪ್) | | ಹೊಸ | | ಮರುಒಪ್ಪಗೊಳಿಸಿದ | | | | | | | |
| | | 19-20 | 20-21 | 19-20 | 20-21 | 19-20 | 20-21 | 19-20 | 20-21 | 19-20 | 20-21 | 19-20 | 20-21 | 19-20 | 20-21 |
| 1 | ಕಲಬುರಗಿ–1 | 5.08 | 5.38 | 10977 | 1415 | 86135 | 93166 | 40712 | 45172 | 147483 | 175695 | 1.51 | 1.83 | 592132 | 640418 |
| 2 | ಕಲಬುರಗಿ–2 | 5.28 | 5.46 | 17812 | 1099 | 101098 | 101719 | 37084 | 38700 | 158142 | 170478 | 1.54 | 1.78 | 684213 | 727431 |
| 3 | ಯಾದಗಿರಿ | 5.16 | 5.42 | 9038 | 1604 | 81368 | 80487 | 37679 | 45491 | 140637 | 150002 | 1.57 | 1.53 | 712596 | 756418 |
| 4 | ರಾಯಚೂರು | 5.14 | 5.38 | 15429 | 1293 | 86627 | 99019 | 46299 | 60577 | 158706 | 196867 | 1.56 | 1.62 | 602894 | 656481 |
| 5 | ಬೀದರ್ | 5.22 | 5.36 | 17234 | 897 | 101130 | 106487 | 34256 | 42208 | 155257 | 184432 | 1.58 | 1.85 | 714160 | 771574 |
| 6 | ಕೊಪ್ಪಳ | 5.32 | 5.59 | 26455 | 899 | 110809 | 102754 | 70691 | 68844 | 215003 | 211584 | 1.47 | 1.58 | 592412 | 656054 |
| 7 | ಬಳ್ಳಾರಿ | 5.18 | 5.41 | 20885 | 326 | 88091 | 85780 | 52806 | 55069 | 173238 | 182584 | 1.61 | 1.76 | 624076 | 652922 |
| 8 | ವಿಜಯಪುರ | 5.45 | 5.68 | 35125 | 1150 | 98047 | 92543 | 39443 | 41755 | 173211 | 180223 | 1.91 | 2.10 | 687155 | 764714 |
| 9 | ಹೊಸಪೇಟೆ | 5.23 | 5.42 | 32361 | 633 | 91618 | 100464 | 43434 | 54665 | 171197 | 192527 | 1.83 | 1.68 | 642055 | 709767 |
| | ಸಂಸ್ಥೆ | **5.24** | **5.47** | **17974** | **9316** | **91291** | **94415** | **43314** | **48936** | **161305** | **179560** | **1.62** | **1.74** | **650436** | **705605** |

**ಅನುಬಂಧ-8**

# ಲೆಕ್ಕ-ಪತ್ರ ಕಾರ್ಯನೀತಿಗಳು

ಹೈದ್ರಾಬಾದ ಕರ್ನಾಟಕ ಹಿಂದುಳಿದ ಪ್ರದೇಶದಲ್ಲಿ ಅತ್ಯುತ್ತಮ ಸಾರಿಗೆ ಸೌಲಭ್ಯ, ಪ್ರಾಮಾಣಿಕ ಸೇವೆಯನ್ನು ಒದಗಿಸುವ ಧ್ಯೇಯೋದ್ಧೇಶದಿಂದ ಸರ್ಕಾರ ಚಿಂತನೆ ಮಾಡಿ ಉತ್ತಮ ಸಾರಿಗೆ ವ್ಯವಸ್ಥೆಯನ್ನು ಒದಗಿಸುವ ಸಲುವಾಗಿ ಅವಶ್ಯವಿರುವ ಉತ್ತಮ ಮಾರ್ಗದರ್ಶನದಿಂದ ಕೂಡಿದ ಪ್ರತ್ಯೇಕ ಆಡಳಿತ ವ್ಯವಸ್ಥೆ ಜಾರಿಗೆ ತರುವ ಹಿನ್ನೆಲೆಯಲ್ಲಿ ಈ.ಕ.ರ.ಸಾ.ನಿಗಮವು 1950ರ ಆರ್.ಟಿ.ಸಿ. ಕಾಯ್ದೆಯ ಪರಿಚ್ಛೇದ 3ರ ಅಡಿಯಲ್ಲಿ ಸರ್ಕಾರದ ಆದೇಶ ಸಂ. ಹೆಚ್.ಟಿ.ಡಿ.65.ಟಿ.ಆರ್.ಎ.99 (1) ದಿನಾಂಕ 04.08.2000 ರನ್ವಯ ದಿನಾಂಕ 15.08.2000 ರಂದು ಅಸ್ತಿತ್ವಕ್ಕೆ ಬಂದು ದಿನಾಂಕ 01.10.2000 ರಿಂದ ಸ್ವತಂತ್ರ ಪ್ರತಿ ಪತ್ತಿಯುಳ್ಳ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ. ಸರ್ಕಾರದ ಆದೇಶ ಸಂ.ಸಾರಿಇ:119:ವಾಈಮ:2008 ದಿ.19.11.2009 ರನ್ವಯ ವಾ.ಕ.ರ.ಸಾ.ಸಂಸ್ಥೆಯ ಆಡಳಿತ ವ್ಯಾಪ್ತಿಯಲ್ಲಿರುವ ವಿಜಯಪುರ ವಿಭಾಗವನ್ನು ಈ.ಕ.ರ.ಸಾ.ಸಂಸ್ಥೆಯ ಆಡಳಿತ ವ್ಯಾಪ್ತಿಗೆ ದಿ.19.11.2009 ರಿಂದ ಜಾರಿಗೆ ಬರುವಂತೆ ವರ್ಗಾಯಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ ಟಿಡಿ/30/ಸಾಸಂಬಿ/2019 ದಿನಾಂಕ 17.07.2019ರನ್ವಯ ಕ.ರಾ.ರ.ಸಾ.ನಿಗಮದ ವ್ಯಾಪ್ತಿಯಲ್ಲಿರುವ ಹರಪ್ಪನಹಳ್ಳಿ ಘಟಕವನ್ನು ಈ.ಕ.ರ.ಸಾ.ಸಂಸ್ಥೆಯ ಆಡಳಿತ ವ್ಯಾಪ್ತಿಗೆ ದಿನಾಂಕ 1.11.2019 ರಿಂದ ಜಾರಿಗೆ ಬರುವಂತೆ ವರ್ಗಾಯಿಸಲಾಗಿದೆ. ದಿನಾಂಕ 15.08.2000 ರಂದು ಚಾಲ್ತಿಯಲ್ಲಿರುವ ಎಲ್ಲಾ ಸುತ್ತೋಲೆ, ಸಾಮಾನ್ಯ ಸ್ಥಾಯಿ ಆದೇಶಗಳು, ಯೋಜನೆ ಕಾನೂನು ಹಾಗೂ ನಿಯಮಾವಳಿಗಳನ್ನು ಯಥಾವತ್ತಾಗಿ ಅಳವಡಿಸಿಕೊಂಡಿದೆ. ಆದ್ದರಿಂದ ಕ.ರಾ.ರ.ಸಾ.ನಿಗಮದಲ್ಲಿರುವ ಇ.ಆರ್.ಪಿ. ಪದ್ಧತಿಯನ್ನು ಹೊರತು ಪಡಿಸಿ ಲೆಕ್ಕ-ಪತ್ರ ಪದ್ಧತಿಗಳನ್ನು ಈ.ಕ.ರ.ಸಾ. ಸಂಸ್ಥೆಯಲ್ಲಿ ಅನುಸರಿಸಲಾಗಿದೆ.

1. ವಿಭಾಗಗಳು ತಮ್ಮ ಪ್ರತಿಯೊಂದು ಆದಾಯ-ವೆಚ್ಚಗಳ ವಹಿವಾಟುಗಳ ಮತ್ತು ಹೊಂದಾಣಿಕೆ ನೊಂದಣಿಗಳ ಮೂಲಕ ವಿಭಾಗದಲ್ಲಿರುವ ಪ್ರಾಫಿಟ್ ಪ್ಲಸ್ ವರ್ಷನ್ 8.1 ಮೈಕ್ರೋಸಾಫ್ಟ್ ಎಕ್ಸೆಸ್ ಪ್ಯಾಕೇಜ್ ಆಧಾರದ ಮೇಲೆ ಲೆಕ್ಕಪತ್ರಗಳನ್ನು ಇತ್ಯರ್ಥಗೊಳಿಸಿ ಕಳುಹಿಸಿರುವ ಕ್ರೂಢೀಕೃತ ಪಟ್ಟಿಗಳ ಆಧಾರದ ಮೇಲೆ 2020-21ನೇ ಸಾಲಿನ ಲಾಭ ನಷ್ಟ ಖಾತೆ ಮತ್ತು ಅಢಾವೆ ಪತ್ರಗಳನ್ನು ಸಂಸ್ಥೆಯು ತಯಾರಿಸಿರುತ್ತದೆ.
2. ಸಂಸ್ಥೆಯು ವಾಣಿಜ್ಯ ಪದ್ಧತಿಯ ಲೆಕ್ಕ ಅನುಸರಿಸಿದ್ದು, ತಿಳಿಸಿದ ಕೆಲವು ನಿರ್ದಿಷ್ಟ ಸಂದರ್ಭಗಳನ್ನು ಹೊರತುಪಡಿಸಿ, ಅಕ್ರೂಯೆಲ್ (ಸಂಚಯ) ಆಧಾರದ ಮೇಲೆ ಆದಾಯ ಮತ್ತು ವೆಚ್ಚಗಳನ್ನು ಗುರುತಿಸಲಾಗಿದೆ.
3. ಸ್ಥಿರಾಸ್ತಿಗಳನ್ನು ಐತಿಹಾಸಿಕ ಮೂಲ ಬೆಲೆಗಳ ಆಧಾರದ ಮೇಲೆ ತೋರಿಸಲಾಗಿದೆ. ಈ ಬೆಲೆಗಳನ್ನು ರೂಪಾಯಿ ಅಪಮೌಲ್ಯಕ್ಕೆ ಅನುಗುಣವಾಗಿ ಬದಲಾಯಿಸಿರುವುದಿಲ್ಲ.
4. ವಾಹನಗಳ ಪುನಶ್ಚೇತನ ಖರ್ಚನ್ನು ಆ ವಾಹನಗಳ ದುರಸ್ಥಿ ಮತ್ತು ನಿರ್ವಹಣೆ ಖರ್ಚು ಎಂದು ಪರಿಗಣಿಸಲಾಗಿದೆ.
5. ಸಂಸ್ಥೆಯು ಅನುದಾನ ಹಾಗೂ ವಿವಿಧ ರಿಯಾಯಿತಿ ಬಸ್ ಪಾಸುಗಳ ಮರುಪಾವತಿ ಮೊತ್ತವನ್ನು ನಗದು ರೂಪದಲ್ಲಿ ಸ್ವೀಕರಿಸಿದಾಗ ಲೆಕ್ಕಪತ್ರಗಳಲ್ಲಿ ಅಳವಡಿಸಿಕೊಳ್ಳಲಾಗುತ್ತದೆ.
6.

ಅ) ವಾಹನಗಳ ಜೀವಾವಧಿ 5.60 ಲಕ್ಷ ಕಿ.ಮಿ.ಗಳೆಂದು ಪರಿಗಣಿಸಿ ವಾಹನಗಳು ವಾಸ್ತವಿಕವಾಗಿ ಕ್ರಮಿಸಿದ ಕಿ.ಮಿ. ಆಧಾರದ ಮೇಲೆ ಅವುಗಳ ಸವಕಳಿ ಖರ್ಚು ಲೆಕ್ಕ ಹಾಕಲಾಗಿದೆ. ಈ ಪದ್ಧತಿಯಿಂದ ವಾಹನಗಳ ಸವಕಳಿಯನ್ನು ಅವುಗಳ ವಾಸ್ತವಿಕ ಕಿ.ಮಿ.ಗಳ ಕಾರ್ಯಾಚರಣೆಗೆ ಅನುಗುಣವಾಗಿ ಸವಕಳಿ ಖರ್ಚು ಆಗುವುದು ನ್ಯಾಯಯುತವಾಗಿರುತ್ತದೆ.

ಆ) ಸರ್ಕಾರದ ಆದೇಶ ಸಂಖ್ಯೆ ಸಾರಿಇ:4:ಸಾಸಂಯೋ:2007 ದಿನಾಂಕ 27.03.2007 ರಂತೆ ಸಂಸ್ಥೆಯಲ್ಲಿನ ವೋಲ್ವೋ/ಕರೋನಾ ವಾಹನಗಳ ಜೀವಾವಧಿ 10.00 ಲಕ್ಷ ಕಿ.ಮಿ. ಎಂದು ಪರಿಗಣಿಸಿ ಆ ವಾಹನಗಳ ವಾಸ್ತವಿಕವಾಗಿ ಕ್ರಮಿಸಿದ ಕಿ.ಮಿ. ಆಧಾರದಲ್ಲಿ ಸವಕಳಿ ಖರ್ಚು ಲೆಕ್ಕ ಹಾಕಲಾಗಿದೆ.

ಇ) ಇತರೆ ಸ್ಥಿರಾಸ್ತಿಗಳ ಸವಕಳಿಯನ್ನು ಸ್ಟ್ರೇಟ್‌ಲೈನ್ ಪದ್ಧತಿಯಲ್ಲಿ ಅಳವಡಿಸಲಾಗಿದ್ದು ದರಗಳು ಈ ಕೆಳಗಿನಂತಿರುತ್ತವೆ. ಹಾಲಿ ವರ್ಷದಲ್ಲಿ ಅಳವಡಿಸಿಕೊಳ್ಳಲಾದ/ಕಾರ್ಯಚರಣೆಯಲ್ಲಿ ತರಲಾದ ಆಸ್ತಿಗಳ ಮೇಲೆ, ಅವುಗಳನ್ನು

ಕಾರ್ಯಚರಣೆಗೆ ತಂದ ಮೊದಲ ವರ್ಷದಲ್ಲಿ ಅರ್ಧ ವರ್ಷದ ದರದಲ್ಲಿ ಮತ್ತು ಆ ಆಸ್ತಿಗಳ ಪೂರ್ಣ ಸವಕಳಿ ನಿಧಿ ಆಕರಿಸುವ ಕೊನೆಯ ವರ್ಷದಲ್ಲಿ ಅರ್ಧವರ್ಷದ ದರದಲ್ಲಿ ಸವಕಳಿ ನಿಧಿ ಲೆಕ್ಕ ಹಾಕಲಾಗುತ್ತಿದೆ.

| | | | |
|---|---|---|---|
| ಕಟ್ಟಡ | 2.5% | ಕಂಪ್ಯೂಟರ್ ಹಾರ್ಡ್‌ವೇರ | 20% |
| ಭಾರಿಗಾತ್ರದ ಯಂತ್ರೋಪಕರಣಗಳು | 10% | ದವಾಖಾನೆ ಉಪಕರಣಗಳು | 20% |
| ಹಗುರು ಪ್ರಮಾಣದ ಯಂತ್ರೋಪಕರಣಗಳು | 20% | ಪಿಠೋಪಕರಣಗಳು ಹಾಗೂ ಇತರೆ | 10% |
| ಇ.ಟಿ.ಎಂ ಯಂತ್ರೋಪಕರಣಗಳು | 20% | | |

ಈ ಮೊದಲು ಇ.ಟಿ.ಎಂ ಯಂತ್ರಗಳನ್ನು ಭಾರಿಗಾತ್ರದ ಯಂತ್ರೋಪಕರಣಗಳ ಅಡಿಯಲ್ಲಿ ಗಣನೆಗೆ ತೆಗೆದುಕೊಂಡು ಸವಕಳಿಯನ್ನು ಶೇ. 10 ರಷ್ಟು ಲೆಕ್ಕಾಚಾರ ಮಾಡಲಾಗುತ್ತಿತ್ತು, 2017–18ನೇ ಸಾಲಿನಿಂದ ಇ.ಟಿ.ಎಂ ಯಂತ್ರಗಳ ಮೇಲೆ ಸರ್ಕಾರಿ ಲೆಕ್ಕಪರಿಶೋಧಕರು ತಿಳಿಸಿರುವಂತೆ ಶೇ. 20 ರಷ್ಟು ಸವಕಳಿಯನ್ನು ಲೆಕ್ಕಾಚಾರ ಮಾಡಲಾಗುತ್ತಿದೆ.

ಈ) ಇಲಾಖಾ ವಾಹನಗಳ ಜೀವಾವಧಿ 6 ವರ್ಷ ಎಂದು ಅಂದಾಜಿಸಿ, ಸವಕಳಿ ವೆಚ್ಚವನ್ನು ಸಮಪ್ರಮಾಣದಲ್ಲಿ ಲೆಕ್ಕಹಾಕಲಾಗಿರುತ್ತದೆ. ವಾಹನಗಳನ್ನು ಎಪ್ರಿಲ್ 1ನೇ ದಿನಾಂಕದಂದು ಖರೀದಿಸದೇ ಇರುವುದರಿಂದ ವಾಹನ ಸವಕಳಿ ವೆಚ್ಚವನ್ನು ಆರಂಭದ ವರ್ಷಕ್ಕೆ ಅರ್ಧ ವರ್ಷ ಅಥವಾ ಶೇ.50 ರಷ್ಟು ಎಂದು ಪರಿಗಣಿಸಲಾಗುತ್ತಿದೆ.

**7.** ಮೋಟಾರು ವಾಹನ ತೆರಿಗೆಯನ್ನು, ಮಹಾರಾಷ್ಟ್ರ ರಾಜ್ಯದ ವ್ಯಾಪ್ತಿಯ ಸಾರಿಗೆ ಆದಾಯವನ್ನು ಹೊರತುಪಡಿಸಿ ಒಟ್ಟು ಸಾರಿಗೆ ಆದಾಯದ ಶೇಕಡಾ 5% (+11% ರಷ್ಟು ತೆರಿಗೆ ಮೇಲಿನ ಸೆಸ್) ರಂತೆ ಲೆಕ್ಕ ಹಾಕಿ ಹೊಣೆಗಾರಿಕೆಯನ್ನು ಅಳವಡಿಸಿಕೊಳ್ಳಲಾಗಿದೆ. ಸರ್ಕಾರವು ತನ್ನ ಆದೇಶದ ಸಂಖ್ಯೆ HTD/65/TRA/99 dated 20.03.2001 ರಲ್ಲಿ ಸಂಸ್ಥೆಯು ಅನುಭವಿಸಿದ ನಗದು ನಷ್ಟ ಮೊತ್ತಕ್ಕೆ ಮೀರದಂತೆ ಮೋಟಾರು ವಾಹನ ತೆರಿಗೆಯನ್ನು ಉಳಿಸಿಕೊಳ್ಳಲು ಆದೇಶಿಸಿರುತ್ತದೆ. ಸರ್ಕಾರದ ಆದೇಶ ಸಂ. ಸಾರಿಇ/100/ಸಾಸಂಈ/2007 ದಿನಾಂಕ 03.11.2009 ರಂತೆ ಮೋಟಾರು ವಾಹನ ತೆರಿಗೆಯ ಸೌಲಭ್ಯವನ್ನು ಒಂದು ವರ್ಷ ಮತ್ತು ಸರ್ಕಾರದ ಆದೇಶ ಸಂ. ಸಾರಿಇ/07/ಸಾಸಂಈ/2010 (ಭಾಗ–2) ದಿನಾಂಕ 06.11.2012 ರಂತೆ ಮುಂದಿನ 5 ವರ್ಷಗಳಿಗೆ ಮುಂದುವರಿಸಲಾಗಿದೆ. ಸಂಸ್ಥೆಗೆ ಮೋಟಾರು ವಾಹನ ತೆರಿಗೆ ಪಾವತಿಯಿಂದ ವಿನಾಯಿತಿ ಇದ್ದರೂ ಸಹ, ಸಂಸ್ಥೆಗೆ ಮರುಪಾವತಿಸುವ ರಿಯಾಯಿತಿ ಪಾಸುಗಳ ವೆಚ್ಚದಲ್ಲಿ ಮೋಟಾರು ವಾಹನ ತೆರಿಗೆ ಮೊತ್ತವನ್ನು ಸರ್ಕಾರವು ಕಡಿತಮಾಡಿಕೊಳ್ಳುತ್ತಿದೆ. ಸಂಸ್ಥೆಯು 31.03.2021 ರಂದು ಒಟ್ಟು ರೂ. 519.30 ಕೋಟಿ ಮೋಟಾರು ವಾಹನ ತೆರಿಗೆ ಮೊತ್ತವನ್ನು ಸಂಸ್ಥೆಯಲ್ಲಿಯೇ ಉಳಿಸಿಕೊಂಡಿರುತ್ತದೆ.

**8.**

ಅ) ಸಂಸ್ಥೆಯ ವಿಭಾಗಗಳಲ್ಲಿ ವಾರ್ಷಿಕ ಲೆಕ್ಕ–ಪತ್ರದ ಕೊನೆಯ ದಿನಾಂಕದಂದು ಸ್ವೀಕೃತಿಗೊಂಡು, ಪರಿವೀಕ್ಷಣೆ ದೃಢೀಕರಣ ಹೊಂದಿರದ ಉಗ್ರಾಣ ಸಾಮಗ್ರಿಗಳನ್ನು ಲೆಕ್ಕ–ಪತ್ರದಲ್ಲಿ ಅಳವಡಿಸಿಕೊಂಡಿರುವುದಿಲ್ಲ.

ಆ) ಪ್ರಾದೇಶಿಕ ಕಾರ್ಯಾಗಾರಗಳಲ್ಲಿ ಸಾಮಗ್ರಿಗಳನ್ನು ನಿಕಟ ಅವಶ್ಯಕತೆಗಳಿಗನುಸಾರವಾಗಿ ಪಡೆಯುತ್ತಿದ್ದು ಹಾಗೆ ಪಡೆದಂತಹ ಸಾಮಗ್ರಿಗಳಿಗೆ ಖರ್ಚು ತೋರಿಸಲಾಗುತ್ತಿದೆ. ಆದ್ದರಿಂದ ವರ್ಷದ ಕೊನೆಗೆ ಕಾರ್ಯ ಸ್ಥಳದಲ್ಲಿ ಇದ್ದಂತಹ ಸಾಮಗ್ರಿಗಳನ್ನು ಅಖೈರು ದಾಸ್ತಾನಿನಲ್ಲಿ ಲೆಕ್ಕ ಹಾಕಲಾಗಿರುವುದಿಲ್ಲ.

**9.** ಮೋಟಾರು ವಾಹನ ಕಾಯ್ದೆ 1988 ಉಪನಿಯಮ 140 ರನ್ವಯ ಹಿಂದಿನ ನಾಲ್ಕು ವರ್ಷಗಳ ಅವಧಿಗೆ ಪಾವತಿಸಬೇಕಾದ ತಪ್ಪ ಭಾದ್ಯತೆಯ ಹೊಣೆಗಾರಿಕೆಯನ್ನು ಕನಿಷ್ಟ ಪರಿಹಾರದ ಮೊತ್ತವಾಗಿ ಹೊಣೆಗಾರಿಕೆಯನ್ನು ಲೆಕ್ಕಪತ್ರಗಳಲ್ಲಿ ಅಳವಡಿಸಿಕೊಳ್ಳಲಾಗಿದೆ. ಅದಕ್ಕೂ ಮುಂಚಿನ ಹೊಣೆಗಾರಿಕೆಗಳನ್ನು ವಾಸ್ತವಿಕ ಪಾವತಿ ಆಧಾರದಲ್ಲಿ ಲೆಕ್ಕಾಚಾರ ಮಾಡಲಾಗುತ್ತಿದೆ.

**10.** ನಿಷ್ಕ್ರೀಯಗೊಳಿಸಿದ ವಾಹನಗಳ ಮಾರಾಟ ಮತ್ತು ಹಳೆಯ ನಿಷ್ಕ್ರೀಯ ಸಾಮಾನುಗಳ ಮಾರಾಟದಿಂದ ಬಂದ ಆದಾಯವನ್ನು ಅಂತಹ ನಿಷ್ಕ್ರೀಯಗೊಳಿಸಿದ ವಾಹನ/ಸಾಮಾನುಗಳನ್ನು ಟೆಂಡರ್‌ದಾರರು ವಾಸ್ತವಿಕವಾಗಿ ಪಡೆದ ನಂತರವೇ ಲೆಕ್ಕಚಾರದಲ್ಲಿ ಅಳವಡಿಸಿಕೊಳ್ಳಲಾಗಿದೆ.

**11**. ಅಕೌಂಟ್ಸ್ ಮ್ಯಾನುವಲ್ ಪ್ಯಾರಾ 240 ರ ಪ್ರಕಾರ ಸಂಸ್ಥೆಯಲ್ಲಿ ಮೂರು ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಬಾಕಿ ಉಳಿದಿರುವ ಠೇವಣಿಗಳನ್ನು ಇತರೆ ಆದಾಯ ಎಂದು ಪರಿಗಣಿಸಲಾಗಿರುತ್ತದೆ. ಇನ್ನುಳಿದಂತೆ ಮೂರು ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಚಾಲ್ತಿಯಲ್ಲಿರುವ ಒಪ್ಪಂದಗಳ ಠೇವಣಿ ಮೊತ್ತವನ್ನು ಇತರೆ ಆದಾಯ ಎಂದು ಪರಿಗಣಿಸದೇ ಠೇವಣಿಯಲ್ಲಿ ಮುಂದುವರೆಸಲಾಗಿದೆ.

**12**. ಕಾಮಗಾರಿ ಕೆಲಸಗಳ ಬಿಲ್ಲುಗಳನ್ನು ದೃಢೀಕರಿಸಿದ ಆಧಾರದಲ್ಲಿ ಹೊಣೆಗಾರಿಕೆಯನ್ನು ಅಳವಡಿಸಿದೆ.

**13**. ಎಂ.ವಿ.ಸಿ ಪ್ರಕರಣಗಳ ಮೇಲಿನ ಬಡ್ಡಿಯ ಲೆಕ್ಕಚಾರವನ್ನು ಮಾಡಿ ಆದೇಶವಾದ ಮೊತ್ತವನ್ನು ಅಳವಡಿಸಕೊಳ್ಳಲು ಪ್ರಾಧಿಕಾರವು ಅನುಮೋದನೆಯನ್ನು ನೀಡಿದ ಮಾಹೆಯಲ್ಲಿಯೆ ಸಂಸ್ಥೆಯ ಲೆಕ್ಕಪತ್ರಗಳಲ್ಲಿ ಅಳವಡಿಸಿಕೊಳ್ಳಲಾಗಿರುತ್ತದೆ. ಸಂಸ್ಥೆಯು ಎದುರಿಸುತ್ತಿರುವ ಹಣಕಾಸಿನ ಬಿಕ್ಕಟ್ಟಿನಿಂದಾಗಿ ಸಂಸ್ಥೆಯ ಹಣದ ಹರಿವನ್ನು ಅವಲಂಬಿಸಿ ಪಾವತಿಸಲಾಗುತ್ತಿರುವುದರಿಂದ ಮೂಲ ಬಡ್ಡಿಗಿಂತ ಹೆಚ್ಚಿನ ವ್ಯತ್ಯಾಸ ಬಡ್ಡಿ ಮೊತ್ತವನ್ನು ನ್ಯಾಯಾಲಯಕ್ಕೆ ಪಾವತಿಮಾಡಲಾದ ತಿಂಗಳಲ್ಲಿ ಲೆಕ್ಕಪತ್ರಗಳಲ್ಲಿ ನಮೂದಿಸಲಾಗುವುದು. ಆದ್ದರಿಂದ ವರ್ಷಾಂತ್ಯಕ್ಕೆ ಎಂ.ವಿ.ಸಿ ಪ್ರಕರಣಗಳ ಮೇಲಿನ ಹೆಚ್ಚುವರಿ ಬಡ್ಡಿಗೆ ಲೆಕ್ಕಪತ್ರಗಳಿಗೆ ಪ್ರತ್ಯೇಕವಾಗಿ ಪ್ರೊವಿಶನ್ ಮಾಡಿರುವುದಿಲ್ಲ.

**14**. ಮುಂದೂಡಲ್ಪಟ್ಟ ವೆಚ್ಚಗಳನ್ನು ಈ ಕೆಳಕಂಡಂತೆ ಲೆಕ್ಕ–ಪತ್ರಗಳಲ್ಲಿ ಅಳವಡಿಸಿಕೊಳ್ಳಲಾಗಿದೆ.

ಅ) ವಾಹನಗಳಿಗೆ ಜೋಡಿಸಲ್ಪಟ್ಟ ಮೇಜರ್ ಅಸೆಂಬ್ಲಿಗಳನ್ನು 5 ವರ್ಷಗಳಲ್ಲಿ ಅಳವಡಿಸಿಕೊಳ್ಳಲಾಗಿದೆ. (ಮೊದಲ ವರ್ಷದಲ್ಲಿ ಅರ್ಧ ವರ್ಷದ ದರದಲ್ಲಿ ಮತ್ತು 6ನೇ ವರ್ಷದಲ್ಲಿ ಅರ್ಧ ವರ್ಷದ ದರದಲ್ಲಿ ಲೆಕ್ಕ ಹಾಕಲಾಗಿದೆ)

ಆ) ಡಾಂಬರೀಕರಣ, ರಿ ಚಿಪ್ ಕಾರ್ಪೆಟಿಂಗ್ ಮುಂತಾದ ಕಾಮಗಾರಿ ಕೆಲಸಗಳನ್ನು 3 ವರ್ಷಗಳಲ್ಲಿ ಅಳವಡಿಸಿಕೊಳ್ಳಲಾಗಿದೆ.

**15**.

ಅ) ನೌಕರರ ಉಪದಾನ ಪಾವತಿಯನ್ನು ಸುತ್ತೋಲೆ ಸಂಖ್ಯೆ 4/99 ದಿನಾಂಕ:30–04–1999 ರನ್ವಯ ರೆಗ್ಯೂಲೇಶ್‌ನ ಅಥವಾ ಉಪದಾನ ಕಾಯ್ದೆ ಯಾವುದು ನೌಕರರಿಗೆ ಅನುಕೂಲವೊ ಅದರಂತೆ ಪಾವತಿಸಲಾಗುತ್ತಿದೆ. ದಿನಾಂಕ:10–04–2002 ನಂತರ ನೇಮಕಾತಿ ಹೊಂದಿದ ನೌಕರರಿಗೆ ಉಪದಾನ ಕಾಯ್ದೆ 1972 ರನ್ವಯ ಉಪದಾನವನ್ನು ಪಾವತಿಸಲಾಗುತ್ತಿದೆ.

ಆ) 2020–21ನೇ ಸಾಲಿನಲ್ಲಿ ವಾಸ್ತವಿಕ ಉಪದಾನದ ಹೊಣೆಗಾರಿಕೆ ರೂ.54.76 ಕೋಟಿಗಳನ್ನು ಉಪದಾನ ನಿಧಿ ಎಂದು ಲೆಕ್ಕ ಪತ್ರದಲ್ಲಿ ಅಳವಡಿಸಿಕೊಳ್ಳಲಾಗಿದ್ದು, 2020–21ನೇ ಸಾಲಿನಲ್ಲಿ ನಿವೃತ್ತಿ ಹೊಂದಿದ ನೌಕರರಿಗೆ ರೂ. 65.39 ಕೋಟಿ ಮೊತ್ತವನ್ನು ಉಪದಾನ ನಿಧಿಯಿಂದ ಪಾವತಿಸಲಾಗಿದೆ. ಸಂಸ್ಥೆಯು ಪ್ರತ್ಯೇಕ ನೌಕರರ ಉಪದಾನ ನ್ಯಾಸ ಮಂಡಳಿ ರಚಿಸಲು ಮಂಡಳಿ ಅನುಮೋದನೆ ಪಡೆದಿದ್ದು, ಸದರಿ ಕಾರ್ಯ ಪ್ರಗತಿಯಲ್ಲಿದೆ.

**16**. 31.03.2021 ರಂತೆ ರೂ. 18.59 ಕೋಟಿ ಮೊತ್ತವು ರಜೆ ನಗದೀಕರಣ ನಿಧಿಯಡಿಯಲ್ಲಿದ್ದು, ಸದರಿ ಮೊತ್ತವನ್ನು ನಿವೃತ್ತಿ ಹೊಂದಿದ ನೌಕರರಿಗೆ ರಜೆ ನಗದೀಕರಣ ಮೊತ್ತವನ್ನು ಪಾವತಿಸಲು ಉಪಯೋಗಿಸಿಕೊಳ್ಳಲಾಗುವುದು.

**17**. ದಿನಾಂಕ 31–03–2021 ರಲ್ಲಿ ಇದ್ದಂತೆ ಬಿಡಿ ಭಾಗಗಳ ಹಾಗೂ ಇತರೆ ಸರಕು, ಪಿಠೋಪಕರಣಗಳ ಭೌತಿಕ ತಪಾಸಣೆ ಮಾಡಲಾಗಿದೆ.

**18**. **ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ಸ್ಥಳಿಯ ಸರ್ಕಾರದ ಅಂಗ ಸಂಸ್ಥೆಗಳಿಂದ ಪಡೆದ ವಿವಿಧ ಅನುದಾನಗಳನ್ನು ಈ ಕೆಳಗಿನಂತೆ ಲೆಕ್ಕ ಹಾಕಲಾಗುತ್ತಿದೆ.**

ಅ) ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದಿಂದ ಜೆ–ನರ್ಮ್ ಯೋಜನೆಯಡಿ ಬಿಡುಗಡೆಯಾದ ಅನುದಾನ, ಡಾ॥ ನಂಜುಂಡಪ್ಪನವರ ವರದಿಯನ್ವಯ ಹಿಂದುಳಿದ ತಾಲೂಕುಗಳ ಮೂಲ ಸೌಲಭ್ಯಗಳ ಅಭಿವೃದ್ಧಿಯಡಿ ರಾಜ್ಯ ಸರ್ಕಾರದಿಂದ ನೀಡಲಾದ ಅನುದಾನವನ್ನು ಮತ್ತು ನಗರ ಭೂ ಸಾರಿಗೆ ನಿರ್ದೇಶನಾಲಯದಿಂದ ನಗರ ಸಾರಿಗೆ ನಿಧಿಯಿಂದ ನೀಡಲಾದ ಅನುದಾನವನ್ನು, ಆ ಅನುದಾನದಿಂದ ಬಂಡವಾಳೀಕರಿಸಿದ ಸಾಲಿನಿಂದ ಅಕೌಂಟಿಂಗ್ ಸ್ಟ್ಯಾಂಡರ್ಡ್–12ರಂತೆ ಮೀಸಲು ನಿಧಿಗಳು ಮತ್ತು ಇತರೆ ನಿಧಿಗಳ ಅಡಿಯಲ್ಲಿ ಲೆಕ್ಕಾಚಾರ ಮಾಡಲಾಗಿದೆ.

ಆ) ಹಗರಿಬೊಮ್ಮನಹಳ್ಳಿಯಲ್ಲಿ ಚಾಲಕರ ತರಬೇತಿ ಕೇಂದ್ರಕ್ಕಾಗಿ ಕೇಂದ್ರ ಸರ್ಕಾರದಿಂದ ನೀಡಲಾದ ಅನುದಾನ ಬಂಡವಾಳೀಕರಿಸಿದ ಸಾಲಿನಿಂದ ಅಕೌಂಟಿಂಗ್ ಸ್ಟ್ಯಾಂಡರ್ಡ್–12ರಂತೆ ಮೀಸಲು ನಿಧಿಗಳು ಮತ್ತು ಇತರೆ ನಿಧಿಗಳ ಅಡಿಯಲ್ಲಿ ಲೆಕ್ಕಾಚಾರ ಮಾಡಲಾಗಿದೆ.

ಇ) ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ ಪಡೆದ ಅನುದಾನದಿಂದ ಪೂರ್ಣಗೊಳಿಸಿದ ಆಸ್ತಿಗಳ ಸವಕಳಿ ನಿಧಿಯನ್ನು ಅಕೌಂಟಿಂಗ್ ಸ್ಟ್ಯಾಂಡರ್ಡ್–12ರಂತೆ ಮೀಸಲು ನಿಧಿಗಳು ಮತ್ತು ಇತರೆ ನಿಧಿಗಳ ಅಡಿಯಲ್ಲಿ ಲೆಕ್ಕಾಚಾರ ಮಾಡಲಾಗಿದೆ.

ಈ) ಸಂಸ್ಥೆಯು ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯ ಅನುದಾನದಲ್ಲಿ ಹೊಸ ಬಸ್ಸುಗಳನ್ನು ಪಡೆದಿದ್ದು, ಸದರಿ ಮೊತ್ತವನ್ನು ಅಕೌಂಟಿಂಗ್ ಸ್ಟ್ಯಾಂಡರ್ಡ್–12ರಂತೆ ಮೀಸಲು ನಿಧಿಗಳು ಮತ್ತು ಇತರೆ ನಿಧಿಗಳ ಅಡಿಯಲ್ಲಿ ಲೆಕ್ಕಾಚಾರ ಮಾಡಲಾಗಿದೆ.

ಉ) ವಿವಿಧ ಸಣ್ಣ ಪುಟ್ಟ ಕಾಮಗಾರಿಗಳ ಬಂಡವಾಳ ವೆಚ್ಚಕ್ಕಾಗಿ ಲೋಕಸಭೆ, ವಿಧಾನಸಭೆ ಮತ್ತು ವಿಧಾನ ಪರಿಷತ್ತು ಸದಸ್ಯರು ಅವರಿಂದ ಪಡೆದ ಅನುದಾನ ಮೊತ್ತವನ್ನು ಆಯಾ ನಿಗದಿತ ಕಾಮಗಾರಿಗಳಿಗಾಗಿ ಉಪಯೋಗಿಸಲಾಗಿದೆ. (ಈ ಮೊತ್ತವು ಕಾಮಗಾರಿಯ ಒಟ್ಟು ವೆಚ್ಚಕ್ಕೆ ಹೋಲಿಸಿದಾಗ ಸ್ವಲ್ಪ ಪ್ರಮಾಣದಾಗಿದ್ದರಿಂದ ಇದನ್ನು ಅನುದಾನವೆಂದು ಲೆಕ್ಕಚಾರ ಮಾಡಿರುವುದಿಲ್ಲ.)

ಊ) ನಿರ್ದಿಷ್ಟ ಆಸ್ತಿಗಳ ಅಳವಡಿಕೆಗಾಗಿ ಸರ್ಕಾರದಿಂದ ಮತ್ತು ಇತರೆ ಸರ್ಕಾರಿ ಸಂಸ್ಥೆಗಳಿಂದ ಪಡೆದ ಅನುದಾನವನ್ನು ಅಕೌಂಟಿಂಗ್ ಸ್ಟ್ಯಾಂಡರ್ಡ–12ರನ್ವಯ ಲೆಕ್ಕಾಚಾರ ಮಾಡಲಾಗಿದೆ. ಈ ಅನುದಾನದಿಂದ ಅಳವಡಿಸಲಾದ ಆಸ್ತಿಗಳನ್ನು ಅವುಗಳು ಮೂಲ ಮೌಲ್ಯದಲ್ಲಿ ಪ್ರತಿಬಿಂಬಿಸಲಾಗಿದೆ ಮತ್ತು ಈ ಆಸ್ತಿಗಳ ಮೇಲಿನ ಸವಕಳಿಯನ್ನು ಲಾಭ ಮತ್ತು ನಷ್ಟದ ಲೆಕ್ಕಕ್ಕೆ ಖರ್ಚು ಎಂದು ಪರಿಗಣಿಸಲಾಗಿದೆ.

**19**. ವರ್ಷಾಂತ್ಯಕ್ಕೆ ಸಂಸ್ಥೆಯಲ್ಲಿದ್ದ ಸಾಮಾಗ್ರಿ ಮತ್ತು ಸರಕುಗಳನ್ನು ಸರಾಸರಿ ಬೆಲೆಯ ಆಧಾರದ ಮೇಲೆ ಮೌಲ್ಯಮಾಪಕ ಮಾಡಿದ್ದು, ಉಪಯುಕ್ತ ಸರಕಿನ ಮೊತ್ತ 21.33 ಕೋಟಿಗಳು ಇರುತ್ತದೆ.

**20**. ಪತ್ರ ಸಂಖ್ಯೆ KST/Co/P3/HSD/19/2020-21 Dated 05.04.2021 ರ ಪ್ರಕಾರ ಇಂಧನದ ಶುಲ್ಕನ್ನು ಆರ್ಥಿಕ ವರ್ಷದ ಕೊನೆಯ ದಿನದಂದು ಜಾರಿಯಲ್ಲಿದ್ದ ದರಗಳ ಆಧಾರದ ಮೇಲೆ ಲೆಕ್ಕಾಚಾರ ಲೆಕ್ಕಪತ್ರಗಳನ್ನು ಅಳವಡಿಸಿಕೊಳ್ಳಲಾಗಿದೆ.

